ಸಂಪುಟ: 22, ಸಂಚಿಕೆ: 163, ಪುಟಗಳು: 8, ಭಾನುವಾರ, 23 ಮಾರ್ಚ್ 2025 RNI NO. KARKAN/2002/08054
epaper: www.sanjemugilu.com



ಸುದ್ದಿಗಳ ಹೊನಲು

# ಸಂಜೆ ಮುಗಿಲು

ನೇರ ಸಾರಥ್ಯದಲ್ಲಿ...

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ
ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ
₹3

ಸುಭಾಷಿತ

ಸಾಹಿತ್ಯದ ಕೆಲಸವೆಂದರೆ ಮನುಷ್ಯನ ಅಂತರಾಳಕ್ಕೆ ಪ್ರವೇಶ ದೊರಕಿಸಿಕೊಡುವುದು, ಪ್ರೀತಿ, ಅನುಕಂಪ, ಕರುಣೆಯನ್ನು ಹುಟ್ಟಿಸುವುದು. । ಎಸ್.ಎಲ್.ಭೈರಪ್ಪ

## ಪಂಚಾಂಗ

(ಭಾನುವಾರ 23 ಮಾರ್ಚ್-2025)

- ಶ್ರೀಕ್ರೋಧಿನಾಮ ಸಂವತ್ಸರ,
- ಉತ್ತರಾಯಣ, ಶಿಶಿರ ಋತು,
- ಫಾಲ್ಗುಣ ಮಾಸ, ಕೃಷ್ಣ ಪಕ್ಷ,
- ನವಮಿ, ಮೂಲ ನಕ್ಷತ್ರ
- ರಾಹುಕಾಲ: 04:59 PM 06 : 30 PM
- ಗುಳಿಕಕಾಲ: 03:28 PM04 : 59 PM
- ಯಮಗಂಡಕಾಲ: 12:27 PM 01 : 58 PM

ದಶಪ್ರಮತಿ ಮುದ್ರಣಾಲಯ
dashapramathi mudranalaya
PRE-PRESS PRINTERS
We Undertake Printing of Newspapers | Tabloids | Magazines
Contact: +91 9483589085 | e-mail: dashapramathimudranalaya@gmail.com

## ಸಂಕ್ಷಿಪ್ತ ಸುದ್ದಿ

### 17 ಹಲ್ಲುಗಳನ್ನ ಕಳೆದುಕೊಂಡಿದ್ದಕ್ಕೆ ಮನನೊಂದು ಆತ್ಮಹತ್ಯೆ

**ಚಿಕ್ಕಮಗಳೂರು:** ಅಪಘಾತದಲ್ಲಿ 17 ಹಲ್ಲುಗಳನ್ನ ಕಳೆದುಕೊಂಡಿದ್ದಕ್ಕೆ ಮನನೊಂದು ಯುವಕ ಆತ್ಮಹತ್ಯೆಗೆ ಶರಣಾಗಿರೋ ಘಟನೆ ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲೂಕಿನ ಭುವನಕೋಟೆ ಸಮೀಪದ ಸಾಲುಮರ ಗ್ರಾಮದಲ್ಲಿ ನಡೆದಿದೆ.



ಮೃತನನ್ನ ವಿಘ್ನೇಶ್ (18) ಎಂದು ಗುರುತಿಸಲಾಗಿದೆ. ಮೃತ ಬಾಲಕ ಕೊಪ್ಪ ಪಟ್ಟಣದ ಐಟಿಐ ಕಾಲೇಜಿನಲ್ಲಿ ಮೊದಲ ವರ್ಷದ ಐಟಿಐ ಒದುತ್ತಿದ್ದ. ಹಲ್ಲುಗಳನ್ನ ಕಳೆದುಕೊಂಡಿದ್ದಕ್ಕೆ ಮನನೊಂದು ಮನೆಯಲ್ಲಿ ಯಾರೂ ಇಲ್ಲದ ವೇಳೆ ನೇಣುಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಪುಟ 2

### ಈ ಹಳ್ಳಿಯಲ್ಲಿ ಮದುವೆಯಾಗಿ 7 ದಿನಗಳವರೆಗೆ ಬೆತ್ತಲಾಗಿರಬೇಕಂತೆ ಮಹಿಳೆಯರು



**ಹಿಮಾಚಲ ಪ್ರದೇಶ:** ಭಾರತದ ಬೇರೆ ಬೇರೆ ರಾಜ್ಯಗಳ ಬೇರೆ ಬೇರೆ ಸಮುದಾಯಗಳಲ್ಲಿ ವಿಭಿನ್ನ ಬಗೆಯ ಸಂಪ್ರದಾಯಗಳು ಚಾಲ್ತಿಯಲ್ಲಿವೆ. ಕೆಲವು ಸಾಮಾನ್ಯವಾಗಿದ್ದರೆ ಇನ್ನೂ ಕೆಲವು ಅಚ್ಚರಿಗೊಳಿಸುವಂತಿರುತ್ತದೆ. ಭಾರತೀಯ ವಿವಾಹಗಳು ಧರ್ಮ, ಸಮುದಾಯ ಮತ್ತು ಪ್ರದೇಶದ ಆಧಾರದ ಮೇಲೆ ಬದಲಾಗುವ ಆಚರಣೆಗಳು ಮತ್ತು ಸಂಪ್ರದಾಯಗಳಿಂದ ಸಮೃದ್ಧವಾಗಿವೆ. ಭಾರತೀಯ ವಿವಾಹಗಳಲ್ಲಿಯೂ ಅನೇಕ ವಿಚಿತ್ರ ಸಂಪ್ರದಾಯಗಳಿವೆ. ಅಂಥದ್ದೊಂದು ಆಚರಣೆ ಹಿಮಾಚಲ ಪ್ರದೇಶದ ಹಳ್ಳಿಯಲ್ಲಿದೆ. ಅಲ್ಲಿ ವಧು ಮದುವೆಯ ನಂತರ ವಾರಗಳವರೆಗೆ ಬಟ್ಟೆಯನ್ನು ಧರಿಸುವುದಿಲ್ಲ. ಈ ಕುರಿತು ಇಂಡಿಯಾ.ಕಾಂ ವರದಿ ಮಾಡಿದೆ.

ಈ ವಿಶಿಷ್ಟ ಸಂಪ್ರದಾಯವನ್ನು ಹಿಮಾಚಲ ಪ್ರದೇಶದ ಮಣಿಕರಣ್ ಕಣಿವೆಯಲ್ಲಿರುವ ಪಿನಿ ಗ್ರಾಮದಲ್ಲಿ ನಡೆಸಲಾಗುತ್ತದೆ. ಪುಟ 2

25 ವರ್ಷ ಸಂಸದೀಯ ಕ್ಷೇತ್ರ ಪುನಾರಚನೆ ಮಾಡಬೇಡಿ

# ಸ್ಟಾಲಿನ್ ನೇತೃತ್ವದ ಸಮಿತಿಯಿಂದ ನಿರ್ಣಯ ಅಂಗೀಕಾರ

**ಚೆನ್ನೈ:** ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೇತೃತ್ವದ ಜಂಟಿ ಕ್ರಿಯಾ ಸಮಿತಿ (ಜೆಎಸಿ) ಇಂದು ಚೆನ್ನೈನಲ್ಲಿ ಸಭೆ ಸೇರಿ, ಪಾರದರ್ಶಕತೆ ಇಲ್ಲದ ಯಾವುದೇ ಸೀಮಾ ನಿರ್ಣಯ ಪ್ರಕ್ರಿಯೆಯನ್ನು ವಿರೋಧಿಸುವ ನಿರ್ಣಯವನ್ನು ಅಂಗೀಕರಿಸಿತು. ಕೇಂದ್ರದಿಂದ 'ಪಾರದರ್ಶಕತೆ ಮತ್ತು ಸ್ಪಷ್ಟತೆಯ ಕೊರತೆ' ಬಗ್ಗೆ ಕಳವಳ ವ್ಯಕ್ತಪಡಿಸಿದ ಎಂ.ಕೆ ಸ್ಟಾಲಿನ್ ನೇತೃತ್ವದ ಜೆಎಸಿ ಕ್ಷೇತ್ರ ಪುನರ್ವಿಂಗಡಣೆ ಕುರಿತು ನಿರ್ಣಯ ಅಂಗೀಕರಿಸಿದೆ. ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯ ಕುರಿತು ನಡೆಯುತ್ತಿರುವ ಚರ್ಚೆಗಳ ನಡುವೆ, ತಮಿಳುನಾಡು ಸಿಎಂ ಎಂ.ಕೆ ಸ್ಟಾಲಿನ್ ನೇತೃತ್ವದ ಜಂಟಿ ಕ್ರಿಯಾ ಸಮಿತಿ (ಜೆಎಸಿ) ಇಂದು ಈ ವಿಷಯದ ಕುರಿತು ನಿರ್ಣಯ ಅಂಗೀಕರಿಸಿದೆ. ಕೇಂದ್ರ ಸರ್ಕಾರದಿಂದ 'ಪಾರದರ್ಶಕತೆ ಮತ್ತು ಸ್ಪಷ್ಟತೆಯ ಕೊರತೆ' ಬಗ್ಗೆ ಈ ಸಮಿತಿ ಕಳವಳ ವ್ಯಕ್ತಪಡಿಸಿದೆ.




ಯಾವುದೇ ಕ್ಷೇತ್ರ ಪುನರ್ವಿಂಗಡಣೆ ಪ್ರಕ್ರಿಯೆಯ ಬಗ್ಗೆ ಕೇಂದ್ರದಿಂದ ಪಾರದರ್ಶಕತೆಯನ್ನು ಕೋರಿರುವ ಜೆಎಸಿ, 1971ರ ಜನಗಣತಿಯ ಜನಸಂಖ್ಯೆಯ ಆಧಾರದ ಮೇಲೆ ಸಂಸದೀಯ ಕ್ಷೇತ್ರಗಳ ಮೇಲಿನ ಸ್ಥಗಿತಗೊಳಿಸುವಿಕೆಯನ್ನು ಮುಂದಿನ 25 ವರ್ಷಗಳವರೆಗೆ ವಿಸ್ತರಿಸುವಂತೆ ಮನವಿ ಮಾಡಿದೆ. ಮುಂಬರುವ ಸೀಮಾ ನಿರ್ಣಯವು ತಮ್ಮ ರಾಜಕೀಯ ಮತ್ತು ಆರ್ಥಿಕ ಭವಿಷ್ಯದ ಮೇಲೆ ಬೀರುವ ಪರಿಣಾಮದ ಬಗ್ಗೆ ಕಳವಳ ವ್ಯಕ್ತಪಡಿಸಿದ ಈ ಸಭೆಯಲ್ಲಿ ಕರ್ನಾಟಕದ ಡಿಸಿಎಂ ಡಿಕೆ ಶಿವಕುಮಾರ್, ಕೇರಳ ಸಿಎಂ ಪಿಣರಾಯಿ ವಿಜಯನ್ ಸೇರಿದಂತೆ ಹಲವು ರಾಜ್ಯಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಹಿಂದಿನ ಸಾಂವಿಧಾನಿಕ ತಿದ್ದುಪಡಿಗಳ ಹಿಂದಿನ ಶಾಸಕಾಂಗ ಉದ್ದೇಶವನ್ನು ಎತ್ತಿ ತೋರಿಸುತ್ತಾ, ಪುಟ 2

# ತಪ್ಪಿನ ಅರಿವಾಗಿ ಮನವಿ ಮಾಡಲಿ

## ಅಮಾನತು ಅವಧಿ ಕಡಿಮೆ ಮಾಡುತ್ತೇನೆ ಸ್ಪೀಕರ್ ಯು.ಟಿ ಖಾದರ್

**ಬೆಂಗಳೂರು:** ತಪ್ಪಿನ ಅರಿವಾಗಿ ಮನವಿ ಮಾಡಲಿ. ನಂತರ 18 ಬಿಜೆಪಿ ಶಾಸಕರ ಆರು ತಿಂಗಳ ಅಮಾನತು ಅವಧಿಯನ್ನು ಕಡಿಮೆ ಮಾಡುತ್ತೇನೆಂದು ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಅವರು ಶನಿವಾರ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹರಿದ ಕಾಗದಗಳನ್ನು ನನ್ನ ಮೇಲೆ ಎಸೆದು ಕುರ್ಚಿಗೆ ಅಗೌರವ ತೋರಿದ್ದರು. ಅವರ ಕುರ್ಚಿಯ ಮೇಲೆ ಹತ್ತಿ ನಿಂತು ಕರ್ತವ್ಯ ನಿರ್ವಹಿಸದಂತೆ ಅಡ್ಡಿಪಡಿಸಿದ್ದರು. ಅಶಿಸ್ತಿನ ವರ್ತನೆ ಮತ್ತು ಸ್ಪೀಕರ್ ಕುರ್ಚಿಗೆ ಅಗೌರವ ತೋರಿದ್ದಕ್ಕಾಗಿ ಶಾಸಕರನ್ನು ಸದನದಿಂದ ಅಮಾನತುಗೊಳಿಸಲಾಗಿದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳ ನಿಯಮ 348 ರ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ. ಶಾಸಕರ ಮೇಲಿನ ಕೋಪ ಅಥವಾ ದ್ವೇಷದಿಂದ ಅವರನ್ನು ಅಮಾನತುಪಡಿಸಿಲ್ಲ. 18 ಶಾಸಕರು ಮನವಿ ಮಾಡಿಕೊಂಡರೆ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇನೆ. ಶಾಸಕರ ಅಮಾನತ್ತಿನ ನಿರ್ಧಾರದಲ್ಲಿ ಯಾವ ಒತ್ತಡವೂ ಇರಲಿಲ್ಲ ಎಂದು ಸ್ಪಷ್ಟಪಡಿಸಿದರು.



ಜನಪ್ರತಿನಿಧಿಗಳು ಜನರಿಂದ ಆಯ್ಕೆಯಾಗಿರುತ್ತಾರೆ ಎಂಬುದು ಗೊತ್ತಿದೆ. ಅದಕ್ಕೆ ತಕ್ಕಂತೆ ಶಾಸಕರು ನಡೆದುಕೊಳ್ಳಬೇಕಲ್ಲವೇ? ಬಿಜೆಪಿ ಶಾಸಕರು ಎರಡನೇ ಬಾರಿ ಈ ರೀತಿ ನಡೆದುಕೊಂಡಿರುವುದು. ಸಚಿವರ ಹನಿಟ್ರ್ಯಾಪ್ ಸಂಬಂಧ ಸದನದಲ್ಲಿ ಉಂಟಾದ ಗದ್ದಲದಿಂದ ಸದನದ ಪೀಠದ ಆದೇಶವನ್ನು ಲೆಕ್ಕಿಸದೆ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡಿ ಅಶಿಸ್ತಿನಿಂದ, ಅಗೌರವದಿಂದ ನಡೆದುಕೊಂಡಿದ್ದರಿಂದ ಆರು ತಿಂಗಳ ಅವಧಿಗೆ ಅಮಾನತುಪಡಿಸಲಾಗಿದೆ. ಸದಸ್ಯರು ಮುಂದೆ ಈ ರೀತಿಯ ವರ್ತಿಸದಿರಲು ಇದು ಎಚ್ಚರಿಕೆ ಗಂಟೆಯಾಗಿದೆ.

ತಾವು ತಪ್ಪು ಮಾಡಿದ್ದೇವೆ ಎಂಬ ಭಾವನೆಯಾದರೂ ಅವರಿಗೆ ಬರಬೇಕಿತ್ತಲ್ಲವೇ? ಸ್ವಲ್ಪವಾದರೂ ತಮ್ಮ ತಪ್ಪಿನ ಅರಿವು ಇರಬೇಕಿತ್ತಲ್ಲವೇ? ಮತ್ತೆ ಕಲಾಪ ಪ್ರಾರಂಭವಾದ ನಂತರವೂ ಅದೇ ವರ್ತನೆ ಮುಂದುವರಿಸಿದರು. ಸದನದಲ್ಲಿ ಹೀಗೆ ಮಾಡುವ ಶಾಸಕರು ಮುಂದೆ ಜಿಲ್ಲಾಮಟ್ಟದ ಸಭೆಗಳಲ್ಲೂ ಇದೇ ರೀತಿ ವರ್ತಿಸಿದರೆ ಹೇಗೆ?

ಕಾನೂನು ಹೋರಾಟ ಮಾಡುವುದು ಶಾಸಕರಿಗೆ ಬಿಟ್ಟ ವಿಚಾರ. ಈಗ ಆರು ತಿಂಗಳ ಅವಧಿಗೆ ಅಮಾನತ್ತಾಗಿದೆ. ಇದೇ ರೀತಿ ಮುಂದುವರಿದರೆ ಮುಂದೆ ಒಂದು ವರ್ಷ ಅಮಾನತ್ತಾಗಬೇಕಾಗುತ್ತದೆ ಎಂಬುದು ಅರ್ಥವಾಗಬೇಕು. ಪುಟ 2

# ಮೀನು ಕದ್ದ ಮಹಿಳೆಗೆ ಹಲ್ಲೆ

## ಪ್ರಚೋದನಕಾರಿ ಹೇಳಿಕೆ ಹೇಳಿದ ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ವಿರುದ್ಧ ಪ್ರಕರಣ ದಾಖಲು

**ಉಡುಪಿ:** ಮಲ್ಪೆ ಬಂದರಿನಲ್ಲಿ ಶನಿವಾರ ಮಲ್ಪೆ ಮೀನುಗಾರರ ಸಂಘ ಮತ್ತು ಇತರ ಸಂಘಟನೆಗಳು ನಡೆಸಿದ ಪ್ರತಿಭಟನೆಯ ಸಂದರ್ಭದಲ್ಲಿ ಪ್ರಚೋದನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ವಿರುದ್ಧ ಮಲ್ಪೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.



ಮೀನು ಕದ್ದ ಆರೋಪದ ಮೇಲೆ ಮಹಿಳೆಯೊಬ್ಬರನ್ನು ಮರಕ್ಕೆ ಕಟ್ಟಿ ಹಲ್ಲೆ ನಡೆಸಿದ ಘಟನೆಗೆ ಸಂಬಂಧಿಸಿದಂತೆ ಐದು ಜನರನ್ನು ಬಂಧಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಮಲ್ಪೆ ಮೀನುಗಾರರ ಸಂಘ ಮತ್ತು ಇತರ ಪ್ರಮುಖ ಮೀನುಗಾರರ ಸಂಘಗಳು ಪ್ರತಿಭಟನೆ ಆಯೋಜಿಸಿದ್ದವು.

ಪ್ರತಿಭಟನೆಯಲ್ಲಿ ಮಾತನಾಡಿದ ಮಾಜಿ ಸಚಿವ, ಪ್ರಮೋದ್ ಮಧ್ವರಾಜ್ ಅವರು, ಮಹಿಳೆಯನ್ನು ಕಟ್ಟಿಹಾಕಿ ಎರಡು ಏಟು ಕೊಟ್ಟದ್ದನ್ನು ಸಮರ್ಥಿಸಿಕೊಂಡಿದ್ದರು. ಕಳ್ಳರು ನಮ್ಮ ಮನೆಗೆ ಪ್ರವೇಶಿಸಿದರೆ, ನಾವು ಏನು ಮಾಡಬೇಕು? ಪೊಲೀಸರು ಬರಲು 5-6 ಗಂಟೆ ತೆಗೆದುಕೊಂಡರೆ, ಪುಟ 2

ರಿಕವರಿ ಚಿನ್ನ ದುರ್ಬಳಕೆ ಮತ್ತು ಚಿನ್ನದ ವ್ಯಾಪಾರಿಗೆ ವಂಚನೆ

# ಪಿಎಸ್ಐ ಅಮಾನತು

**ಬೆಂಗಳೂರು:** ರಿಕವರಿ ಚಿನ್ನ ದುರ್ಬಳಕೆ ಮತ್ತು ಚಿನ್ನದ ವ್ಯಾಪಾರಿಗೆ ವಂಚಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಟನ್ ಪೇಟೆ ಠಾಣೆ ಪಿಎಸ್ ಐ ಸಂತೋಷ್ ವಿರುದ್ಧ ಎಫ್ ಐಆರ್ ದಾಖಲಾದ ಹಿನ್ನೆಲೆಯಲ್ಲಿ ಅವರನ್ನು ಪೊಲೀಸ್ ಆಯುಕ್ತರು ಅಮಾನತು ಮಾಡಿದ್ದಾರೆ.

2020ರಲ್ಲಿ ಹಲಸೂರು ಗೇಟ್ ಠಾಣೆ ಪಿಎಸ್ ಆರ್ ಆಗಿದ್ದ ಸಂತೋಷ್ ಅವರು ಪ್ರಕರಣವೊಂದರ ರಿಕವರಿ ಚಿನ್ನ ದುರ್ಬಳಕೆ ಮಾಡಿಕೊಂಡಿದ್ದರು. ಹೀಗಾಗಿ, ಚಿನ್ನದ ಅಂಗಡಿ ಮಾಲೀಕನ ಬಳಿ ರಿಕವರಿ ಚಿನ್ನ ತೋರಿಸಬೇಕಿದೆ. ಫೋಟೋ ತೆಗೆಸಿ ವಾಪಸ್ ಕೊಡುತ್ತೇನೆ. ನಿನ್ನ ಬಳಿ ಇರುವ 950 ಗ್ರಾಂ ಚಿನ್ನದ ಗಟ್ಟಿ ನೀಡುವಂತೆ ಪಿಎಸ್ ಐ ಸಂತೋಷ ಚಿನ್ನದಂಗಡೆ ಮಾಲೀಕನಿಗೆ ಹೇಳಿದ್ದಾರೆ.




ಮಾತು ನಂಬಿ 950 ಗ್ರಾಂ ಚಿನ್ನದ ಗಟ್ಟಿಯನ್ನು ಪಿಎಸ್ ಐ ಸಂತೋಷ ಅವರಿಗೆ ಚಿನ್ನದ ಅಂಗಡಿ ಮಾಲೀಕ ನೀಡಿದ್ದಾರೆ. ಚಿನ್ನ ವಾಪಸ್ ಕೇಳಿದಾಗ ಪುಟ 2

# ಉದ್ಯೋಗ ಅರಸಿ ಮಧ್ಯ ಆಫ್ರಿಕಾಕ್ಕೆ ತೆರಳಿರುವ ಕರ್ನಾಟಕದ ನಾಟಿ ವೈದ್ಯರು ಸಂಕಷ್ಟದಲ್ಲಿ

**ದಾವಣಗೆರೆ:** ಉದ್ಯೋಗ ಅರಸಿ ಮಧ್ಯ ಆಫ್ರಿಕಾದ ಗಬಾನ್ ದೇಶಕ್ಕೆ ತೆರಳಿರುವ ಚನ್ನಗಿರಿ ತಾಲೂಕಿನ ಗೋಪನಾಳ್-ಅಸ್ತಾಪನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ಹಕ್ಕಿ-ಪಿಕ್ಕಿ ಜನಾಂಗದ ನಾಟಿ ವೈದ್ಯರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಮಧ್ಯ ಆಫ್ರಿಕಾದ ಗಬಾನ್ ದೇಶದಲ್ಲಿ ರಾಜಕೀಯ ಬೆಳವಣಿಗೆಯಿಂದ ಹೊಸ ಸರ್ಕಾರ ಅಧಿಕಾರಕ್ಕೆ ಬಂದಿದೆ. ಹೊಸ ಸರ್ಕಾರ ವಿದೇಶಿಯರು ದೇಶ ಬಿಡುವಂತೆ ತಾಕೀತು ಮಾಡಿದೆ. ಈ ಹಿನ್ನೆಲೆಯಲ್ಲಿ ಗಬಾನ್ ರಾಜಧಾನಿ ಲಿಬ್ರೆವಿಲ್ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ. ಕರ್ನಾಟಕದ ಹಕ್ಕಿ-ಪಿಕ್ಕಿ ಜನಾಂಗದ 25 ಕ್ಕೂ ಹೆಚ್ಚು ಜನ ನಾಟಿ ವೈದ್ಯರು ಕಳೆದ ಆರು ತಿಂಗಳಿನಿಂದ ಲಿಬ್ರೆವಿಲ್‌ನಲ್ಲಿ ವಾಸವಾಗಿದ್ದಾರೆ.

ಇದೀಗ, ಪೊಲೀಸರು 25ಕ್ಕೂ ಹೆಚ್ಚು ಜನರನ್ನು ಬಂಧಿಸಿದ್ದಾರೆ ಎನ್ನಲಾಗಿದೆ. ''ನಮ್ಮ ಪಾಸ್‌ಪೋರ್ಟ್ ವಶಕ್ಕೆ ಪಡೆದು ತೊಂದರೆ ನೀಡುತ್ತಿದ್ದು, ಹಣಕ್ಕೆ ಬೇಡಿಕೆ ಇಡುತ್ತಿದ್ದಾರೆ ಎಂದು ಇಲ್ಲಿನ ಕುಟುಂಬದ ಸದಸ್ಯರಿಗೆ ಕರೆ ಮಾಡಿ ಅಳಲು ತೋಡಿಕೊಂಡಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಿದೇಶಾಂಗ ಇಲಾಖೆ ಗಮನ ಹರಿಸುವಂತೆ ಸಂಕಷ್ಟದಲ್ಲಿ ಸಿಲುಕಿರುವ ಕುಟುಂಬಸ್ಥರು ಮನವಿ ಮಾಡಿಕೊಂಡಿದ್ದಾರೆ.



ಬೆಂಗಳೂರಿನಲ್ಲಿ ಮರಗಳ ಮಾರಣ ಹೋಮ

# 100 ವರ್ಷಗಳ ಹಳೆಯ ಮರಗಳಿಗೆ ಕೊಡಲಿ ಏಟು!

**ಬೆಂಗಳೂರು:** ಬೇಸಿಗೆ ಕಾಲ ಬಂದುಬಿಟ್ಟಿದೆ, ತಾಪಮಾನ ಹೆಚ್ಚುತ್ತಿದ್ದಂತೆ ಬಿಸಿ ಗಾಳಿ ಮೈಗೆ ಅಪ್ಪಳಿಸುತ್ತಿದೆ, ಮಳೆ ಮಾಯವಾಗುತ್ತಿದೆ. ಈ ನಡುವೆಯೂ ಮರಗಿಡಗಳು, ಪರಿಸರದ ಮೇಲಿನ ದೌರ್ಜನ್ಯ ವಿಪರೀತವಾಗಿ ವಿನಾಶ ಕಾಲ ಶುರುವಾದಂತೆ ಕಾಣ್ತಿದೆ.

ಹೌದು. ಮರಗಿಡ ಬೆಳೆಸಿ, ಪರಿಸರ ಉಳಿಸಿ ಎಂದು ಸರ್ಕಾರ ಮತ್ತು ಸಂಘಟನೆಗಳು ಘೋಷಿಸುತ್ತವೆ. ಸಾರ್ವಜನಿಕರೂ ಮಾತನಾಡಿಕೊಳ್ಳುತ್ತಾರೆ. ಇದು ಕೇವಲ ಔಪಚಾರಿಕ ಸಮಾರಂಭಕ್ಕೆ, ಭಾಷಣಕ್ಕೆ ಸೀಮಿತವಾಗಿ ಮರೆತು ಹೋಗುತ್ತದೆ. ಆದರೆ, ವಾಸ್ತವದಲ್ಲಿ ಮರಗಳನ್ನು ಉಳಿಸುವ ಬದಲು ಉರುಳಿಸುವ ಕೆಲಸವೇ ಹೆಚ್ಚಾಗಿ ಕಂಡು ಬರುತ್ತದೆ. ಇದಕ್ಕೆ ಬೆಂಗಳೂರು ನಗರದಲ್ಲಿ 100 ವರ್ಷಗಳ ಹಳೆಯ ಮರಗಳಿಗೆ ಕೊಡಲಿ ಏಟು ಕೊಟ್ಟಿರುವುದೇ ಸಾಕ್ಷಿಯಾಗಿದೆ.



ಅಭಿವೃದ್ಧಿ, ಸುರಕ್ಷತೆ, ರಸ್ತೆ ಸಂಚಾರಕ್ಕೆ ಅಡಚಣೆ ಹೆಸರಲ್ಲಿ ಮರ ಕತ್ತರಿಸುವ ಸಂಸ್ಕೃತಿ ದಿನೇ ದಿನೇ ಹೆಚ್ಚುತ್ತಿದೆ. ಆದರೂ ಯಾರೂ ಕೇಳುವರಿಲ್ಲದೇ ಪರಿಸರ ಜಾಗೃತಿ ಬದಲು ದುರ್ಗತಿ ಎದುರಾಗುತ್ತಿದೆ. ಇದೀಗ ಆಹಾರಸೌಧ ಕಟ್ಟಡ ನೆಪದಲ್ಲಿ ಸರ್ಕಾರದಿಂದಲೇ ಮರಗಳ ಮಾರಣಹೋಮ ಮಾಡುವ ಕೆಲಸ ನಡೆಯುತ್ತಿದ್ದು, ಆಕ್ರೋಶಕ್ಕೆ ಕಾರಣವಾಗಿದೆ. ಪುಟ 2

# ಬಿಸಿಲಿನಿಂದ ಬರಿದಾದ ವೇದಾವತಿ ನದಿ ಒಡಲು

## ತೀರದಲ್ಲೇ ಬೋರ್ ಕೊರೆಸಲು ರೈತರ ಸಾಹಸ

**ಬಳ್ಳಾರಿ:** ಕುಡಿಯುವ ನೀರಿಗಾಗಿ ಒಳ್ಳೆ ಪಾಯಿಂಟ್ ನೋಡಿಸಿ ಬೋರ್ ವೆಲ್ ಹಾಕಿಸೋದನ್ನ ನಾವೆಲ್ಲಾ ನೋಡಿದ್ದೇವೆ. ಆದ್ರೆ ಇಲ್ಲಿನ ರೈತರು, ತಮ್ಮ ಬೆಳೆಗಳನ್ನ ಉಳಿಸಿಕೊಳ್ಳಲು ನದಿಯ ತೀರದಲ್ಲೇ ಬೋರ್ ಹಾಕಿಸಿ, ನೀರು ಪಡೆಯಲು ಹರಸಾಹಸ ಪಡ್ತಿದ್ದಾರೆ. ಅರೇ.. ನದಿಯಲ್ಲಿ ಬೋರ್‌ವೆಲ್ ಹಾಕಿಸ್ತಿರೋದಾದ್ರೂ ಯಾಕೆ ಅಂತೀರಾ?

ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲೂಕಿನಲ್ಲಿ ಹರಿಯುವ ಹಗರಿಯ ವೇದಾವತಿ ನದಿ ಬೇಸಿಗೆ ಆರಂಭದಲ್ಲೇ ಸಂಪೂರ್ಣ ಬತ್ತಿ ಬರಿದಾಗಿದೆ. ಇದೇ ವೇದಾವತಿ ನದಿಯ ನೀರನ್ನೇ ನಂಬಿ ಎಕರೆಗೆ 40-50 ಸಾವಿರ ರೂ. ಖರ್ಚು ಮಾಡಿ ಭತ್ತ ನಾಟಿ ಮಾಡಿದ್ದ ನದಿ ಪಾತ್ರದ ಸಾವಿರಾರು ರೈತರು ಇದೀಗ ಬೆಳೆ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ. ಹೀಗಾಗಿ ನದಿಯ ಒಡಲಲ್ಲೇ ಗುಂಡಿ ತೋಡಿ,



ಬೋರ್ ವೆಲ್ ಹಾಕಿಸಿ, ಬೆಳೆ ಉಳಿಸಿಕೊಳ್ಳಲು ರೈತರ ಹೆಣಗಾಡ್ತಿದ್ದಾರೆ.

ಇನ್ನೂ ಈ ವೇದಾವತಿ-ಹಗರಿ ನದಿ ನಂಬಿ ಕೃಷಿ ಮಾಡ್ತಿದ್ದ ಸಿರಗುಪ್ಪ ಹಾಗೂ ಬಳ್ಳಾರಿ ತಾಲೂಕಿನ 40 ಸಾವಿರಕ್ಕೂ ಅಧಿಕ ರೈತರು ಪಂಪ್ ಸೆಟ್ ಅಳವಡಿಕೆ ಮಾಡಿಕೊಂಡಿದ್ದಾರೆ. ಪುಟ 2

# ರಿಯಲ್ ಎಸ್ಟೇಟ್ ಉದ್ಯಮಿ ಹತ್ಯೆ

**ಬೆಂಗಳೂರು:** ಮದುವೆ ಸಂಭ್ರಮದಲ್ಲಿದ್ದ ರಿಯಲ್ ಎಸ್ಟೇಟ್ ಉದ್ಯಮಿಗೆ ಚಾಕು ಇರಿದು ಹತ್ಯೆ ಮಾಡಿರುವ ಘಟನೆ ಬೆಂಗಳೂರಿನ ಬಿಜಿಎಸ್ ಲೇಔಟ್‌ನ ನಿರ್ಮಾಣ ಹಂತದ ಕಟ್ಟಡದಲ್ಲಿ ನಡೆದಿದೆ.

ಮಾಗಡಿ ಶಾಸಕರ ಆಪ್ತ ಲೋಕನಾಥ್ ಸಿಂಗ್ (37) ಹತ್ಯೆಯಾದ ಉದ್ಯಮಿ. ಲೋಕನಾಥ್ ಸಿಂಗ್‌ಗೆ ಇದೇ ತಿಂಗಳು ಮದುವೆ ನಿಶ್ಚಯವಾಗಿತ್ತು. ಕುತ್ತಿಗೆ ಭಾಗಕ್ಕೆ ಚಾಕುವಿನಿಂದ ಇರಿದು ಉದ್ಯಮಿಯನ್ನು ಕೊಲೆ ಮಾಡಲಾಗಿದೆ. ಘಟನೆಯಲ್ಲಿ ಲೋಕನಾಥ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಘಟನೆ ಬಳಿಕ ಲೋಕನಾಥ್ ಗನ್‌ಮ್ಯಾನ್ ಪರಾರಿಯಾಗಿದ್ದು, ಪೊಲೀಸರು ಆತನಿಗಾಗಿ ತಲಾಷ್ ನಡೆಸುತ್ತಿದ್ದಾರೆ. ಘಟನಾ ಸ್ಥಳಕ್ಕೆ ಸೋಲದೇವನಹಳ್ಳಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



## ಕನ್ನಡಿಗರಿಗಾಗಿ ಕರೆದ ಬಂದ್ ಯಶಸ್ವಿಯಾಗಿದೆ: ವಾಟಾಳ್ ನಾಗರಾಜ್

**ಬೆಂಗಳೂರು:** ಇಡೀ ರಾಜ್ಯಾದ್ಯಂತ ಬಂದ್ ಯಶಸ್ವಿಯಾಗಿದೆ. ಇದಕ್ಕೆ ಹೋರಾಟ ಮಾಡಿದ ಸಂಘಟನೆಗಳಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ ಎಂದು ಮಾಜಿ ಶಾಸಕ, ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ತಿಳಿಸಿದ್ದಾರೆ.



ಕರ್ನಾಟಕ ಬಂದ್ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಎಲ್ಲಾ ಜಿಲ್ಲೆಗಳಲ್ಲಿ ಬಂದ್ ಅವರದ್ದೇ ರೂಪದಲ್ಲಿ ನಡೆದಿದೆ. ಕೆಲವು ಕಡೆ ಬಸ್ ಓಡಾಡುತ್ತಿದ್ದಾವೆ, ಜನ ಇಲ್ಲ. ಬಸ್ ನಿಲ್ದಾಣದಲ್ಲಿ ಜನ ಇಲ್ಲ. ಕನ್ನಡಿಗರಿಗಾಗಿ ಕರೆದ ಬಂದ್ ಯಶಸ್ವಿ ಆಗಿದೆ. ಬಂದ್‌ನ ಬೇಡಿಕೆ ಎಲ್ಲವನ್ನೂ ಜನರ ಮುಂದೆ ಸರ್ಕಾರದ ಮುಂದೆ ಇಟ್ಟಿದ್ದೇವೆ ಎಂದರು.

ನಮ್ಮವರನ್ನ ಬಂಧನ ಮಾಡಿದ್ದಾರೆ. ಬೆಂಗಳೂರು ಕಮಿಷನರ್ ಚಾಲೆಂಜ್ ತೆಗೆದುಕೊಂಡಿದ್ದಾರೆ. ಇವರು ವೈಯಕ್ತಿಕವಾಗಿ ತೆಗೆದುಕೊಂಡಿದ್ದಾರೆ. ಭಾಸ್ಕರ್ ರಾವ್ ರೀತಿ ಇವರು ರಾಜಕೀಯಕ್ಕೆ ಬರುತ್ತಾರೋ ಏನೋ ಗೊತ್ತಿಲ್ಲ. ನನಗೂ ನೋಟೀಸ್ ಕೊಟ್ಟಿದ್ದಾರೆ. ಫ್ರೀಡಂ ಪಾರ್ಕ್‌ನಲ್ಲಿ ಮಾತ್ರ ಹೋರಾಟ ಮಾಡಿ ಅಂದಿದ್ದಾರೆ. ಟೌನ್ ಹಾಲ್‌ನಲ್ಲಿ ಪರ್ಮಿಷನ್ ಇಲ್ಲ ಅಂದಿದ್ದಾರೆ. ಬಂದ್ ಹತ್ತಿಕ್ಕೋ ಕೆಲಸ ಮಾಡಬಾರದಿತ್ತು. ನಾವು ಮಾಡಿರೋ ಹೋರಾಟದಲ್ಲಿ ಒಂದು ಹನಿ ನೀರು ಸಿಗದ ರೀತಿ ಆಗಬೇಕಿತ್ತು. ಆದರೂ ಯಶಸ್ಸು ಸಿಕ್ಕಿದೆ ಎಂದು ಹೇಳಿದರು.

ಹೋಟೆಲ್‌ನವರಿಗೆ ಭಾರಿ ದುರಹಂಕಾರ ಬಂದಿದೆ: ನಮ್ಮ ಹೋರಾಟ ನಿರಂತರವಾಗಿರುತ್ತದೆ, ಇಲ್ಲಿಗೆ ನಿಲ್ಲೋದಿಲ್ಲ. ಅನೇಕ ಪಿತೂರಿ ಮಾಡಿದರು. ನೈತಿಕತೆ ಬೆಂಬಲ ಅಂತ ಈಗ ಹುಟ್ಟಿದೆ. ನಮಗೆ ಈ ಬೆಂಬಲ ಬೇಡ. ಹೋಟೆಲ್ ನವರಿಗೆ ಭಾರಿ ದುರಹಂಕಾರ ಬಂದಿದೆ. ಎಲ್ಲದೂ ಪೊಲೀಸ್ ಕೈಯಲ್ಲೇ ಇದೆ. ತೀರ ಹತ್ತಿಕ್ಕುವ ಮಟ್ಟಕ್ಕೆ ಹೋಗಬಾರದಿತ್ತು. ಆದರೂ ಬಂದ್ ಯಶಸ್ವಿ ಆಗಿದೆ ಎಂದರು.

## ಮಳೆಗೆ ಬೈಕ್ ಮೇಲೆ ಬಿದ್ದ ಮರ: ಮಗು ಸಾವು

**ಬೆಂಗಳೂರು:** ನಗರದಲ್ಲಿ ಸಂಜೆ ಸುರಿದ ಮಳೆಗೆ ಮರ ಬೈಕ್ ಮೇಲೆ ಮುರಿದು ಬಿದ್ದು ಮೂರು ವರ್ಷದ ಮಗು ಸಾವನ್ನಪ್ಪಿದ ಘಟನೆ ಜೀವನಹಳ್ಳಿಯ ಪೂರ್ವ ಪಾರ್ಕ್ ಬಳಿ ನಡೆದಿದೆ.



ಮೃತ ಮಗುವನ್ನು ರಕ್ಷಾ ಎಂದು ಗುರುತಿಸಲಾಗಿದೆ. ತಂದೆಯ ಜೊತೆ ಮಗು ಬೈಕ್‌ನಲ್ಲಿ ತೆರಳುತ್ತಿದ್ದಾಗ ಈ ಘಟನೆ ನಡೆದಿದೆ. ಮರ ಬಿದ್ದು ಮಗುವಿಗೆ ಗಂಭೀರ ಗಾಯವಾಗಿತ್ತು. ತಕ್ಷಣ ಮಗುವನ್ನು ಪೋಷಕರು ಬೌರಿಂಗ್ ಆಸ್ಪತ್ರೆಗೆ ಕರೆತಂದಿದ್ದಾರೆ. ಆದರೆ ಮಗು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದೆ.

ಪುಲಕೇಶಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಹನಿಟ್ರ್ಯಾಪ್ ಕೇಸ್ ಸಿಬಿಐ ಅಥವಾ ನ್ಯಾಯಾಧೀಶರಿಂದ ತನಿಖೆಯಾಗಲಿ

**ಬೆಂಗಳೂರು:** ಸಚಿವ ರಾಜಣ್ಣ ಆರೋಪಿಸಿರುವ ಹನಿಟ್ರ್ಯಾಪ್ ಕೇಸ್‌ನ್ನು ನ್ಯಾಯಾಧೀಶರ ನೇತೃತ್ವದ ಅಥವಾ ಸಿಬಿಐನಿಂದ ತನಿಖೆ ಮಾಡಿಸಬೇಕು ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.



ಜೆಪಿ ಭವನದಲ್ಲಿ ಮಾತನಾಡಿದ ಅವರು, ವಿಧಾನಸೌಧ ಸಾಕಷ್ಟು ಮಹನೀಯರು ಪ್ರತಿನಿಧಿಸಿರುವ ಒಂದು ದೇವಾಲಯ. ಇಂತಹ ದೇವಾಲದಲ್ಲಿ ಈ ಮೊದಲು ವಿಷಯಾಧಾರಿತ ಚರ್ಚೆ ಮಾಡಿದ್ದಾರೆ. ಆದರೆ ಈಗ ಸಿಎಂ ಕ್ಯಾಬಿನೆಟ್‌ನ ಪ್ರಭಾವಿ ಮಂತ್ರಿಗಳು ಸದನದಲ್ಲೇ ಹನಿಟ್ರ್ಯಾಪ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರ ಎಲ್ಲಿಗೆ ಬಂದು ನಿಂತಿದೆ ಅನ್ನೋದಕ್ಕೆ ಇದು ಉದಾಹರಣೆ. ರಾಜಣ್ಣ ಹನಿಟ್ರ್ಯಾಪ್ ಕೇಸ್ ಖಿಖಿ ಬೇಡ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ಆಗಬೇಕು ಅಂತ ಹೇಳಿದ್ದಾರೆ. ಹೀಗಾಗಿ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ಆಗಬೇಕು ಇಲ್ಲವೇ ಸಿಬಿಐ ತನಿಖೆ ಆಗಬೇಕು ಎಂದು ಒತ್ತಾಯಿಸಿದ್ದಾರೆ.

ರಾಹುಲ್ ಗಾಂಧಿ ಮಾತೆತ್ತಿದ್ರೆ ಎಸ್‌ಸಿ–ಎಸ್‌ಟಿ ಪರ ಧ್ವನಿ ಎತ್ತೋ ಪಕ್ಷ ಕಾಂಗ್ರೆಸ್ ಅಂತಾರೆ. ಆದರೆ ಕಾಂಗ್ರೆಸ್ ಶಾಸಕರ ಅಖಂಡ ಶ್ರೀನಿವಾಸ್ ಮೂರ್ತಿ ಅವರ ಮನೆಗೆ ಬೆಂಕಿ ಬಿತ್ತು. ಕೊನೆಗೆ ಅವರಿಗೆ ಟಿಕೆಟ್ ಕೊಡದಂತೆ ಕಾಂಗ್ರೆಸ್ ನಡು ಬೀದಿಯಲ್ಲಿ ಕೈ ಬಿಡ್ತು. ಇವತ್ತು ST ಸಮುದಾಯದ ಪ್ರಭಾವಿ ನಾಯಕ ರಾಜಣ್ಣ. ಅವರಿಗೆ ಕಾಂಗ್ರೆಸ್ ಸರ್ಕಾರದಲ್ಲಿ ಕೈ ಕಟ್ಟಿ ಹಾಕೋ ವಾತಾವರಣ ಸೃಷ್ಟಿಯಾಗಿದೆ. ಇದರ ಹಿಂದೆ ಇರೋ ಪ್ರಭಾವ ಯಾರು ಅಂತ ಏಳೂವರೆ ಕೋಟಿ ಕನ್ನಡಿಗರಿಗೆ ಈಗಾಗಲೇ ಗೊತ್ತಾಗಿದೆ. ರಾಜಕಾರಣದಲ್ಲಿ ವಿಷಯಾಧಾರಿತ ಚರ್ಚೆ, ಸೈದ್ಧಾಂತಿಕ ಹೋರಾಟ ಇರಬೇಕು. ಹೀಗೆ ವೈಯಕ್ತಿಕವಾಗಿ ತೇಜೋವಧೆ ಮಾಡೋದು, ಟಾರ್ಗೆಟ್ ಮಾಡೋದು ಸರಿಯಲ್ಲ. ಮೂರು ಪಕ್ಷದಲ್ಲಿ ಹನಿಟ್ರ್ಯಾಪ್ ಆಗಿದೆ ಅಂತ ರಾಜಣ್ಣ ಹೇಳಿದ್ದಾರೆ. 224 ಶಾಸಕರಿಗೆ ರಕ್ಷಣೆ ಕೊಡದ ಈ ಸರ್ಕಾರಕ್ಕೆ ರಾಜ್ಯದ ಜನರಿಗೆ ರಕ್ಷಣೆ ಕೊಡೋಕೆ ಸಾಧ್ಯನಾ? ಸರ್ಕಾರ ಉತ್ತರ ಕೊಡಬೇಕು ಎಂದಿದ್ದಾರೆ.

ಸಿಬಿಐ ತನಿಖೆ ಮಾಡಿಸ್ತಾರೋ, ನ್ಯಾಯಾಧೀಶರಿಂದ ತನಿಖೆ ಮಾಡಿಸ್ತಾರೋ ಗೊತ್ತಿಲ್ಲ. ತನಿಖೆ ಪಾರದರ್ಶಕವಾಗಿ ನಡೆಯಬೇಕು. ಯಾರು ತಪ್ಪಿತಸ್ಥರು ಇದ್ದಾರೆ. ಯಾರು ಎಷ್ಟೇ ಪ್ರಭಾವಿಗಳು ಇರಲಿ. ಅವರ ಮೇಲೆ ಕ್ರಮ ಆಗಬೇಕು. ಕಾಂಗ್ರೆಸ್‌ನಲ್ಲಿ SC-ST ಸಮುದಾಯದವರು ಮೀಟಿಂಗ್ ಮಾಡೋಕೆ ಫ್ರೀಡಂ ಇಲ್ಲ. ಒಬ್ಬ ಮಹಾನುಭಾವರು ತಡೆ ಹಾಕ್ತಾರೆ. ಹೈಕಮಾಂಡ್ ನಾಯಕರನ್ನ ಕರೆದುಕೊಂಡು ಬಂದು ಮೀಟಿಂಗ್ ರದ್ದು ಮಾಡ್ತಾರೆ. ಹನಿಟ್ರ್ಯಾಪ್ ಮಾಡಿದ ನಾಯಕ ಯಾರು ಅಂತ ನನಗೆ ಗೊತ್ತಿಲ್ಲ. ಅದಕ್ಕೆ ತನಿಖೆ ಆಗಬೇಕು. ಬಹಳ ಜನ ಹನಿಟ್ರ್ಯಾಪ್‌ಗೆ ಸಿಲುಕಿದ್ದಾರೆ. ಇದರ ಒಳ ಮರ್ಮ ಏನು? ಇದರ ಹಿಂದೆ ಇರೋರು ಯಾರು ಅಂತ ರಾಜ್ಯದ ಜನತೆಗೆ ತಿಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಇದೇ ವೇಳೆ ಬಿಜೆಪಿ ಶಾಸಕರನ್ನು ಸ್ಪೀಕರ್ ಅಮಾನತು ಮಾಡಿರೋದನ್ನ ವಿರೋಧಿಸಿದ ಅವರು, ಸ್ಪೀಕರ್ ಅವರು ಬಿಜೆಪಿಯ 18 ಶಾಸಕರನ್ನ ಅಮಾನತು ಮಾಡಿದ್ದಾರೆ. ಹನಿಟ್ರ್ಯಾಪ್ ಕೇಸ್ ಸಿಬಿಐಗೆ ಕೊಡಿ ಅಂತ ಶಾಸಕರ ಕೇಳಿದ್ದಾರೆ. ಶಾಸಕರು ಇದನ್ನ ಕೇಳಿದ್ದಕ್ಕೆ 6 ತಿಂಗಳು ಸ್ಪೀಕರ್ ಅವರು ಅಮಾನತು ಮಾಡಿರೋದು ತಪ್ಪು. ರಾಜ್ಯದ ಜನ ಇದನ್ನ ನಿರೀಕ್ಷೆ ಮಾಡಿರಲಿಲ್ಲ. ಸ್ಪೀಕರ್ ನಡೆ ವಿಪರ್ಯಾಸ ಅಂತ ಕಿಡಿಕಾರಿದ್ದಾರೆ.

### ಶಾಸಕರ ಅಮಾನತು, ಮುಸ್ಲಿಂ ಗುತ್ತಿಗೆ ಮೀಸಲು ಬಿಲ್ ವಿರುದ್ಧ ಹೋರಾಟಕ್ಕೆ ಕೇಸರಿ ಪಡೆ ತಯಾರಿ

# ಸಸ್ಪೆಂಡ್ ವಾಪಸ್‌ಗೆ ಒತ್ತಾಯ

**ಬೆಂಗಳೂರು:** ಹನಿಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಮಾಡಿದ ಗಲಾಟೆಗೆ ಬಿಜೆಪಿ 18 ಮಂದಿ ಶಾಸಕರು ಅಮಾನತಾಗಿದ್ದಾರೆ. ಸ್ಪೀಕರ್ ಅವರ ಈ ನಿರ್ಧಾರದ ವಿರುದ್ಧ ಈಗ ರಾಜ್ಯ ಬಿಜೆಪಿ ಹೋರಾಟಕ್ಕೆ ಮುಂದಾಗಿದೆ.





ಈ ಬಾರಿಯ ಬಜೆಟ್ ಅಧಿವೇಶನ ಸಾಕಷ್ಟು ವಿಶೇಷ ಘಟನೆಗಳಿಗೆ ಸಾಕ್ಷಿಯಾಗಿದೆ. ಸುಮಾರು 15 ದಿನಗಳ ಕಾಲ ನಡೆದ ಬಜೆಟ್ ಅಧಿವೇಶನದಲ್ಲಿ ಪ್ರಮುಖ ಕೇಂದ್ರಬಿಂದುವಾಗಿದ್ದು ಪ್ರಭಾವಿ ನಾಯಕರ ಮೇಲೆ ನಡೆಯುತ್ತಿರೋ ಹನಿಟ್ರ್ಯಾಪ್ ಪ್ರಕರಣ. ಇದಕ್ಕೆ ಸಂಬಂಧಿಸಿದಂತೆ ಸರ್ವ ಪಕ್ಷ ಸದಸ್ಯರು ಇದರ ವಿರುದ್ಧ ಹೋರಾಟ ಮಾಡಬೇಕು. ತಪ್ಪು ಮಾಡಿದವರ ವಿರುದ್ಧ ಕ್ರಮ ಜರಿಗಿಸಬೇಕೆಂದು ಸದನದಲ್ಲಿ ಒತ್ತಾಯ ಮಾಡಿದರು. ಈ ವೇಳೆ ?ಉನ್ನತ ಮಟ್ಟದ ತನಿಖೆ ನಡೆಸುವುದಾಗಿ ಗೃಹ ಸಚಿವರು ಮಾಹಿತಿ ನೀಡಿದರು. ನಂತರ ಸಿಎಂ ಸಹ ಇದರ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಸದನಕ್ಕೆ ಹೇಳಿದ್ರು. ಆದ್ರೆ ಇದಕ್ಕೆ ತೃಪ್ತಿಯಾಗದ ಪ್ರತಿ ಪಕ್ಷಗಳು ಸದನದ ಬಾವಿಗಿಳಿದು ಹೋರಾಟ ಮಾಡಿದ್ದರು. ಸ್ಪೀಕರ್ ಕೂತ ಸ್ಥಳಕ್ಕೆ ಹೋಗಿ ಪೇಪರ್ ಹರಿದು ಎಸೆದು ದೊಡ್ಡ ಕೋಲಾಹಲ ಎಬ್ಬಿಸಿದ್ದರು. ಈ ವೇಳೆ ಎಷ್ಟೆ ಬಾರೀ ಸೂಚನೆ ಕೊಟ್ಟರು ಸುಮ್ಮನಾಗದ ಪ್ರತಿಪಕ್ಷದ 18 ಮಂದಿ ಶಾಸಕರ ವಿರುದ್ಧ ಸ್ಪೀಕರ್ ಅಮಾನತು ಅಸ್ತ್ರ ಪ್ರಯೋಗ ಮಾಡಿದರು.

ಮುಸ್ಲಿಮರಿಗೆ ಗುತ್ತಿಗೆಯಲ್ಲಿ ಮೀಸಲಾತಿ ನೀಡುವುದು ಸಂವಿಧಾನ ವಿರೋಧಿ ನಿಲುವು. ಪ್ರಜಾಪ್ರಭುತ್ವದ ಉಳಿವಿಗಾಗಿ ನಮ್ಮ ನಾಯಕರು ಸದನದಲ್ಲಿ ಹೋರಾಟ ನಡೆಸಿದ್ದರು. ಸ್ಪೀಕರ್ ಅವರ ನಡವಳಿಕೆ ತುಘಲಕ್ ದರ್ಬಾರ್‌ನಂತಿದೆ. ಸ್ಪೀಕರ್ ಪ್ರಚೋದನೆಯಿಂದ ಆ ಘಟನೆ ನಡೆದಿದೆ. ಕಾಂಗ್ರೆಸ್ ದ್ವೇಷದ ರಾಜಕೀಯ ಮಾಡುತ್ತಿದೆ.

ಶಾಸಕರ ಅಮಾನತು ನಿರ್ಧಾರದ ವಿರುದ್ಧ ಕೆರಳಿ ಕೆಂಡವಾಗಿರುವ ರಾಜ್ಯ ಬಿಜೆಪಿ ನಾಯಕರು ಸ್ಪೀಕರ್ ಕಾರ್ಯವೈಖರಿ ಬಗ್ಗೆ ತೀವ್ರ ಆಕ್ರೋಶ ಹೊರಹಾಕುತ್ತಿದ್ದಾರೆ. ಸ್ಪೀಕರ್ ಪಾರದರ್ಶಕವಾಗಿ ಕೆಲಸ ಮಾಡದೇ ಯಾವುದೋ ಒಂದು ಪಕ್ಷದ ಪರ ಕೆಲಸ ಮಾಡುತ್ತಿದ್ದಾರೆ. ಅರು ತಿಂಗಳು ಶಾಸಕರನ್ನು ಅಮಾನತು ಮಾಡುವುದೆಂದರೆ ಅವರ ಹಕ್ಕನ್ನು ಕಿತ್ತುಕೊಂಡ ಹಾಗೆ. ಅವರು ಜನರ ಸಮಸ್ಯೆಗಳಿಗೆ ಧ್ವನಿಯಾಗಲು ಸದನಕ್ಕೆ ಬರುತ್ತಾರೆ. ಅವರನ್ನೇ ಹೊರ ಹಾಕಿದ್ರೆ, ಹೇಗೆ ಎಂದು ಪ್ರಶ್ನಿಸಿದ್ದಾರೆ. ಇನ್ನು ಸ್ಪಿಕರ್ ಕ್ರಮದ ವಿರುದ್ಧ ಕಾನೂನು ಹೋರಾಟ ಮಾಡುತ್ತೇವೆ. ಜೊತೆಗೆ ಈ ರೀತಿ ಸ್ಪೀಕರ್ ನಿರ್ಧಾರ ಮಾಡಿದ್ದರ ಹಿಂದೆ ಸರ್ಕಾರದ ನಾಯಕರ ಷಡ್ಯಂತ್ರ ಇದೆ ಎಂದು ಆರೋಪಿಸಿದ್ದಾರೆ.

ಬಿಜೆಪಿಯ 18 ಮಂದಿ ಶಾಸಕರನ್ನ ಅಮಾನತು ಮಾಡಿರುವ ನಿರ್ಧಾರವನ್ನು ಸ್ಪೀಕರ್ ಖಾದರ್ ಸಮರ್ಥಿಸಿಕೊಂಡಿದ್ದಾರೆ. ಅಮಾನತು ಆಗಿರುವ ಎಲ್ಲಾ ಶಾಸಕರು ನನ್ನ ಸ್ನೇಹಿತರೇ. ನನಗೂ ಸಹ ನೋವಾಗುತ್ತೆ. ಆದರೆ ಸದನಕ್ಕೆ ಗೌರವ ಕೊಡದಿದ್ದರೆ ಈ ರೀತಿ ಕ್ರಮ ಅಗತ್ಯವಾಗಿದೆ ಎಂದು ಸ್ಪೀಕರ್ ಸಮರ್ಥನೆ ಮಾಡಿಕೊಂಡಿದ್ದಾರೆ. ಸದನಕ್ಕೆ ತನ್ನದೇ ಆದ ಗೌರವವಿದೆ. ಅದನ್ನ ಎಲ್ಲರೂ ಗೌರವಿಸಬೇಕು. ಗೌರವಿಸದೆ ಇದನ್ನೂ ಹೀಗೆ ಮುಂದುವರೆಸಿದರೆ ಆರು ತಿಂಗಳಲ್ಲ ಒಂದು ವರ್ಷ ಅಮಾನತು ಮಾಡುವ ಎಚ್ಚರಿಕೆ ರವಾನೆ ಮಾಡಿದ್ದಾರೆ.

ಒಟ್ಟಾರೆ ಹನಿಟ್ರ್ಯಾಪ್ ಆರೋಪದಲ್ಲಿ ನಾಯಕರು ಸೇಫ್ ಆಟ ಆಡಿದ್ರೆ ಅವರನ್ನ ಬಚಾವ್ ಮಾಡಲು ಹೋದ ಕಮಲ ನಾಯಕರು ಅಮಾನತಾಗೆ ಇದೀಗ ಕ್ಷೇತ್ರದಲ್ಲಿ ಕೂರುವ ಪರಿಸ್ಥಿತಿ ಎದುರಾಗಿದೆ. ಸದ್ಯ ಸ್ಪೀಕರ್ ಈ ನಿರ್ಧಾರವನ್ನ ಪುನರ್ ಪರಿಶೀಲನೆ ಮಾಡಿ ಮತ್ತೆ ಸದನಕ್ಕೆ ಬರಲು ಅವಕಾಶ ಕೊಡ್ತಾರಾ ಎಂಬುದಕ್ಕೆ ಮುಂದಿನ ವಾರ ಉತ್ತರ ದೊರೆಯಲಿದೆ.

### ಧರೆಗುರುಳಿದ ಮದ್ದೂರಮ್ಮ ಜಾತ್ರೆಯ ತೇರು

# ಕುರ್ಜು ಕೆಳಗೆ ಸಿಲುಕಿ ಓರ್ವ ಸಾವು

**ಬೆಂಗಳೂರು ಗ್ರಾಮಾಂತರ:** ಮದ್ದೂರಮ್ಮ ಜಾತ್ರೆಯಲ್ಲಿ ಕುರ್ಜುಗಳು (ತೇರು) ಧರೆಗುರುಳಿದ ಘಟನೆ ಆನೇಕಲ್ ತಾಲೂಕಿನಲ್ಲಿ ನಡೆದಿದೆ. ಕುರ್ಜು ಕೆಳಗೆ ಸಿಲುಕಿ ಓರ್ವ ದಾರುಣ ಸಾವನ್ನಪ್ಪಿದ್ದಾರೆ.



ಆನೇಕಲ್ ತಾಲ್ಲೂಕಿನ ಹುಸ್ಕೂರು ಮದ್ದೂರಮ್ಮ ದೇವಿ ಜಾತ್ರೆಯಲ್ಲಿ ಈ ದುರ್ಘಟನೆ ನಡೆದಿದೆ. ಜಾತ್ರೆಗೆ ಗ್ರಾಮಗಳಿಂದ 150 ಕ್ಕೂ ಹೆಚ್ಚು ಅಡಿ ಎತ್ತರದ ಕುರ್ಜುಗಳು ಆಗಮಿಸಿದ್ದವು. ತೇರು ಎಳೆದು ತರುವ ಸಂದರ್ಭದಲ್ಲಿ ಅವಘಡ ಸಂಭವಿಸಿದೆ.

ಮದ್ದೂರಮ್ಮ ಜಾತ್ರೆಗೆ ನೂರಾರು ವರ್ಷಗಳ ಇತಿಹಾಸವಿದೆ. ಟ್ರ್ಯಾಕ್ಟರ್ ಹಾಗೂ ನೂರಾರು ಎತ್ತುಗಳ ಮೂಲಕ ಎಳೆದು ತರುವ ಹೆಸರಾಂತ ಜಾತ್ರೆ ಇದು. ಪ್ರತಿಷ್ಟೆಗೆ ಅತೀ ಎತ್ತರ ತೇರು ಕಟ್ಟಿ ಎಳೆದು ತರುವ ಜಾತ್ರೆ ನೋಡಲು ಲಕ್ಷಾಂತರ ಜನ ಆಗಮಿಸುತ್ತಿದ್ದರು. ಗಾಳಿ ಸಹಿತ ಮಳೆಯಿಂದಾಗಿ ಆಯತಪ್ಪಿ ತೇರು ಬಿದ್ದಿದೆ.

ತೇರಿನಲ್ಲಿ ಇದ್ದ ಹಲವರಿಗೆ ಗಾಯಗಳಾಗಿವೆ. ಕಳೆದ ವರ್ಷ ಹೀಲಲಿಗೆ ತೇರು ಬಿದ್ದಿತ್ತು. ಇಂದು ಗಾಳಿ ಮಳೆ ಹೆಚ್ಚಾಗಿ ಸುರಿದ ಹಿನ್ನೆಲೆ ಅವಘಡ ಸಂಭವಿಸಿದೆ. ಜಾತ್ರೆಮಯ ಸಂಭ್ರಮದ ದಿನ ಸೂತಕದ ಛಾಯೆ ಆವರಿಸಿದೆ.

## ರಾಜ್ಯದಲ್ಲಿ ಪೂರ್ವ ಮುಂಗಾರು ಆಕ್ಟೀವ್ ಮುಂದಿನ ನಾಲ್ಕೈದು ದಿನ ಮಳೆ ಸಾಧ್ಯತೆ

**ಬೆಂಗಳೂರು:** ರಾಜ್ಯದಲ್ಲಿ ಪೂರ್ವ ಮುಂಗಾರು ಆಕ್ಟೀವ್ ಆಗಿದ್ದು, ಮುಂದಿನ ನಾಲ್ಕೈದು ದಿನ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ದಕ್ಷಿಣ ಒಳನಾಡು, ಕರಾವಳಿ ಭಾಗದಲ್ಲಿ ಇಂದು ಕೂಡ ಮಳೆಯಾಗುವ ಸಾಧ್ಯತೆ ಇದೆ. ಗುಡುಗು ಮಿಂಚು ಸಹಿತ ಮಳೆಯಾಗುವ ಸಾಧ್ಯತೆಯಿದ್ದು, ಬೆಂಗಳೂರಿನಲ್ಲೂ ಮಧ್ಯಾಹ್ನದ ಬಳಿಕ ಮಳೆಯಾಗುವ ಸಾಧ್ಯತೆ ಇದೆ.

ನಾಳೆಯಿಂದ ಕೆಲ ಕಡೆ ಚದುರಿದ ಮಳೆಯಾಗುವ ಸಂಭವಿದೆ ಎಂದು ಹವಾಮಾನ ವರದಿ ತಿಳಿಸಿದೆ.

# 12 ವರ್ಷಗಳ ಪರಂಪರೆ ಮುಂಬೈ ಇಂಡಿಯನ್ಸ್ ತಂಡಕ್ಕೆ ಸೋಲುವ ಭೀತಿ

ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಇಂದು (ಮಾ.23) ಡಬಲ್ ಹೆಡ್ಡರ್ ಪಂದ್ಯಗಳು ನಡೆಯಲಿವೆ. ಸಂಜೆ ಜರುಗಲಿರುವ ಮೊದಲ ಮ್ಯಾಚ್ ನಲ್ಲಿ ಸನ್ ರೈಸರ್ಸ್ ಹೈದರಾಬಾದ್ ಹಾಗೂ ರಾಜಸ್ಥಾನ್ ರಾಯಲ್ಸ್ ತಂಡಗಳು ಮುಖಾಮುಖಿಯಾದರೆ, ದ್ವಿತೀಯ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ (ಅಖಿಖಿ) ಹಾಗೂ ಮುಂಬೈ ಇಂಡಿಯನ್ಸ್ (ಒಖಿ) ತಂಡಗಳು ಕಣಕ್ಕಿಳಿಯಲಿವೆ.





ರಾತ್ರಿ 7.30 ರಿಂದ ಶುರುವಾಗಲಿರುವ ಈ ಎಲ್ ಕ್ಲಾಸಿಕೊ ಪಂದ್ಯವು ಇದೀಗ ಎಲ್ಲರ ಕೇಂದ್ರ ಬಿಂದು. ಏಕೆಂದರೆ ಐಪಿಎಲ್ ನ ಎರಡು ಬಲಿಷ್ಠ ತಂಡಗಳ ಮುಖಾಮುಖಿಯಲ್ಲಿ ಶುಭಾರಂಭ ಮಾಡುವವರು ಯಾರು ಎಂಬ ಕುತೂಹಲ ಕ್ರಿಕೆಟ್ ಪ್ರೇಮಿಗಳಲ್ಲಿದೆ. ಹೀಗಾಗಿಯೇ ಇಂದಿನ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳಿಂದ ಭರ್ಜರಿ ಪೈಪೋಟಿ ನಿರೀಕ್ಷಿಸಬಹುದು.

**12 ವರ್ಷಗಳಿಂದ ಗೆಲ್ಲದ ಮುಂಬೈ ಇಂಡಿಯನ್ಸ್:** ಐಪಿಎಲ್ ನಲ್ಲಿ ಮುಂಬೈ ಇಂಡಿಯನ್ಸ್ ಅತ್ಯಂತ ಯಶಸ್ವಿ ತಂಡಗಳಲ್ಲಿ ಒಂದು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಶುಭಾರಂಭ ಮಾಡುವ ವಿಷಯದಲ್ಲಿ ಮುಂಬೈ ಪಡೆ ಕಳೆದ 13 ವರ್ಷಗಳಿಂದ ಹಿಂದೆ ಉಳಿದಿದೆ. ಇದಕ್ಕೆ ಸಾಕ್ಷಿ ಕಳೆದ ಹದಿಮೂರು ವರ್ಷಗಳಲ್ಲಿ ಆರಂಭಿಕ ಪಂದ್ಯಗಳಲ್ಲಿ ಸೋತಿರುವುದು.

ಅಂದರೆ ಮುಂಬೈ ಇಂಡಿಯನ್ಸ್ ಪಡೆಯು ಐಪಿಎಲ್ ನ ತನ್ನ ಮೊದಲ ಪಂದ್ಯದಲ್ಲಿ ಗೆದ್ದು 13 ವರ್ಷಗಳೇ ಕಳೆದಿವೆ. 2012 ರ ಬಳಿಕ ಮುಂಬೈ ಇಂಡಿಯನ್ಸ್ ತಂಡವು ತನ್ನ ಮೊದಲ ಪಂದ್ಯದಲ್ಲಿ ಒಮ್ಮೆಯೂ ಜಯ ಸಾಧಿಸಿಲ್ಲ.

2012 ರಲ್ಲಿ ಸಚಿನ್ ತೆಂಡೂಲ್ಕರ್ ನಾಯಕತ್ವದ ಮುಂಬೈ ಇಂಡಿಯನ್ಸ್ ತಂಡವು ತನ್ನ ಮೊದಲ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಸೋಲುಣಿಸಿತ್ತು. ಈ ಗೆಲುವಿನ ಬಳಿಕ ಮುಂಬೈ ಇಂಡಿಯನ್ಸ್ ಪಾಲಿಗೆ ಶುಭಾರಂಭ ಎಂಬುದು ಮರೀಚಿಕೆಯಾಗಿಯೇ ಉಳಿದಿದೆ.

2013 ರಿಂದ ರೋಹಿತ್ ಶರ್ಮಾ ಮುಂಬೈ ಇಂಡಿಯನ್ಸ್ ತಂಡವನ್ನು ಮುನ್ನಡೆಸಿದ್ದಾರೆ. ಆದರೆ ಕಳೆದ 11 ವರ್ಷಗಳಲ್ಲಿ ಹಿಟ್ ಮ್ಯಾನ್ ಸಾರಥ್ಯದಲ್ಲಿ ಮುಂಬೈ ಇಂಡಿಯನ್ಸ್ ಮೊದಲ ಪಂದ್ಯ ಗೆದ್ದಿರಲಿಲ್ಲ.

2024 ರಲ್ಲಿ ಹಾರ್ದಿಕ್ ಪಾಂಡ್ಯ ಸಾರಥ್ಯದಲ್ಲಿ ಕಣಕ್ಕಿಳಿದ ಮುಂಬೈ ಇಂಡಿಯನ್ಸ್ ಮೊದಲ ಪಂದ್ಯದಲ್ಲಿ ಪರಾಜಯಗೊಂಡಿತ್ತು. ಆದರೆ ಈ ಬಾರಿ ಮುಂಬೈ ಇಂಡಿಯನ್ಸ್ ತಂಡವನ್ನು ತನ್ನ ಮೊದಲ ಪಂದ್ಯದಲ್ಲಿ ಸೂರ್ಯಕುಮಾರ್ ಯಾದವ್ ಮುನ್ನಡೆಸಲಿದ್ದಾರೆ.

ಕಳೆದ ಸೀಸನ್ ನ ಕೊನೆಯ ಪಂದ್ಯದಲ್ಲಿ ಸ್ಲೋ ಓವರ್ ರೇಟ್ ತಪ್ಪು ಮಾಡಿದ್ದ ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯಗೆ ಒಂದು ಪಂದ್ಯದ ನಿಷೇಧ ಹೇರಲಾಗಿದ್ದು, ಹೀಗಾಗಿ ಇಂದು ನಡೆಯಲಿರುವ ಸಿಎಸ್ ಕೆ ಪಂದ್ಯದಲ್ಲಿ ಸೂರ್ಯಕುಮಾರ್ ಯಾದವ್ ನಾಯಕನಾಗಿ ಕಾಣಿಸಿಕೊಳ್ಳಲಿದ್ದಾರೆ.

ಇತ್ತ 12 ವರ್ಷಗಳಿಂದ ಮುಂಬೈ ಇಂಡಿಯನ್ಸ್ ಪಾಲಿಗೆ ಮರೀಚಿಕೆಯಾಗಿರುವ ಶುಭಾರಂಭವು ಸೂರ್ಯಕುಮಾರ್ ಯಾದವ್ ನಾಯಕತ್ವದಲ್ಲಿ ದಕ್ಕಲಿದೆಯಾ ಎಂಬುದೇ ಪ್ರಶ್ನೆ. ಆದರೆ ದಕ್ಕುವುದಿದ್ದರೂ ಅದು ಅಂದುಕೊಂಡಷ್ಟು ಸುಲಭದಲ್ಲಿ ದಕ್ಕುವುದಿಲ್ಲ. ಏಕೆಂದರೆ ಮುಂಬೈ ಇಂಡಿಯನ್ಸ್ ತಂಡವು ತನ್ನ ಮೊದಲ ಪಂದ್ಯವನ್ನು ಆಡುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡ ತವರು ಮೈದಾನ ಚೆಪಾಕ್ ಸ್ಟೇಡಿಯಂನಲ್ಲಿ.

ಹೀಗಾಗಿ ಚೆನ್ನೈನ ಚೆಪಾಕ್ ಸ್ಟೇಡಿಯಂನಲ್ಲಿ ನಡೆಯಲಿರುವ ಈ ಎಲ್ ಕ್ಲಾಸಿಕೊ ಪಂದ್ಯದಲ್ಲಿ ಉಭಯ ತಂಡಗಳಿಂದ ರಣರೋಚಕ ಪೈಪೋಟಿಯನ್ನು ನಿರೀಕ್ಷಿಸಬಹುದು.

## ಹನಿಟ್ರ್ಯಾಪ್ ಆರೋಪ ಮುಂದೆಯೂ ಬರಬಹುದು: ರಾಜಣ್ಣ ಹೊಸ ಬಾಂಬ್

**ಕೋಲಾರ:** ಹನಿಟ್ರ್ಯಾಪ್ ಆರೋಪ ಮುಂದೆಯೂ ಬರಬಹುದು ಎಂದು ಹೇಳುವ ಮೂಲಕ ಕೋಲಾರದಲ್ಲಿ ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೊಸ ಬಾಂಬ್ ಸಿಡಿಸಿದ್ದಾರೆ.



ಹನಿಟ್ರ್ಯಾಪ್ ಕುರಿತು ಕೋಲಾರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹನಿಟ್ರ್ಯಾಪ್ ಕುರಿತು ವಿಧಾನಸಭೆಯಲ್ಲಿ ಹೇಳುವಷ್ಟು ಹೇಳಿದ್ದೇನೆ. ಅದನ್ನು ಹೊರತು ಪಡಿಸಿ ಹೇಳುವಷ್ಟು ಏನು ಇಲ್ಲ. ಈ ಆರೋಪ ಒಂದಲ್ಲ, ಕಡೆಯದೂ ಅಲ್ಲ, ಮುಂದೆಯೂ ಬರಬಹುದು ಎಂದು ಹೇಳಿದರು.

ಹನಿಟ್ರ್ಯಾಪ್ ತನಿಖೆ ಕುರಿತು ಸಿಎಂ ಹಾಗೂ ಗೃಹಮಂತ್ರಿಗಳಿಗೆ ಬಿಟ್ಟ ವಿಚಾರ ಎಂದರು. ಡಿ.ಕೆ.ಶಿವಕುಮಾರ್ ಜೊತೆ ಚರ್ಚೆ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಪ್ರತಿದಿನ ಅವರ ಜೊತೆ ಮಾತನಾಡುವೆ ಎಂದು ತಿಳಿಸಿದರು.

ವಿಧಾನಸಭೆಯಲ್ಲಿ ಶಾಸಕರ ಅಮಾನತು ವಿಷಯದಲ್ಲಿ ನಾನಾಗಿದಿದ್ದರೆ ಇನ್ನೂ ಮುಂಚಿತವಾಗಿ ಈ ಕೆಲಸ ಮಾಡುತ್ತಿದ್ದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಕಪ್ಪು ಚುಕ್ಕೆ, ಜನಪರ ವಿಚಾರವನ್ನಿಟ್ಟುಕೊಂಡು ಶಾಸಕರು ಚರ್ಚೆ ಮಾಡುತ್ತಿಲ್ಲ. ಬಜೆಟ್ ಬಗ್ಗೆ 80 ಶಾಸಕರು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಸಿಎಂ ಉತ್ತರ ಕೊಡಬೇಕಾಗಿದೆ. ಬಜೆಟ್ ಮೇಲಿನ ಸಿಎಂ ಉತ್ತರಕ್ಕೆ ಅಡಚಣೆ ಮಾಡಲು ಈ ರೀತಿ ಮಾಡಿದ್ದಾರೆ. ಇದು ಪ್ರಜಾಪ್ರಭುತ್ವದಲ್ಲಿ ಕಪ್ಪುಚುಕ್ಕೆ. ನಾನು ಸ್ಪೀಕರ್ ಆಗಿದ್ದರೆ ಮೊದಲೇ ಸಸ್ಪೆಂಡ್ ಮಾಡುತ್ತಿದೆ ಎಂದು ನುಡಿದರು.

ರಾಜ್ಯದಲ್ಲಿ 5 ವರ್ಷ ಸರ್ಕಾರ ಅವಧಿ ಪೂರೈಕೆ ಮಾಡುತ್ತೆ, ಸಿಎಂ ಸಿದ್ದರಾಮಯ್ಯ 5 ವರ್ಷ ಇರುತ್ತಾರೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಅದು ಹೈಕಮಾಂಡ್ ನಿರ್ಧಾರ ಮಾಡುತ್ತೆ ಎಂದರು. ಕರ್ನಾಟಕ ಬಂದ್ ವಿಚಾರ ಸಂಬಂದ ಮಾತನಾಡಿದ ಅವರು, ಬೆಂಗಳೂರು ಬಂದ್ ಮಾಡಿದ್ರೆ ಬೆಳಗಾವಿ ಕನ್ನಡಿಗರಿಗೆ ರಕ್ಷಣೆ ಸಿಗುತ್ತಾ, ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಿ ಎಂದು ಹೇಳಿದರು.

### ಹನಿಟ್ರ್ಯಾಪ್ ಪ್ರಕರಣ

## ಡಿಜಿಗೆ ದೂರು ಕೊಡಲು ರಾಜಣ್ಣ ಪುತ್ರಗೆ ಸಿಎಂ ಸೂಚನೆ



**ಬೆಂಗಳೂರು:** ರಾಜ್ಯದಲ್ಲಿ ಹನಿಟ್ರ್ಯಾಪ್ ಹಂಗಾಮಾ ತೀವ್ರಗೊಳ್ಳುತ್ತಿದೆ. ಇದರ ನಡುವೆ ಸಚಿವ ರಾಜಣ್ಣ ಪುತ್ರ, ಎಂಎಲ್‌ಸಿ ರಾಜೇಂದ್ರ, ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಘಟನೆ ಬಗ್ಗೆ ವಿವರ ನೀಡಿದ್ರು. ಈ ಸಂಬಂಧ ಡಿಜಿಗೆ ದೂರು ಕೊಡಲು ಸಿಎಂ ಸೂಚಿಸಿದ್ದಾರೆ.

ವಕೀಲರ ಜೊತೆ ಸಮಾಲೋಚನೆ ನಡೆಸಿ ಒಂದೆರಡು ದಿನದಲ್ಲಿ ದೂರು ಕೊಡ್ತೇನೆ. ಹನಿಟ್ರ್ಯಾಪ್ ಹಿಂದೆ ತುಂಬಾ ದೊಡ್ಡ ವ್ಯಕ್ತಿಗಳು ಇದ್ದಾರೆ ಅಂತ ರಾಜೇಂದ್ರ ಪುನರುಚ್ಚರಿಸಿದ್ರು. ಇನ್ನೂ ಹನಿಟ್ರ್ಯಾಪ್ ಪ್ರಕರಣದ ವಿಚಾರವಾಗಿ ಘರ್ಜಿಸುವ ಹುಲಿಗೆ ಸಿಡಿ ತೋರಿಸುವ ಕೆಲಸ ಆಗ್ತಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ಡಿಕೆಶಿಯ ಹಲೋ ವ್ಯಂಗ್ಯಕ್ಕೆ ಅಷ್ಟೇ ವ್ಯಂಗ್ಯವಾಗಿ ಜಾರಕಿಹೊಳಿ ತಿರುಗೇಟು ನೀಡಿದ್ದಾರೆ.

ಹನಿಟ್ರ್ಯಾಪ್ ಆರೋಪ ಇದು ಮೊದಲೂ ಅಲ್ಲ, ಕೊನೆಯೂ ಅಲ್ಲ, ಮುಂದೆನೂ ಬರಬಹುದು. ನನಗೆ ಹಿನ್ನೆಡೆ ಆಗಲ್ಲ. ನಾನೇನೂ ಕಳ್ಳತನ ಮಾಡಿಲ್ಲ. ಎರಡ್ಮೂರು ದಿನದಲ್ಲಿ ದೂರು ನೀಡ್ತೇನೆ ಎಂದು ಸಚಿವ ರಾಜಣ್ಣ ಹೇಳಿದ್ರು.

ರಾಜಣ್ಣ ಅಗ್ರೆಸ್ಸಿವ್ ಧೋರಣೆ ಕಡಿಮೆ ಆಗಲ್ಲ ಎಂದು ಸಚಿವ ಮಹದೇವಪ್ಪ ಹೇಳಿದ್ದು, ನಾನು ಎಲ್ರಿಗೂ ಹಲೋ ಅಂತೇನೆ ಎಂದು ಡಿಸಿಎಂಗೆ ಟಾಂಗ್ ಕೊಟ್ರು. ಹನಿಟ್ರ್ಯಾಪ್ ಬೆಳವಣಿಗೆಗಳ ಬಗ್ಗೆ ಕೆ.ಸಿ ವೇಣುಗೋಪಾಲ್ ಬೇಸರ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಹನಿಟ್ರ್ಯಾಪ್ ಬಗ್ಗೆ ಸದನದಲ್ಲಿ ಚರ್ಚೆ ಮಾಡಬಾರದಿತ್ತು ಎಂದು ಮಾಜಿ ಸಿಎಂ ಮೊಯ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

### ನಿರ್ಣಯ ಅಂಗೀಕಾರ

1971ರ ಜನಗಣತಿಯ ಆಧಾರದ ಮೇಲೆ ಸಂಸದೀಯ ಕ್ಷೇತ್ರಗಳ ಮೇಲಿನ ಸ್ಥಗಿತಗೊಳಿಸುವಿಕೆಯು ಜನಸಂಖ್ಯಾ ಬೆಳವಣಿಗೆಯನ್ನು ಸ್ಥಿರಗೊಳಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡ ರಾಜ್ಯಗಳನ್ನು ರಕ್ಷಿಸಲು ಮತ್ತು ಪ್ರೋತ್ಸಾಹಿಸಲು ಉದ್ದೇಶಿಸಲಾಗಿದೆ ಎಂದು ಜೆಎಸಿ ಒತ್ತಿಹೇಳಿದೆ.

ಚೆನ್ನೈನಲ್ಲಿ ನಡೆದ ಜಂಟಿ ಕ್ರಿಯಾ ಸಮಿತಿಯ ಮುಖ್ಯ ನಿರ್ಣಯಗಳು ಹೀಗಿವೆ:

- 1971 ರ ಜನಗಣತಿಯ ಆಧಾರದಲ್ಲಿ ಮಾಡಿದ ಸಂಸದೀಯ ಕ್ಷೇತ್ರಗಳ ಪುನಾರಚನೆ 25 ವರ್ಷಗಳವರೆಗೆ ವಿಸ್ತರಿಸಬೇಕು
- ಜನಸಂಖ್ಯೆಯನ್ನು ಯಶಸ್ವಿಯಾಗಿ ನಿಯಂತ್ರಿಸಿದ ರಾಜ್ಯಗಳ ಪ್ರಾತಿನಿಧ್ಯವನ್ನು ರಕ್ಷಿಸಬೇಕು
- ಕೇಂದ್ರ ಸರ್ಕಾರವು ಭವಿಷ್ಯದಲ್ಲಿ ನಡೆಸುವ ಯಾವುದೇ ಪುನಾರಚನೆ ಪ್ರಕ್ರಿಯೆಯು ಪಾರದರ್ಶಕವಾಗಿರಬೇಕು
- ಪುನಾರಚನೆ ರಾಜ್ಯ ಸರ್ಕಾರಗಳು, ರಾಜಕೀಯ ಪಕ್ಷಗಳ ಸಮಾಲೋಚನೆ, ಚರ್ಚೆ ಮತ್ತು ಸಹಭಾಗಿತ್ವವನ್ನು ಒಳಗೊಂಡಿರಬೇಕು
- ಜನಸಂಖ್ಯೆ ನಿಯಂತ್ರಣದಲ್ಲಿ ಯಶಸ್ವಿ ರಾಜ್ಯಗಳ ರಕ್ಷಣೆಯಾಗಬೇಕು
- ಜನಸಂಖ್ಯೆ ನಿಯಂತ್ರಣ ಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದ ರಾಜ್ಯಗಳಿಗೆ ಶಿಕ್ಷೆ ನೀಡಬಾರದು
- ರಾಜ್ಯಗಳ ಸಂಸದೀಯ ಸ್ಥಾನಗಳು ಕಡಿಮೆಯಾಗದಂತೆ ಸಂವಿಧಾನ ತಿದ್ದುಪಡಿಗಳನ್ನು ಮಾಡಬೇಕು
- ಸಭೆಯಲ್ಲಿ ಭಾಗವಹಿಸಿದ ರಾಜ್ಯಗಳ ಸಂಸದರನ್ನು ಒಳಗೊಂಡ ಪ್ರಮುಖ ಸಮಿತಿಯನ್ನು ರಚಿಸಬೇಕು
- ಈ ವಿಷಯಗಳ ಬಗ್ಗೆ ಸಂಸತ್ತಿನಲ್ಲಿ ಒಗ್ಗಟ್ಟಿನ ಹೋರಾಟ ಮಾಡಬೇಕು
- ಪ್ರಧಾನಮಂತ್ರಿ ನರೇಂದ್ರ ಮೋದಿಗೆ ಜಂಟಿ ಮನವಿಯನ್ನು ಸಮಿತಿ ಮೂಲಕ ಸಲ್ಲಿಸಬೇಕು
- ಸಭೆಯಲ್ಲಿ ಭಾಗವಹಿಸಿದ ರಾಜಕೀಯ ಪಕ್ಷಗಳು ತಮ್ಮ ರಾಜ್ಯ ವಿಧಾನಸಭೆಗಳಲ್ಲಿ ಪುನಾರಚನೆ ವಿರುದ್ಧ ನಿರ್ಣಯ ಅಂಗೀಕರಿಸಬೇಕು
- ಭವಿಷ್ಯದ ಪುನಾರಚನೆಯ ಪರಿಣಾಮಗಳ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನವನ್ನು ಕೈಗೊಳ್ಳಬೇಕು
- ತಮ್ಮ ರಾಜ್ಯಗಳಲ್ಲಿ ಸಂಯೋಜಿತ ಜನಮತ ಕಟ್ಟುವ ತಂತ್ರವನ್ನು ರೂಪಿಸಬೇಕು

### ಮನವಿ ಮಾಡಲಿ

ಹನಿಟ್ರ್ಯಾಪ್ ವಿಚಾರದಲ್ಲಿ ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಏಕಾಏಕಿ ಮಾತನಾಡಲು ಮುಂದಾದಾಗಲೂ ಅವಕಾಶ ನೀಡಿದ್ದೇನೆ. ಸಚಿವರು ಉತ್ತರಿಸಿದರು. ಗೃಹ ಸಚಿವರು, ಸಿಎಂ ಸಹ ದೂರು ಬಂದ ಮೇಲೆ ತನಿಖೆ ನಡೆಸುವುದಾಗಿ ಭರವಸೆ ನೀಡಿದರು. ಹೀಗಿದ್ದೂ ಕಲಾಪಕ್ಕೆ ಅಡ್ಡಿ ಪಡಿಸುವುದು ಎಷ್ಟು ಸರಿ? ಎಂದು ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡರು.

### ಮಹಿಳೆಗೆ ಹಲ್ಲೆ

ನಾವು ಏನು ಮಾಡಬೇಕು? ನಾವು ಕಳ್ಳರನ್ನು ಕಟ್ಟಿ ಹಾಕದೆ ಇನ್ನೇನು ಮಾಡಲು ಸಾಧ್ಯ? ನಾವು ಅವರ ಮೇಲೆ ಮಚ್ಚು, ಕತ್ತಿ ಅಥವಾ ಮಾರಕ ಆಯುಧಗಳಿಂದ ದಾಳಿ ಮಾಡಿದ್ದೇವಾ? ಕೇವಲ ಕಪಾಳಮೋಕ್ಷ, ಮಹಿಳೆಯೇ ಕೃತ್ಯವನ್ನು ಒಪ್ಪಿಕೊಂಡಿದ್ದಾಳೆ ಎಂದು ಹೇಳಿದ್ದರು.

ಈ ಹೇಳಿಕೆ ಹಿನ್ನೆಲೆಯಲ್ಲಿ ಮಲ್ಪೆ ಪೊಲೀಸರು ಸುಮೋಟೋ ಕೇಸು ದಾಖಲಿಸಿದ್ದಾರೆ. ದ್ವೇಷ ಭಾವನೆಯಿಂದ ಪ್ರಚೋದನಕಾರಿ ಭಾಷಣ ಮಾಡಿದ್ದಾರೆಂದು, ಬಿಎನ್ ಎಸ್ 57, 191 (1)192 ನಂತೆ ಪ್ರಕರಣ ದಾಖಲಿಸಲಾಗಿದೆ. ಸಾರ್ವಜನಿಕವಾಗಿ ಕಟ್ಟಿಹಾಕಿದ್ದು ಸರಿ ಎಂಬುದನ್ನು ಮಧ್ವರಾಜ್ ಸಮರ್ಥಿಸಿದ್ದಾರೆ

ಮೊದಲನೇ ಪುಟದಿಂದ...

ಎಂಬ ಹಿನ್ನೆಲೆಯಲ್ಲಿ ಕೇಸ್ ದಾಖಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ ತಿಳಿಸಿದ್ದಾರೆ.

### ಪಿಎಸ್‌ಐ ಅಮಾನತು

ಪಿಎಸ್ ಐ ಸಂತೋಷ ಹಣ ನೀಡುತ್ತೇನೆಂದು ಹೇಳಿದ್ದು, ಭದ್ರತೆಗೆ ನಿವೇಶನ ಕರಾರು ಮಾಡಿಕೊಟ್ಟಿದ್ದರು.

ಆದರೆ, ನಿವೇಶನವನ್ನು ಪಿಎಸ್ ಐ ಸಂತೋಷ್ ಬೇರೆಯವರಿಗೆ ಮಾರಿದ್ದರು. ಈ ಹಿನ್ನೆಲೆಯಲ್ಲಿ ಚಿನ್ನದ ಅಂಗಡಿ ಮಾಲೀಕ ಮತ್ತೆ ಪಿಎಸ್ ಐ ಸಂತೋಷರನ್ನು ಪ್ರಶ್ನಿಸಿದ್ದಾರೆ. ಆಗ, ಪಿಎಸ್ ಐ ಸಂತೋಷ ಚಿನ್ನದ ಅಂಗಡಿ ಮಾಲಿಕರಿಗೆ ಖಾಲಿ ಚೆಕ್ ನೀಡಿದ್ದರು. ಆದರೆ, ಚೆಕ್ ಕೂಡ ಬೌನ್ಸ್ ಆಗಿತ್ತು. ಮತ್ತೆ ಹಣ ಅಥವಾ ಚಿನ್ನ ಕೇಳಿದಾಗ ಪಿಎಸ್‌ಐ ಸಂತೋಷ್ ಬೆದರಿಕೆ ಹಾಕಿದ್ದರು.

ಈ ಬಗ್ಗೆ ಚಿನ್ನದ ಅಂಗಡಿ ಮಾಲೀಕ ಪಶ್ಚಿಮ ವಿಭಾಗ ಡಿಸಿಪಿಗೆ ದೂರು ನೀಡಿದ್ದರು. ಎಸಿಪಿ ನೇತೃತ್ವದಲ್ಲಿ ಪ್ರಾಥಮಿಕ ವಿಚಾರಣೆ ನಡೆಸಿ ವರದಿ ಸಲ್ಲಿಕೆಯಾಗಿದೆ. ಪ್ರಾಥಮಿಕ ವರದಿ ಆಧಾರದ ಮೇಲೆ ಪಿಎಸ್ ಐ ಮೇಲೆ ಕ್ರಮಕ್ಕೆ ಸೂಚನೆ ನೀಡಲಾಗಿದೆ. ಹೀಗಾಗಿ, ಹಲಸೂರು ಗೇಟ್ ಠಾಣೆಯಲ್ಲಿ ಪಿಎಸ್ ಐ ಸಂತೋಷ್ ವಿರುದ್ಧ ಅಧಿಕಾರ ದುರುಪಯೋಗ, ವಂಚನೆ ಕೇಸ್ ದಾಖಲಾಗಿದೆ.

ಎಫ್‌ಐಆರ್ ದಾಖಲಾದ ಹಿನ್ನೆಲೆಯಲ್ಲಿ ಪಿಎಸ್‌ಐ ಸಂತೋಷ್ ರನ್ನು ಅಮಾನತು ಮಾಡಿ ಪೊಲೀಸ್ ಕಮಿಷನರ್ ದಯಾನಂದ ಆದೇಶ ಹೊರಡಿಸಿದ್ದಾರೆ.

### ವೇದಾವತಿ ನದಿ ಒಡಲು

ಆದ್ರೆ, ಇದೀಗ ನದಿಯಲ್ಲಿ ನೀರು ಬತ್ತಿರೋದ್ರಿಂದ ನದಿಯಲ್ಲೇ ಬೋರ್ ವೆಲ್ ಹಾಕಿಸುವ ಸಾಹಸಕ್ಕೆ ಕೈ ಹಾಕಿದ್ದಾರೆ. ಈಗಾಗಲೇ ಭತ್ತದ ಬೆಳೆ ತೆನೆ ಕಟ್ಟಿದ್ದು ಒಂದೇ ನೀರು ತಪ್ಪಿದ್ರೆ, ಅರ್ಧದಷ್ಟು ಇಳುವರಿ ಕಡಿಮೆ ಆಗುವ ಆತಂಕದಲ್ಲಿ ರೈತರಿದ್ದಾರೆ.

ಸದ್ಯ ನದಿಯಲ್ಲಿ ನೀರು ಬತ್ತಿರೋದ್ರಿಂದ ರೈತರು ಬೆಳೆ ಕಳೆದುಕೊಳ್ಳುವ ಆತಂಕದ ಜೊತೆ ಜಲ-ಚರಗಳಿಗೂ ಸಂಕಷ್ಟ ಎದುರಾಗಿದೆ. ಬಿರು ಬಿಸಿಲಿನ ತಾಪಮಾನಕ್ಕೆ ಸಿಕ್ಕು ನದಿಯಲ್ಲಿ ನೀರಿಲ್ಲದೇ ಮೀನುಗಳು ಸತ್ತು ಬಿದ್ದಿವೆ. ಹೀಗಾಗಿ ರೈತರ ಮನವಿಯಂತೆ ಸರ್ಕಾರ ಎಚ್ಚೆತ್ತುಕೊಂಡು ಕಾಲುವೆ ಮೂಲಕ ನದಿಗೆ ನೀರು ಹರಿಸಿ, ರೈತರ ಬದುಕಿನ ಜೊತೆಗೆ ಜಲಚರಗಳನ್ನು ಬದುಕಿಸುವ ಕೆಲಸಕ್ಕೆ ಮುಂದಾಗುತ್ತಾ ಅನ್ನೋದನ್ನ ಕಾದು ನೋಡಬೇಕಿದೆ.

### ಕೊಡಲಿ ಏಟು!

ಸರ್ಕಾರ ಅರಣ್ಯ ಇಲಾಖೆ ಜಾಗದಲ್ಲಿ ಆಹಾರ ಸೌಧ ಮಾಡಲು ತಯಾರಿ ನಡೆಸಿದೆ. ಹೀಗಾಗಿ ಬೆಂಗಳೂರಿನ ಅಲಿಅಸ್ಕರ್ ರಸ್ತೆಯಲ್ಲಿ 100 ವರ್ಷಗಳಷ್ಟು ಹಳೆಯದಾದ 23 ಮರಗಳಿಗೆ ಕೊಡಲಿ ಏಟು ನೀಡಿದೆ. ಇದಕ್ಕೆ ಸಾರ್ವಜನಿಕರಿಂದ ಭಾರೀ ಆಕ್ರೋಶ ವ್ಯಕ್ತವಾಗಿದೆ. ಮೊದಲೇ ಕಾಂಕ್ರೀಟ್ ಕಾಡಿನಂತಾಗಿರುವ ಬೆಂಗಳೂರಿನಲ್ಲಿ ಮರಗಳನ್ನು ಕಡಿದು ಇನ್ನಷ್ಟು ಅಪಾಯ ತಂದೊಡ್ಡಬೇಡಿ ಎಂದು ಜನರು ಮನವಿ ಮಾಡಿದ್ದಾರೆ. ಇದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ಎಂಬುದನ್ನು ಕಾದುನೋಡಬೇಕಿದೆ.

### ಆತ್ಮಹತ್ಯೆ

ಕಳೆದ ನಾಲ್ಕು ವರ್ಷದ ಹಿಂದೆ ವಿಘ್ನೇಶ್‌ಗೆ ಅಪಘಾತವಾಗಿತ್ತು. ಆಗ ಅಪಘಾತದಲ್ಲಿ ತನ್ನ 17 ಹಲ್ಲುಗಳನ್ನ ಕಳೆದುಕೊಂಡಿದ್ದ. ಹಾಗಾಗಿ ಆಗಾಗ ಆಸ್ಪತ್ರೆಗೆ ಹೋಗಿ ಬರುತ್ತಿದ್ದ. ಸದಾ ಆಸ್ಪತ್ರೆಗೆ ಹೋಗಬೇಕು ಎಂದು ಬೇಜಾರಾಗಿ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಎದೆಮಟ್ಟಕ್ಕೆ ಬೆಳೆದು ನಿಂತ ಮಗ ಆತ್ಮಹತ್ಯೆಗೆ ಶರಣಾಗಿದ್ದಕ್ಕೆ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿದೆ. ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಮಹಿಳೆಯರು

ಈ ಸಮಯದಲ್ಲಿ, ವಧು-ವರರ ನಡುವೆ ಯಾವುದೇ ರೀತಿಯ ಸಂಭಾಷಣೆ ಇರುವುದಿಲ್ಲ. ಇದೇ ಗ್ರಾಮದಲ್ಲಿ, ಸಾವನ್ ತಿಂಗಳಲ್ಲಿಯೂ ಸಹ ಮದುವೆಯ ನಂತರ ಬಟ್ಟೆಗಳನ್ನು ಧರಿಸದಿರುವ ವಿಶಿಷ್ಟ ಸಂಪ್ರದಾಯವನ್ನು ಅನುಸರಿಸಲಾಗುತ್ತದೆ. ಈ ಸಮಯದಲ್ಲಿ ವಧುವಿಗೆ ಪಟ್ಟು ಎಂಬ ಉಣ್ಣೆಯ ಬಟ್ಟೆಯನ್ನು ಧರಿಸಲು ಅವಕಾಶವಿದೆ.

ವರನು ಸಹ ಪಾಲಿಸಬೇಕಾದ ಕೆಲವು ನಿಯಮಗಳಿವೆ. ಮದುವೆಯ ನಂತರ, ವರನು ಮೊದಲ ವಾರದಲ್ಲಿ ಮದ್ಯವನ್ನು ಮುಟ್ಟಬಾರದು. ವಧು-ವರರು ಈ ಪದ್ಧತಿಗಳನ್ನು ಪಾಲಿಸಿದರೆ, ಅವರಿಗೆ ಅದೃಷ್ಟ ದೊರೆಯುತ್ತದೆ ಎಂದು ನಂಬಲಾಗಿದೆ.

ಮಣಿಪುರದಲ್ಲಿದೆ ವಿಶಿಷ್ಟ ಅಚರಣೆ ನ್ಗಾ ಥಾಬಾ: ಮಣಿಪುರದಲ್ಲಿದೆ ವಿಶೇಷ ಆಚರಣೆ ಮಣಿಪುರಿ ವಿವಾಹದ ಕೊನೆಯ ಆಚರಣೆ ನ್ಗಾ ಥಾಬಾ, ಇದರಲ್ಲಿ ವಧು ಮತ್ತು ವರನ ಕುಟುಂಬದ ಇಬ್ಬರು ಮಹಿಳೆಯರು ಎರಡು ಮೀನುಗಳನ್ನು ನೀರಿನಲ್ಲಿ ಬಿಡುತ್ತಾರೆ. ಈ ಕಾರ್ಯವು ವಧು ಮತ್ತು ವರನ ವಿವಾಹವನ್ನು ಚಿತ್ರಿಸುತ್ತದೆ.

ಈ ಮೀನುಗಳು ಜೊತೆಯಾಗಿ ಈಜಿದರೆ, ದಂಪತಿಗಳು ಕೂಡ ತಮ್ಮ ಸಂತೋಷದ ವೈವಾಹಿಕ ಜೀವನವನ್ನು ಆನಂದಿಸುತ್ತಾರೆ ಎಂಬ ನಂಬಿಕೆ ಇದೆ. ಹೆಚ್ಚಾಗಿ ವರನ ಕಡೆಯ ಇಬ್ಬರು ಮಹಿಳೆಯರು ಮತ್ತು ವಧುವಿನ ಕಡೆಯ ಒಬ್ಬ ಮಹಿಳೆ ಈ ವಿಧಿಯನ್ನು ನಡೆಸಿಕೊಡುತ್ತಾರೆ, ಈ ಆಚರಣೆ ಸಾಮರಸ್ಯ ಮತ್ತು ಒಡನಾಟವನ್ನು ಸಂಕೇತಿಸುತ್ತದೆ.

ಉತ್ತರ ಪ್ರದೇಶದ ಸರಸೌಲ್‌ನ ಕೆಲವು ಪ್ರದೇಶಗಳಲ್ಲಿ, ಗುಲಾಬಿ ದಳಗಳ ಬದಲಿಗೆ ವರನ ಕುಟುಂಬದ ಮೇಲೆ ಟೊಮೆಟೊಗಳನ್ನು ಸುರಿಯುವ ಆಚರಣೆ ವಿಚಿತ್ರವಾದರೂ ಮೋಜಿನಿಂದ ಕೂಡಿರುತ್ತದೆ.

# ಕಾವೇರಿ ಆರತಿ: ಪ್ರತಿಜ್ಞಾವಿಧಿ ಬೋಧಿಸಿದ ಡಿಸಿಎಂ ಡಿಕೆಶಿ



**ಬೆಂಗಳೂರು:** ತೇಲುವ ವೇದಿಕೆ ಮೇಲೆ ತಾಯಿ ಗಂಗಮ್ಮ ದೇವಿಗೆ ನಮನ, ತಲಕಾವೇರಿಯಿಂದ ತಂದ ಕಾವೇರಿ ನೀರನ್ನು ಹಾಕಿ ಕಾವೇರಿ ಆರತಿ, ವರ್ಣರಂಜಿತ ದೀಪಾಲಂಕಾರ, ಸಾಂಸ್ಕೃತಿಕ ಕಾರ್ಯಕ್ರಮ, ಮಂತ್ರ ಘೋಷಗಳ ಭಕ್ತಿ ಭಾವದ ಜತೆಗೆ ಜಲ ಹಾಗೂ ಜಲ ಮೂಲಗಳ ಸಂರಕ್ಷಣೆಗಾಗಿ ಪ್ರತಿಜ್ಞಾ ಸ್ವೀಕಾರ... ಇವಿಷ್ಟೂ ಬೆಂಗಳೂರಿನ ಇತಿಹಾಸದಲ್ಲೇ ಮೊದಲ ಬಾರಿಗೆ ಸ್ಯಾಂಕಿ ಕೆರೆಯಲ್ಲಿ ಶುಕ್ರವಾರ ನಡೆದ ಕಾವೇರಿ ಆರತಿ ಕಾರ್ಯಕ್ರಮದ ಚಿತ್ರಣ.

ರಾಜ್ಯ ಬೇಸಿಗೆ ಎದುರಿಸುತ್ತಿರುವ ಹೊತ್ತಿನಲ್ಲಿ, ಮಾ.22ರಂದು ವಿಶ್ವ ಜಲ ದಿನದ ಅಂಗವಾಗಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಬೆಂಗಳೂರು ಜಲ ಮಂಡಳಿ, ಜಲಸಂಪನ್ಮೂಲ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆ ಸಹಯೋಗದಲ್ಲಿ ಕಾವೇರಿ ಆರತಿ ಹಾಗೂ ಬೃಹತ್ ಪ್ರತಿಜ್ಞಾ ವಿಧಿ ಸ್ವೀಕಾರ ಕಾರ್ಯಕ್ರಮವನ್ನು ನಡೆಸಲಾಯಿತು. ಜಲಸಂರಕ್ಷಣೆಯ ಪ್ರತಿಜ್ಞಾವಿಧಿಯಲ್ಲಿ ಸಾವಿರಾರು ಜನರು ಭಾಗವಹಿಸಿ ಹೊಸ ದಾಖಲೆ ಬರೆಯಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, ''ವಿಶ್ವ ಜಲ ದಿನ ಅಂಗವಾಗಿ ಇಂದಿನಿಂದ ಬೃಹತ್ ಪ್ರತಿಜ್ಞಾ ವಿಧಿ ಸ್ವೀಕಾರ ಅಭಿಯಾನಕ್ಕೆ ನಿಮ್ಮನ್ನು ಆಹ್ವಾನಿಸಿದ್ದೇನೆ. ಇಂದು ಪವಿತ್ರವಾದ ಕಾವೇರಿ ಆರತಿ ಮೂಲಕ ಚಾಲನೆ ನೀಡಲಾಗುತ್ತಿದೆ. ನೀವೆಲ್ಲರೂ ದೊಡ್ಡ ಸಂಖ್ಯೆಯಲ್ಲಿ ಬಂದಿದ್ದೀರಿ. ನಿಮಗೆ ಸರ್ಕಾರದ ಪರವಾಗಿ ಹೃದಯಪೂರ್ವಕವಾಗಿ ಧನ್ಯವಾದ ಅರ್ಪಿಸುತ್ತೇನೆ. ಇಂದು ಬೆಳಗ್ಗೆ ತಲಕಾವೇರಿಗೆ ಹೋಗಿ ಕಾವೇರಿ ಪೂಜೆ ಮಾಡಿ, ಪವಿತ್ರ ಕಾವೇರಿ ಜಲವನ್ನು ತಂದು ಮಲ್ಲೇಶ್ವರದಲ್ಲಿರುವ ಸ್ಯಾಂಕಿ ಕೆರೆಗೆ ಅರ್ಪಿಸಿ ಪವಿತ್ರವಾದ ಕಾರ್ಯಕ್ರಮ ನಡೆಸಲಾಗಿದೆ.'' ಎಂದು ತಿಳಿಸಿದರು.

''ನಮ್ಮ ದಿನನಿತ್ಯದ ಜೀವನ ಆರಂಭವಾಗುವುದೇ ನೀರಿನಿಂದ. ನೀರಿಲ್ಲದೆ ನಾವು ಬದುಕಲು ಸಾಧ್ಯವಿಲ್ಲ. ನೀರಿನಿಂದಲೇ ನಾಗರೀಕತೆ, ನೀರಿನಿಂದಲೇ ಧರ್ಮ, ನೀರಿಲ್ಲದೆ ಪರಮಾತ್ಮನಿಲ್ಲ. ಇಲ್ಲಿನ ಸುತ್ತ ಮುತ್ತಲಿನ ಪ್ರದೇಶದಲ್ಲಿ ಶಕ್ತಿ ದೇವತೆಗಳಾದ ಗಂಗಮ್ಮ, ಮಾರಮ್ಮ, ಕಾಡುಮಲ್ಲೇಶ್ವರ, ಲಕ್ಷ್ಮಿ ನರಸಿಂಹಸ್ವಾಮಿ, ದಕ್ಷಿಣಮುಖಿ ನಂದಿತೀರ್ಥ ದೇವಾಲಯಗಳಿವೆ. ಸ್ಥಳೀಯ ನಾಗರೀಕರು ಈ ಕಾರ್ಯಕ್ರಮಕ್ಕೆ ಅತ್ಯುತ್ತಮ ಸಹಕಾರ ನೀಡಿದ್ದಾರೆ. ಪ್ರಕೃತಿಯ ಜಲ ಮಾತೆಗೆ ನಮಿಸಿ ಪ್ರಾರ್ಥಿಸುವುದು ನಮ್ಮ ಕರ್ತವ್ಯ. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂದು ನಾನು ಹೇಳುತ್ತಿರುತ್ತೇನೆ'' ಎಂದರು.

ಬೆಂಗಳೂರಿನಲ್ಲಿ ಮೊದಲ ಬಾರಿಗೆ ಕಾವೇರಿ ಆರತಿ ಪ್ರಾರಂಭ ಮಾಡಿದ್ದೇವೆ. ಕೆಆರ್ ಎಸ್ ಜಲಾಶಯದ ಬಳಿಯೂ ಕಾವೇರಿ ಆರತಿ ಕಾರ್ಯಕ್ರಮ ಮಾಡಲು ನಾನು ಪ್ರಯತ್ನಿಸುತ್ತಿದ್ದೇನೆ. ಅದಕ್ಕಾಗಿ ಸಮಿತಿಯನ್ನು ರಚಿಸಲಾಗಿದೆ. ದಸರಾ ಸಂದರ್ಭದಲ್ಲಿ ಈ ಕಾರ್ಯಕ್ರಮ ಮಾಡುವ ಯೋಜನೆ ಇದೆ ಎಂದು ಹೇಳಿದರು.

ಬರಗಾಲ ಬಂದಾಗ, ಬಾವಿ ಬತ್ತಿದಾಗ ನಮಗೆ ನೀರಿನ ಮೌಲ್ಯ ಅರಿವಾಗುತ್ತದೆ. ನೀರಿನ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ. ಬೆಂಗಳೂರಿನಲ್ಲಿ ಕುಡಿಯುವ ನೀರಿಗಾಗಿ ಕಾವೇರಿ 5ನೇ ಹಂತದ ಯೋಜನೆ ಜಾರಿ ಮಾಡಲಾಗಿದೆ. ಆಮೂಲಕ 110 ಹಳ್ಳಿಗಳಿಗೆ ನೀರು ಒದಗಿಸಲಾಗಿದೆ. ಈ ವರ್ಷ ಎಷ್ಟೇ ಕಷ್ಟ ಬಂದರೂ ನೀರಿನ ಸಮಸ್ಯೆ ಎದುರಾಗಬಾರದು ಎಂದು ನಾವು ಸಂಕಲ್ಪ ಮಾಡಿದ್ದೇವೆ. ನೀರನ್ನು ಸಮರ್ಪಕವಾಗಿ ಬಳಸಿ, ನೀರಿನ ಸಂರಕ್ಷಣೆಗೆ ನೀವೆಲ್ಲರೂ ಪ್ರತಿಜ್ಞೆ ಮಾಡಬೇಕು ಎಂದು ಕರೆ ನೀಡಿದರು.

ನಮ್ಮ ಸಂಸ್ಕೃತಿ ಈ ದೇಶದ ಆಸ್ತಿ. ಇದನ್ನು ಉಳಿಸಿ, ಬೆಳೆಸಿಕೊಂಡು ಹೋಗಲು ಗಂಗೆಗೆ ಆರತಿ ಮಾಡುವ ಕಾರ್ಯಕ್ರಮಕ್ಕೆ ನೀವೆಲ್ಲರೂ ಬಂದಿದ್ದೀರಿ. ನಾವು ನೀವು ಸೇರಿ ಈ ಜಲವನ್ನು ಸಂರಕ್ಷಣೆ ಮಾಡೋಣ ಎಂದು ತಿಳಿಸಿದರು.

**ಪ್ರತಿಜ್ಞಾವಿಧಿ:** ''ದೈನಂದಿನ ಚಟುವಟಿಕೆಗಳಿಗಾಗಿ ಮಿತವಾಗಿ ನೀರನ್ನು ಬಳಸಿ, ನೀರನ್ನು ಉಳಿಸುತ್ತೇನೆ. ಮಳೆನೀರು ಕೊಯ್ಲು ವಿಧಾನ ಅನುಸರಿಸುವ ಮೂಲಕ ಅಂತರ್ಜಲ ಮರುಪೂರ್ಣಕ್ಕೆ ಸಹಕರಿಸುತ್ತೇನೆ. ಜಲ ಮೂಲಗಳನ್ನು ರಕ್ಷಿಸುವುದಾಗಿ ಮತ್ತು ಭವಿಷ್ಯದ ಪೀಳಿಗೆಗಾಗಿ ಅವುಗಳ ಸಂರಕ್ಷಣೆಯನ್ನು ಮಾಡುತ್ತೇನೆ. ನಾನು, ನನ್ನ ಕುಟುಂಬ, ಸಮುದಾಯದಲ್ಲಿ ನೀರು ಉಳಿಸುವ ಬಗ್ಗೆ ಜಾಗೃತಿ ಮೂಡಿಸುತ್ತೇನೆ. ಸುಸ್ಥಿರ ಭವಿಷ್ಯದ ನಿರ್ಮಾಣಕ್ಕಾಗಿ ನನ್ನ ಜೀವನದಲ್ಲಿ ಈ ಕ್ರಮಗಳನ್ನು ಅಳವಡಿಸಿಕೊಳ್ಳುವ ಪ್ರತಿಜ್ಞೆ ಮಾಡುತ್ತೇನೆ, ಜೈ ಹಿಂದ್, ಜೈ ಕಾವೇರಿ, ಜೈ ಕರ್ನಾಟಕ'' ಎಂದು ಶಿವಕುಮಾರ್ ಅವರು ಸಾರ್ವಜನಿಕರಿಗೆ ವಿಶ್ವಜಲ ಪ್ರತಿಜ್ಞಾ ವಿಧಿ ಬೋಧಿಸಿದರು.



## ಆಧುನಿಕರಣ, ಜಾಗತೀಕರಣದಿಂದ ಜಾನಪದ ಸೊಗಡು ಮಾಯ

**ಚಿತ್ರದುರ್ಗ:** ವಿಜ್ಞಾನದ ವಿದ್ಯಾರ್ಥಿಗಳು ಓದಿನ ಜೊತೆ ಜೊತೆಗೆ ಜಾನಪದದ ಮಹತ್ವ, ನೃತ್ಯ ಗೀತೆಗಳು, ಸಾಹಿತ್ಯ, ವೇಷಭೂಷಣಗಳು ಮತ್ತು ನಮ್ಮ ಸಂಸ್ಕೃತಿಯ ಬಗ್ಗೆ ಅರಿವಿಟ್ಟುಕೊಂಡು ಜೀವನ ಮಾಡಬೇಕು. ಖಾಸಗೀಕರಣ, ಪಾಶ್ಚಾತ್ಯೀಕರಣದಿಂದ ನಮ್ಮ ಸಂಸ್ಕೃತಿ ನಾಶವಾಗುತ್ತಾ ಬರುತ್ತಿದೆ, ಅದರ ರಕ್ಷಣೆ, ಜವಾಬ್ದಾರಿಯನ್ನ ಮುಂದಿನ ಜನಾಂಗವಾದ ವಿದ್ಯಾರ್ಥಿಗಳಿಗೆ ವಹಿಸಿಕೊಳ್ಳಬೇಕು ಎಂದು ಸರ್ಕಾರಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಸಿದ್ರಾಮ ಚನಗೊಂಡವರು ಜಾನಪದ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು.

ಚಿತ್ರದುರ್ಗದ ಸರ್ಕಾರಿ ವಿಜ್ಞಾನ ಕಾಲೇಜು ಮತ್ತು ಕಾಲೇಜು ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಆಯೋಜಿಸಿದ್ದ ಜಾನಪದ ನಮ್ಮ ಸಂಸ್ಕೃತಿ ಮತ್ತು ನಮ್ಮ ಹೆಮ್ಮೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು. ಕನ್ನಡ ಉಪನ್ಯಾಸಕರಾದ ಪ್ರೊ ಫೈರೋಜಾ ರವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ ಆಧುನೀಕರಣ, ಜಾಗತೀಕರಣ, ಖಾಸಗೀಕರಣ ಮತ್ತು ಪಾಶ್ಚ್ಯಾತೀಕರಣದಿಂದ ನಮ್ಮ ಜಾನಪದ ನೃತ್ಯ ಗೀತೆಗಳು, ಗಾಯನಗಳು, ವೇಷಭೂಷಣಗಳು ಬಗ್ಗೆ, ವಿದ್ಯಾರ್ಥಿಗಳು ಯಾವುದನ್ನೂ ಸಹ ನೆನಪಿನಲ್ಲಿ ಇಟ್ಟುಕೊಂಡಿಲ್ಲ, ಎಲ್ಲವನ್ನು ಮರೆಯುತ್ತಿದ್ದಾರೆ, ಗೂಗಲ್ ಸಂಸ್ಕೃತಿಯಲ್ಲಿ ವಿದ್ಯಾರ್ಥಿಗಳು ನಮ್ಮ ದೇಶೀಯ ಹಾಡುಗಳನ್ನ, ಕುಟ್ಟುವಾಗ, ಬೀಸುವಾಗ, ಮಕ್ಕಳನ್ನ ತೂಗುವಾಗ, ಧಾನ್ಯ ಸಂಗ್ರಹ ಮಾಡುವಾಗ ಹಾಡುವ ಹಾಡುಗಳನ್ನು, ನೃತ್ಯಗಳನ್ನು ಮರೆಯುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಜಾನಪದ ಗೀತೆ, ನೃತ್ಯ, ಮತ್ತೊಮ್ಮೆ ನೆನಪು ಮಾಡಿಕೊಡುವ ಪ್ರಯುಕ್ತ ಕಾಲೇಜು ಶಿಕ್ಷಣ ಇಲಾಖೆ, ನಮ್ಮ ಸಂಸ್ಕೃತಿ, ನಮ್ಮ ಪರಂಪರೆ, ನಮ್ಮ ಹೆಮ್ಮೆ ಎಂದು ಈ ವರ್ಷದಿಂದ ಈ ಕಾರ್ಯಕ್ರಮವನ್ನು ಆಯೋಜನೆ ಮಾಡಿದ್ದಾರೆ ಎಂದರು. ವಿದ್ಯಾರ್ಥಿಗಳು ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ರಾಷ್ಟ್ರೀಯ ಮಟ್ಟಕ್ಕೆ ಮತ್ತು ಅಂತಾರಾಷ್ಟ್ರೀಯ ಮಟ್ಟಕ್ಕೂ ಸಹ ತಮ್ಮ ಪ್ರತಿಭೆಗಳನ್ನು ಬೆಳೆಸಬಹುದು. ಈ ರೀತಿ ವಿದ್ಯಾರ್ಥಿಗಳು ಆಯ್ಕೆಯಾದಾಗ ದೇಶಿಯ ಮಟ್ಟುಗಳು, ಡೊಳ್ಳು ಕುಣಿತ, ಕಂಸಾಳೆ, ನಂದಿ ಕುಣಿತ, ನೆನಪಿನಲ್ಲಿ ಉಳಿಯುತ್ತದೆ ಇಲ್ಲದಿದ್ದರೆ ವಿದ್ಯಾರ್ಥಿಗಳು ಇವುಗಳನ್ನ ಮರೆಯುತ್ತಾರೆ. ನಮ್ಮಲ್ಲಿ ವೀರಗಾಸೆ ಎಂದರೇನು, ಎಂಬುದು ಸಹ ಮರೆಯುತ್ತಿದ್ದೇವೆ, ಇಷ್ಟೊಂದು ನೃತ್ಯಗಳು ವೇಷಭೂಷಣಗಳನ್ನು ನಾವು ನೆನಪಿಸಿಕೊಳ್ಳಬೇಕು ಮತ್ತು ಹೆಣ್ಣು ಮಕ್ಕಳು ಸಹ ಹೆಚ್ಚಿನ ಮಟ್ಟದಲ್ಲಿ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂದರು.

## ಗಾಲ್ಫ್ ಫಾರ್ ಗುಡ್ ಪಂದ್ಯಾವಳಿ ಮೂಲಕ ಅಕ್ಷಯಪಾತ್ರ ಫೌಂಡೇಷನ್‌ಗೆ ನೆರವು




**ದೇವನಹಳ್ಳಿ:** ನಿಯೋಕ್ರೆಡ್‌ನ ಸಿಎಸ್‌ಆರ್ ಯೋಜನೆಯಾದ ದಿ ಎಂಪ್ಯಾಕ್ಟ್ ಪ್ರಾಜೆಕ್ಟ್ ನ ಬೆಂಬಲದಿಂದ ನಡೆದಿರುವ 'ಗಾಲ್ಫ್ ಫಾರ್ ಗುಡ್' ಚಾರಿಟಿ ಗಾಲ್ಫ್ ಪಂದ್ಯಾವಳಿಯು ಬೆಂಗಳೂರಿನ ಪ್ರೆಸ್ಟೀಜ್ ಗಾಲ್ಫ್ ಶೈರ್ ಕ್ಲಬ್‌ನಲ್ಲಿ ಮಾರ್ಚ್ 21ರಂದು ಯಶಸ್ವಿಯಾಗಿ ನಡೆದಿದೆ. ಈ ಪಂದ್ಯಾವಳಿಯಲ್ಲಿ ಒಟ್ಟು 3,20,122 ಊಟಗಳಿಗೆ ಆಗುವಷ್ಟು ಹಣ ಸಂಗ್ರಹಿಸಲಾಗಿದ್ದು, ಈ ಮೊತ್ತವನ್ನು ಕರ್ನಾಟಕದ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳ 1,400 ಮಕ್ಕಳಿಗೆ ಬಿಸಿಯೂಟ ಒದಗಿಸಿ ಅವರಿಗೆ ಶೈಕ್ಷಣಿಕವಾಗಿ ನೆರವಾಗುವ ಉದ್ದೇಶದಿಂದ ಅಕ್ಷಯ ಪಾತ್ರ ಫೌಂಡೇಶನ್ ಗೆ ದೇಣಿಗೆ ನೀಡಲಾಗಿದೆ.

ಸರ್ಕಾರಿ ಶಾಲೆಗಳ ಮಕ್ಕಳ ಹಸಿವನ್ನು ನೀಗಿಸಿ ಅವರ ಶಿಕ್ಷಣಕ್ಕೆ ನೆರವಾಗುವ ಉದ್ದೇಶದ ಈ ಪಂದ್ಯಾವಳಿಯಲ್ಲಿ ಸಿಸ್ಕೋದ ಮಾಜಿ ಅಧ್ಯಕ್ಷ ಹಾಗೂ ಸ್ಮಾರ್ಟೆನ್ ಸ್ಪೇಸಸ್ ನ ಸಂಸ್ಥಾಪಕ ಮತ್ತು ಸಿಇಒ ದಿನೇಶ್ ಮಲ್ಕಾನಿ, ಮೈರಾವ್ ಗ್ರೂಪ್ ಆಫ್ ಕಂಪನೀಸ್ ನ ಎಂಡಿ ಹಾಗೂ ಗ್ರೀನ್ ವೇಸ್ ಗ್ರೂಪ್ ಆಫ್ ಕಂಪನೀಸ್ ನ ಗ್ರೂಪ್ ಸಿಇಒ ವೈಭವ್ ಗುಪ್ತಾ, ಎಂಬೆಸಿ ಗ್ರೂಪ್ ನ ವಿಪಿ ಗೋಪಿನಾಥ್ ಅಂಬಾಡಿತೋಡಿ, ವಿ ಗಾರ್ಡ್ ಇಂಡಸ್ಟ್ರೀಸ್ ಲಿಮಿಟೆಡ್ ನ ನಿರ್ದೇಶಕ ಈಶ್ವರ್ ಸುಬ್ರಮಣಿಯನ್ ಮತ್ತು ಸೈಫ್ ಮೆಖ್ರಿ; ನೆಲ್ಸನ್ ಡಯಾಸ್ ಸೇರಿದಂತೆ ಉದ್ಯಮ ನಾಯಕರು, ಸಮಾಜಸೇವಕರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಸ್ಮಾರ್ಟೆನ್ ಸ್ಪೇಸಸ್ ನ ಸಂಸ್ಥಾಪಕ ಮತ್ತು ಸಿಇಒ ಹಾಗೂ ಸಿಸ್ಕೊದ ಮಾಜಿ ಅಧ್ಯಕ್ಷ ದಿನೇಶ್ ಮಲ್ಕಾನಿ, ಗಾಲ್ಫ್ ಫಾರ್ ಗುಡ್ ಒಂದು ಪಂದ್ಯಾವಳಿ ಮಾತ್ರವೇ ಅಲ್ಲ, ಒಂದು ಉತ್ತಮ ಉದ್ದೇಶವನ್ನು ಹೊಂದಿರುವ ಮಹತ್ವದ ಚಳುವಳಿ ಎಂದು ಭಾವಿಸಬಹುದಾಗಿದೆ. ಅಕ್ಷಯ ಪಾತ್ರ ಫೌಂಡೇಶನ್ ನ ದೀರ್ಘಕಾಲದ ಬೆಂಬಲಿಗನಾಗಿ ನಾನು ಲಕ್ಷಾಂತರ ಮಕ್ಕಳಿಗೆ ನೆರವು ಒದಗಿಸುವ ಉದ್ದೇಶದಿಂದ ಸಮಾಜದ ಮುಖಂಡರು ಮತ್ತು ಸಮಾಜಸೇವಕರನ್ನು ಒಂದೆಡೆ ಸೇರಿಸಲು ಅವಕಾಶ ದೊರೆತಿರುವುದಕ್ಕಾಗಿ ಸಂತೋಷ ಪಡುತ್ತೇನೆ ಎಂದರು.

ನಿಯೋಕ್ರೆಡ್ ನ ಸಹ-ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ತರುಣ್ ನಜಾರೆ ಮಾತನಾಡಿ, ಬದಲಾವಣೆ ತರುವ ಮನಸ್ಸುಳ್ಳವರು ಮತ್ತು ಬದಲಾವಣೆ ತರುವವರ ಮಧ್ಯೆ ಇರುವ ಅಂತರವನ್ನು ಕಡಿಮೆ ಮಾಡಲು ಎಂಪ್ಯಾಕ್ಟ್‌ಪ್ರಾಜೆಕ್ಟ್‌ಅನ್ನು ರಚಿಸಲಾಗಿದೆ. 'ಗಾಲ್ಫ್ ಫಾರ್ ಗುಡ್' ಪಂದ್ಯಾವಳಿಯಲ್ಲಿ ಭಾಗವಹಿಸಿದ ಎಲ್ಲರೂ ಒಂದು ಮಹತ್ತರ ಉದ್ದೇಶದ ಭಾಗವಾಗಿದ್ದಾರೆ. ಈ ಮೂಲಕ ನಾವು ಯಾವುದೇ ಮಗು ಹಸಿವನ್ನು ನೀಗಿಸಿಕೊಂಡು ಉತ್ತಮ ಶಿಕ್ಷಣ ಪಡೆಯಲು ದಾರಿ ಮಾಡಿಕೊಟ್ಟಿದ್ದೇವೆ ಎಂದರು.

ಅಕ್ಷಯ ಪಾತ್ರ ಫೌಂಡೇಶನ್ ನ ಸಿಇಒ ಶ್ರೀಧರ್ ವೆಂಕಟ್ ಅವರು ಮಾತನಾಡಿ, ಗಾಲ್ಫ್ ಫಾರ್ ಗುಡ್ ಪಂದ್ಯಾವಳಿಗೆ ಸಾಮೂಹಿಕ ಶಕ್ತಿಗೆ ಅತ್ಯುತ್ತಮ ಉದಾಹರಣೆಯಾಗಿದೆ. ಪ್ರತಿಯೊಂದು ಮಗುವೂ ಹಸಿವು ಮುಕ್ತ ಶಿಕ್ಷಣ ಪಡೆಯುವ ಉದ್ದೇಶಕ್ಕೆ ಈ ಪಂದ್ಯಾವಳಿಯು ದೊಡ್ಡ ಕೊಡುಗೆ ನೀಡಿದೆ. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಎಲ್ಲರಿಗೂ ನಾವು ಕೃತಜ್ಞರಾಗಿದ್ದೇವೆ. ಈ ಪಂದ್ಯಾವಳಿ ಸಾಧ್ಯವಾಗಿಸಿದ್ದಕ್ಕೆ ನಿಯೋಕ್ರೆಡ್ ನ 'ದಿ ಎಂಪ್ಯಾಕ್ಟ್ ಪ್ರಾಜೆಕ್ಟ್' ಗೆ ಧನ್ಯವಾದಗಳು. ಲೊಕೇಷನ್ ಪಾರ್ಟ್‌ನರ್ ಆದ ಪ್ರೆಸ್ಟೀಜ್ ಗಾಲ್ಫ್ ಶೈರ್ ಕ್ಲಬ್, ಮುದ್ರಣ ಪಾಲುದಾರರಾದ ಡೆಕ್ಕನ್ ಹೆರಾಲ್ಡ್, ರೇಡಿಯೊ ಪಾಲುದಾರರಾದ ರೇಡಿಯೊ ಸಿಟಿ, ಮತ್ತು ಸಪೋರ್ಟ್ ಪಾರ್ಟ್‌ನರ್ ಆದ ಟಿಐಇ ಬೆಂಗಳೂರು ಈ ಎಲ್ಲಾ ಸಂಸ್ಥೆಗಳಿಗೂ ನಾವು ಧನ್ಯವಾದ ಸಲ್ಲಿಸುತ್ತೇವೆ. ಪಂದ್ಯಾವಳಿಯ ಪ್ರಶಸ್ತಿಗಳನ್ನು ಕೊಡುಗೆ ನೀಡಿದ ಆಲ್ ಮೌಜ್‌ಗೆ ವಿಶೇಷ ಧನ್ಯವಾದಗಳು ಎಂದರು.

ಅಕ್ಷಯ ಪಾತ್ರ ಪ್ರಸ್ತುತ ಭಾರತದ 16 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳ 78 ಸ್ಥಳಗಳಲ್ಲಿ ಪ್ರತಿದಿನ 2.25 ಮಿಲಿಯನ್ ಮಕ್ಕಳಿಗೆ ಬಿಸಿಯೂಟ ಒದಗಿಸುತ್ತಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

## ಮನಿ ಕ್ರೈಸಿಸ್ ಇತ್ತು ಈಗ ಹನಿ ಕ್ರೈಸಿಸ್ ಶುರುವಾಗಿದೆ: ಬೊಮ್ಮಾಯಿ



**ನವದೆಹಲಿ:** ಕಾಂಗ್ರೆಸ್ ಸರ್ಕಾರ ಹಾಕಿದ ಕಡೆಯಲ್ಲ ಹಗರಣ, 2 ವರ್ಷಗಳಲ್ಲಿ 10 ಹಗರಣ ಆಚೆ ಬಂದಿದೆ ಎಂದು ಬಿಜೆಪಿ ಸಂಸದ ಬಸವರಾಜ್ ಬೊಮ್ಮಾಯಿ ಹೇಳಿದರು.

ನವದೆಹಲಿಯಲ್ಲಿ ಮಾಧ್ಯಮದವರೊಂದಿಗೆ ಜನಪ್ರತಿನಿಧಿಗಳ ಮೇಲೆ ಹನಿಟ್ರ್ಯಾಪ್ ವಿಚಾರವಾಗಿ ಮಾತನಾಡಿದ ಅವರು, ಹನಿಟ್ರ್ಯಾಪ್ ಕುಖ್ಯಾತಿ ಕರ್ನಾಟಕದ ಗೌರವವನ್ನು ಕಡಿಮೆ ಮಾಡಿದೆ. ಇದನ್ನು ಬಹಳ ಸೂಕ್ಷ್ಮವಾಗಿ ಹೇಳುತ್ತಿದ್ದೇನೆ. ಕಾಂಗ್ರೆಸ್‌ನ ಅಧಿಕಾರದ ಲಾಲಸ್ಯ ನೈತಿಕತೆಯನ್ನು ಅಧೋಗತಿಗೆ ತೆಗೆದುಕೊಂಡಿದೆ. ಒಂದು ಹಗರಣದಿಂದ ಮತ್ತೊಂದು ಹಗರಣ ಆಗುತ್ತಿದೆ. ಎರಡು ವರ್ಷದಲ್ಲಿ ಹತ್ತು ಹಗರಣ ಆಚೆ ಬಂದಿದೆ. ಕೈ ಹಾಕಿದ ಕಡೆಯಲ್ಲ ಹಗರಣ ಬರುತ್ತಿದೆ ಎಂದರು.

ವಿಧಾನಸಭೆಯಲ್ಲಿ ನೈತಿಕ ಅಧಪತನ ನೋಡಿದ್ದೇವೆ. ಮನಿ ಕ್ರೈಸಿಸ್ ಇತ್ತು ಈಗ ಹನಿ ಕ್ರೈಸಿಸ್ ಶುರುವಾಗಿದೆ. ಸರ್ಕಾರ ಆರ್ಥಿಕವಾಗಿ, ನೈತಿಕವಾಗಿ ದಿವಾಳಿಯಾಗಿದೆ. ಕ್ಯಾಬಿನೆಟ್ ಸಚಿವರು ಹಬಿಟ್ರ್ಯಾಪ್ ಆಗುತ್ತಿದೆ ಎಂದು ಹೇಳುವ ಪರಿಸ್ಥಿತಿ ಬಂದಿದೆ. ಹದಿನೈದು ದಿನದಿಂದ ವಿಧಾನಸೌಧದ ಮೊಗಸಾಲೆಯಲ್ಲಿ ಚರ್ಚೆಯಾಗುತ್ತಿದೆ. ಇಂತಹ ಕ್ಯಾಬಿನೆಟ್‌ಗೆ ಏನು ಹೇಳಬೇಕು. ಇದು ನೈತಿಕತೆ ಕಳೆದುಕೊಂಡ ಕ್ರಿಮಿನಲ್ ಕ್ಯಾಬಿನೆಟ್. ಸಿಎಂ ನೈತಿಕ ಜವಾಬ್ದಾರಿ ಹೊತ್ತು ರಾಜೀನಾಮೆ ನೀಡಬೇಕು ಎಂದು ಕಿಡಿಕಾರಿದರು. 48 ಜನರ ಸಿಡಿ ಎಂದು ರಾಜಣ್ಣ ಹೇಳಿದ್ದಾರೆ, ಅವರಿಗೆ ಮಾಹಿತಿ ಇದ್ದರೆ ಅವರು ಎಲ್ಲ ಮಾಹಿತಿಯನ್ನು ಕೊಡಬೇಕು. ಪೂರ್ಣ ಪ್ರಮಾಣದ ತನಿಖೆಯಾಗಬೇಕು. ಇದನ್ನು ಯಾರೇ ಮಾಡಿದರೂ ಅವರಿಗೆ ಶಿಕ್ಷೆಯಾಗಬೇಕು. ಈಗ ಎಸ್‌ಐಟಿಗಳಿಗೆ ಮಹತ್ವವಿಲ್ಲ. ಹೀಗಾಗಿ ನಿವೃತ್ತ ಅಥವಾ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆಯಾಗಬೇಕು ಎಂದು ತಿಳಿಸಿದರು.

## ಬೆಂಗಳೂರಿನಲ್ಲಿ ಹ್ಯಾಂಡ್ ಗ್ರೆನೇಡ್ ಪತ್ತೆ, ವ್ಯಕ್ತಿ ವಶಕ್ಕೆ

**ಬೆಂಗಳೂರು:** ಇಲ್ಲಿನ ಸಂಪೀಗೆಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಹ್ಯಾಂಡ್ ಗ್ರೆನೇಡ್ ಪತ್ತೆಯಾಗಿದ್ದು ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಸಂಪಿಗೆಹಳ್ಳಿ ಬಳಿಯ ಬೆಳ್ಳಳ್ಳಿಯ ಅಬ್ದುಲ್ ರೆಹಮಾನ್ ಮನೆಯಲ್ಲಿ ಹ್ಯಾಂಡ್ ಗ್ರನೇಡ್ ಪತ್ತೆಯಾಗಿದೆ. ಸ್ಫೋಟಕಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಬಾಂಬ್ ಮಾದರಿಯ ಸ್ಫೋಟಕವನ್ನು ವಶಕ್ಕೆ ಪಡೆದ ಪೊಲೀಸರು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಿದ್ದಾರೆ. ಅಬ್ದುಲ್ ರೆಹಮಾನ್ ವಿಚಾರಣೆ ವೇಳೆ, ಎಲ್ಲಿಯೋ ಸಿಕ್ಕಿತ್ತು. ಬಾಂಬ್ ಮಾದರಿಯ ವಸ್ತು ರಸ್ತೆಯಲ್ಲಿ ಸಿಕ್ಕಿತ್ತು ಎಂದು ಹೇಳಿದ್ದಾನೆ.



## ಬೇಕರಿ ಟೆಕ್ನಾಲಜಿ ಸರ್ಟಿಫಿಕೇಟ್ ಕೋರ್ಸ್‌ಗೆ ಅರ್ಜಿ ಆಹ್ವಾನ

**ಬೆಂಗಳೂರು:** ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆಯು ''ಹದಿನಾಲ್ಕು ವಾರಗಳ ಬೇಕರಿ ಟೆಕ್ನಾಲಜಿ ಸರ್ಟಿಫಿಕೇಟ್ ಕೋರ್ಸ್''ಗೆ ಅರ್ಜಿಯನ್ನು ಆಹ್ವಾನಿಸಿದೆ. ಎಸ್.ಎಸ್.ಎಲ್.ಸಿ. ಪಾಸ್/ಫೇಲ್ ಆಗಿರುವವರು ರೂ.10-00 ಸಂದಾಯಿಸಿ ಅರ್ಜಿ ಫಾರಂಗಳನ್ನು ಸಂಯೋಜಕರು ಮತ್ತು ಮುಖ್ಯಸ್ಥರು, ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆ, ಕೃಷಿ ವಿಶ್ವ ವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-560 065 ರವರಿಂದ ಪಡೆದುಕೊಂಡು, ಭರ್ತಿ ಮಾಡಿದ ಅರ್ಜಿಯನ್ನು ಮಾರ್ಚ್ 29 ರೊಳಗೆ ಅಪರಾಹ್ನ 4.00 ಘಂಟೆಯೊಳಗೆ ತಲುಪಿಸಬೇಕು. ಹೆಚ್ಚಿನ ಮಾಹಿತಿಗಾಗಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080-23513370 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೂರು ದಿನಗಳ ಕಮ್ಮಟಕ್ಕೆ ಅರ್ಜಿ

**ಬೆಂಗಳೂರು:** ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ. ಹಾವೇರಿ ಜಿಲ್ಲೆ ಇವರ ಸಹಯೋಗದಲ್ಲಿ ಗಿರಿಜನ ಉಪಯೋಜನೆಯಡಿ ಕನ್ನಡ ಸಾಹಿತ್ಯ ಮತ್ತು ಸಾಂವಿಧಾನಿಕ ಮೌಲ್ಯಗಳು ಎಂಬ ಹೆಸರಿನಲ್ಲಿ ಮೂರು ದಿನಗಳ ಕಮ್ಮಟವನ್ನು ಏಪ್ರಿಲ್ 21, 22 ಮತ್ತು 23 ರಂದು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ, ಹಾವೇರಿ ಜಿಲ್ಲೆಯಲ್ಲಿ ನಡೆಸಲು ಉದ್ದೇಶಿಸಿದ್ದು, ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು 20 ರಿಂದ 45 ವರ್ಷ ವಯಸ್ಸುಳ್ಳ ಪರಿಶಿಷ್ಟ ಪಂಗಡಕ್ಕೆ ಸೇರಿದ ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಏಪ್ರಿಲ್ 5 ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವೆಬ್ ಸೈಟ್ http://karnatakasahithyaacademy.org ನಲ್ಲಿ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ.

## ಮಾ.27 ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗ ಸಿಟ್ಟಿಂಗ್ಸ್

**ಬೆಂಗಳೂರು:** ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳಲ್ಲಿ ನೊಂದವರಿಗೆ ಸೂಕ್ತ ನೆರವನ್ನು ಒದಗಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಮಾರ್ಚ್ 27 ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ಸಿಟ್ಟಿಂಗ್ಸ್ ನಡೆಸಲಿದೆ. ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಆಯೋಗದಲ್ಲಿ ನೋಂದಣಿಯಾಗಿರುವ ಪ್ರಕರಣಗಳನ್ನು ಇತ್ಯರ್ಥಪಡಿಸಿ, ವಿಲೇ ಮಾಡಿ ಕ್ರಮ ಜರುಗಿಸಲು ಉದ್ದೇಶಿಸಲಾಗಿದೆ. ದೂರುದಾರರು ಹಾಗೂ ಪ್ರತಿವಾದಿ ಪ್ರಾಧಿಕಾರಗಳು ಈ ಸೌಲಭ್ಯದ ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ. ಮಾನವ ಹಕ್ಕು ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯಲ್ಲಿನ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮಾರ್ಚ್ 27 ರಂದು ಸಾರ್ವಜನಿಕರಿಂದ ದೂರುಗಳು / ಅಹವಾಲುಗಳನ್ನು ಸಹ ಸ್ವೀಕರಿಸಲು ಉದ್ದೇಶಿಸಲಾಗಿದೆ. ಸಾರ್ವಜನಿಕರು ನಿಗದಿತ ದಿನಾಂಕದಂದು ಆಯೋಗದ ಮಾನ್ಯ ಅಧ್ಯಕ್ಷರು (ಹಂಗಾಮಿ) ಹಾಗೂ ಮಾನ್ಯ ಸದಸ್ಯರನ್ನು ಸಂಪರ್ಕಿಸಿ, ದೂರುಗಳನ್ನು ಸಲ್ಲಿಸಬಹುದು ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಪ್ರಭಾರ ಕಾರ್ಯದರ್ಶಿ ಎ. ದಿನೇಶ್ ಸಂಪತ್ ರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪತ್ರಿಕಾ ಛಾಯಾಗ್ರಹಣ ಕುರಿತು ಫೋಕಸ್ ಆನ್ ನ್ಯೂಸ್ ಕಾರ್ಯಾಗಾರ

**ಬೆಂಗಳೂರು:** ಕರ್ನಾಟಕ ಮಾಧ್ಯಮ ಅಕಾಡೆಮಿಯು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಮಾರ್ಚ್ 23 ರಂದು ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆಯಲ್ಲಿ ಪತ್ರಿಕಾ ಛಾಯಾಗ್ರಹಣ ಕುರಿತು ''ಫೋಕಸ್ ಆನ್ ನ್ಯೂಸ್'' ಕಾರ್ಯಾಗಾರವನ್ನು ಆಯೋಜಿಸಿದೆ. ಇದರೊಂದಿಗೆ ಅಕಾಡೆಮಿಯು ಆಯೋಜಿಸಿದ್ದ ಮೊದಲ ಪತ್ರಿಕಾ ಛಾಯಾಗ್ರಹಣ ಸ್ಪರ್ಧೆಯ ಬಹುಮಾನ ವಿತರಣೆ ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಛಾಯಾಚಿತ್ರಗಳ ಪ್ರದರ್ಶನ ನಡೆಯಲಿದೆ. ಛಾಯಾಚಿತ್ರ ಪ್ರದರ್ಶನವು ಮಾರ್ಚ್ 23 ಹಾಗೂ 24 ರಂದು ನಡೆಯಲಿದೆ. ಈ ಕಾರ್ಯಾಗಾರವನ್ನು ಕಾರ್ಮಿಕ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಅವರು ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅಕಾಡೆಮಿಯ ಪತ್ರಿಕಾ ಛಾಯಾಗ್ರಹಣ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ. ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಪತ್ರಿಕಾ ಛಾಯಾಗ್ರಾಹಕಿ ಶ್ರೀಮತಿ ಶಿಪ್ರಾ ದಾಸ್ ಪ್ರಧಾನ ಭಾಷಣ ಮಾಡುವರು. ಈ ಸಂದರ್ಭದಲ್ಲಿ ಪತ್ರಿಕಾ ಛಾಯಾಗ್ರಹಣದ ಪ್ರಸಕ್ತ ಸ್ವರೂಪ ಮತ್ತು ಸವಾಲುಗಳ ಕುರಿತು ಗೋಷ್ಠಿ ನಡೆಯಲಿದ್ದು, ಪತ್ರಿಕಾ ಛಾಯಾಗ್ರಾಹಕರಾದ ಶ್ರೀಮತಿ ಶಿಪ್ರಾ ದಾಸ್, ಭಾನು ಪ್ರಕಾಶ್ ಚಂದ್ರ, ವಿಶ್ವನಾಥ ಸುವರ್ಣ ಹಾಗೂ ಹಿರಿಯ ಪತ್ರಕರ್ತರಾದ ಮಲ್ಲಿಕಾರ್ಜುನ ಸಿದ್ದಣ್ಣವರ, ಬಂಡು ಕುಲಕರ್ಣಿ ಭಾಗವಹಿಸಲಿದ್ದಾರೆ. ಸಮಾರೋಪ ಸಮಾರಂಭದಲ್ಲಿ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಭಾಗವಹಿಸಲಿದ್ದಾರೆ ಎಂದು ಅಕಾಡೆಮಿ ಅಧ್ಯಕ್ಷರಾದ ಶ್ರೀಮತಿ ಆಯೇಶಾ ಖಾನಂ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕರ್ನಾಟಕ ಮಾಧ್ಯಮ ಅಕಾಡೆಮಿಯು ಮೊಟ್ಟಮೊದಲ ಬಾರಿಗೆ ಪತ್ರಿಕಾ ಛಾಯಾಗ್ರಾಹಕರಿಗಾಗಿ ಸುದ್ದಿ ಛಾಯಾಗ್ರಹಣ ಸ್ಪರ್ಧೆ ಏರ್ಪಡಿಸಿತ್ತು. ಇದರಲ್ಲಿ ರಾಜ್ಯಾದ್ಯಂತ 60 ಕ್ಕೂ ಹೆಚ್ಚು ಛಾಯಾಗ್ರಾಹಕರು ಭಾಗವಹಿಸಿದ್ದರು.

## ಅಕ್ರಮವಾಗಿ ನಾಡ ಬಂದೂಕು ಇಟ್ಟುಕೊಂಡಿದ್ದ ವ್ಯಕ್ತಿ ಸೆರೆ



**ಹನೂರು:** ತೋಟದ ಮನೆಯ ಜಮೀನಿ ನಲ್ಲಿ ಅಕ್ರಮವಾಗಿ ನಾಡ ಬಂದೂಕು ಇಟ್ಟು ಕೊಂಡಿದ್ದ ವ್ಯಕ್ತಿಯೋರ್ವನನ್ನು ರಾಮಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹನೂರು ತಾಲ್ಲೂಕಿನ ಅಜ್ಜಿಪುರ ಗ್ರಾಮದ ಮುನಿಸ್ವಾಮಿ ಅಲಿಯಾಸ್ ಮುನಿಯಪ್ಪ (60) ಬಂಧಿತ ಆರೋಪಿ. ರಾಮಾಪುರ ಪೊಲೀಸ್ ಠಾಣೆ ವ್ಯಾಪ್ತಿಯ ಗಂಗನದೊಡ್ಡಿ ಗ್ರಾಮದ ಹೊರವಲಯದಲ್ಲಿ ಕಾತಾಳಿಕೆರೆ ಬಸಪ್ಪನ ಬಯಲಿನಲ್ಲಿರುವ ತಂಬಡಿ ಜಗದೀಶ್‌ರವರ ಜಮೀನಿನನ್ನು ಈತ ಗುತ್ತಿಗೆಗೆ ಪಡೆದಿದ್ದು, ಅಲ್ಲಿ ಅಕ್ರಮವಾಗಿ ನಾಡ ಬಂದೂಕು ಇಟ್ಟುಕೊಂಡಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಮೇರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಕೊಳ್ಳೇಗಾಲ ಉಪ ವಿಭಾಗದ ಡಿವೈಎಸ್ಪಿ ಧರ್ಮೇಂದ್ರ, ರಾಮಾಪುರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಶೇಷಾದ್ರಿ, ಮಾರ್ಗದರ್ಶನದಲ್ಲಿ ಅಪರಾಧ ವಿಭಾಗದ ಸಬ್‌ಇನ್‌ಸ್ಪೆಕ್ಟರ್ ಲೋಕೇಶ್ ಹಾಗೂ ಸಿಬ್ಬಂದಿ ದಾಳಿ ನಡೆಸಿ ತೋಟದ ಜಮೀನಿನಲ್ಲಿ ಅಕ್ರಮವಾಗಿ ಇಟ್ಟುಕೊಂಡಿದ್ದ ನಾಡ ಬಂದೂಕು ಹಾಗೂ ಪರಿಕರಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ದಾಳಿಯಲ್ಲಿ ಪೇದೆಗಳಾದ ಲಿಯಾಖತ್ ಅಲಿಖಾನ್, ಗಿರೀಶ್, ಪರಶುರಾಮ್ ಪಾಲ್ಗೊಂಡಿದ್ದರು.

## 20 ಸಾವಿರ ಮಂದಿಗೆ ಮಾಸಾಶನ



**ಹುಳಿಯಾರು:** ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ರಾಜ್ಯದ 20 ಸಾವಿರ ಅಸಹಾಯಕರಿಗೆ ಪ್ರತಿ ತಿಂಗಳು 1 ಸಾವಿರ ಮಾಸಾಶನವನ್ನು ಕಳೆದ 30 ವರ್ಷಗಳಿಂದ ವಿತರಿಸುತ್ತಿದೆ. ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ 196 ಮಂದಿಗೆ ಮಾಸಾಶನ ನೀಡಲಾಗುತ್ತಿದೆ ಎಂದು ಯೋಜನೆಯ ಜಿಲ್ಲಾ ನಿರ್ದೇಶಕ ದಿನೇಶ್ ತಿಳಿಸಿದರು.

ಹುಳಿಯಾರು ಪಟ್ಟಣದ ಮಾರುತಿನಗರದ ನಿರಾಶ್ರಿತ ಅನಾಥೆ ಲಕ್ಷಮ್ಮ ಅವರಿಗೆ ಕನಕ ಬ್ಯಾಂಕ್ ಅಧ್ಯಕ್ಷ ಗುಜರಿನಾಗಣ್ಣ ಅವರ ದಾನ ನೀಡಿದ ನಿವೇಶನದಲ್ಲಿ ಧರ್ಮಸ್ಥಳ ಯೋಜನೆಯಿಂದ ನಿರ್ಮಿಸಲಾಗಿದ್ದ ಮನೆಯ ಹಸ್ತಾಂತರ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

20 ಸಾವಿರ ಅಸಹಾಯಕರಲ್ಲಿ 800 ಮಂದಿಗೆ ಮನೆ ಕಟ್ಟಿಕೊಡಲಾಗಿದೆ. ಅಲ್ಲದೆ ಅನಾಥರಿಗೆ ಬಟ್ಟೆ, ಪಾತ್ರೆ, ಚಾಪೆ, ಬೆಡ್ ಶೀಟ್, ಆಹಾರ ಪದಾರ್ಥಗಳನ್ನೂ ಸಹ ಕೊಡುತ್ತಿದೆ. ಜೊತೆಗೆ ಅವರಿಗೆ ಆರೋಗ್ಯದ ಸಮಸ್ಯೆ ಕಂಡುಬಂದಾಗ ಸೇವಾಪ್ರತಿನಿಧಿಯ ಮೂಲಕ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಸಹ ಕೊಡಿಸುವುದರ ಮೂಲಕ ನೀವು ನನಗ್ಯಾರೂ ಇಲ್ಲವೆಂದು ಎದೆಗುಂದಬೇಡಿ ನಿಮ್ಮೊಂದಿಗೆ ಧರ್ಮಸ್ಥಳ ಸಂಸ್ಥೆಯಿದೆ ಎಂದು ಧೈರ್ಯ ತುಂಬಲಾಗುತ್ತಿದೆ ಎಂದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಹೊಸಹಳ್ಳಿ ಚಂದ್ರಣ್ಣ ಮಾತನಾಡಿ ವೀರೇಂದ್ರ ಹೆಗಡೆಯವರು ಸಮಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಧರ್ಮಸ್ಥಳ ಯೋಜನೆ ಆರಂಭಿಸಿ ಮಹಿಳೆಯರಿಗೆ ಆರ್ಥಿಕ ಸಹಾಯ ಮಾಡುವ ಜೊತೆಗೆ ದೇವಸ್ಥಾನ, ಶಾಲೆ, ನೀರಿನ ಘಟಕ, ಹಾಲಿನ ಡೇರಿ ಹೀಗೆ ಅನೇಕ ಸಮಾಜಮುಖಿ ಕಾರ್ಯಗಳಿಗೆ ಹಣ ಕೊಡುತ್ತಿದೆ. ಈಗ ಅನಾಥಗೆ ಮನೆ ಕಟ್ಟಿಕೊಟ್ಟಿರುವುದು ನಿಜಕ್ಕೂ ಅಭಿನಂದನಾರ್ಹ ಎಂದರು.

ನಿವೇಶನ ದಾನಿಗಳಾದ ಗುಜರಿನಾಗಣ್ಣ ಹಾಗೂ ಸಿದ್ದಗಂಗಮ್ಮ, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರತ್ನಮ್ಮ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಡ್ಡಿಪುಟ್ಟರಾಜು, ನಿರ್ದೇಶಕ ಜಯಣ್ಣ, ಯೋಜನಾಧಿಕಾರಿ ರಾಮಚಂದ್ರ, ಗಣಪತಿ ದೇವಸ್ಥಾನದ ತಮ್ಮಯ್ಯ, ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಪೂರ್ಣಮ್ಮ, ಜ್ಞಾನವಿಕಾಸ ಸಮನ್ವಯಾಧಿಕಾರಿ ಸುನಿತಾ, ಮೇಲ್ವಿಚರಕರಾದ ಚೈತ್ರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸುವರ್ಣ ಸಾಂಸ್ಕೃತಿಕ ಭವನದಲ್ಲಿ ರಂಗ ಚಿತ್ತಾರ-ದಕ್ಷಿಣಾಧೀಶ್ವರಿ ಕೆಳದಿ ರಾಣಿ ಚೆನ್ನಮ್ಮ ನಾಟಕ ಪ್ರದರ್ಶನ

**ಶಿವಮೊಗ್ಗ :** ಗಾರಾ ಫೌಂಡೇಶನ್, ಕ್ರಿಯೇಟಿವ್ ಗ್ರೂಪ್, ಭೂಮಿ ಸಂಸ್ಥೆಯ ಸಹಯೋಗದಲ್ಲಿ ರಂಗ ಚಿತ್ತಾರ ಎನ್ನುವ ರಂಗ ಕಾರ್ಯಕ್ರಮವನ್ನು ನಗರದ ಸುವರ್ಣ ಸಾಂಸ್ಕೃತಿಕ ಭವನದಲ್ಲಿ ಹಮ್ಮಿಕೊಂಡಿದೆ, ಇದೊಂದು ರಂಗಕರ್ಮಿಗಳ ಉತ್ತೇಜನಕ್ಕಾಗಿ ಆಯೋಜಿಸಲಾಗಿದ್ದು, ರಂಗಗೀತೆ, ಹತ್ತು ಜನ ಕಲಾವಿದರಿಗೆ ಮಲೆನಾಡು ಕಲಾ ಕೌಸ್ತುಭ ಪ್ರಶಸ್ತಿ ಮತ್ತು ಗೌರವ ಸನ್ಮಾನ ಇರುತ್ತದೆ, ಇದೇ ತಿಂಗಳು ಬಿಡುಗಡೆಯಾಗಲಿರುವ ದಾಸರಹಳ್ಳಿ ಕನ್ನಡ ಚಲನಚಿತ್ರದ ಪೋಸ್ಟರ್ ಬಿಡುಗಡೆಗೊಳಿಸಿ ಸಿನಿಮಾ ಯಶಸ್ವಿ ಪ್ರದರ್ಶನಕ್ಕೆ ಹಾರೈಸಲಾಗುತ್ತದೆ ಎಂದು ಆಯೋಜಕರು ತಿಳಿಸಿದ್ದಾರೆ, ಪತ್ರಿಕಾ ಭವನದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತಾನಾಡಿದ ಆಯೋಜಕರು ನಾಳೆ ಶನಿವಾರ ಸಂಜೆ 5.30 ರಿಂದ 9 ರವರೆಗೆ ರಂಗ ಚಿತ್ತಾರ ನಡೆಯಲಿದ್ದು ಈಗಾಗಲೇ ಯಶಸ್ವಿ ಪ್ರದರ್ಶನ ಮಾಡಿರುವ ಹಾಗೂ ಜನ ಮೆಚ್ಚುಗೆ ಗಳಿಸಿರುವ ದಕ್ಷಿಣಾಧೀಶ್ವರಿ ಕೆಳದಿ ರಾಣಿ ಚೆನ್ನಮ್ಮ ನಾಟಕದಲ್ಲಿ ಬರುವ ಕೆಳದಿ ರಾಣಿ ಚೆನ್ನಮ್ಮ ಪಾತ್ರವನ್ನು ಬಹುಮುಖಿ ಪ್ರತಿಭೆ ಲಕ್ಷ್ಮೀಯವರು ನಿರ್ವಹಿಸಲಿದ್ದಾರೆ, ರಂಗಕರ್ಮಿ ಗಣೇಶ್ ಕೆಂಚಾನಲ ಅವರ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ ಈ ಐತಿಹಾಸಿಕ ನಾಟಕ ಅನೇಕ ಪ್ರಶಸ್ತಿಗಳಿಗೆ ಭಾಜನವಾಗಿದೆ ಎಂದು ತಿಳಿಸಿದರು

ಈ ನಾಟಕದ ವೀಕ್ಷಣೆಗೆ ಬರುವ ಕಲಾಸಕ್ತರಿಗೆ, ಸಾರ್ವಜನಿಕರಿಗೆ ಉಚಿತ ಪ್ರವೇಶ ಇರುತ್ತದೆ, ಮುಕ್ತವಾಗಿ ಬಂದು ರಂಗ ಚಿತ್ತಾರದಲ್ಲಿ ಭಾಗವಹಿಸಲು ಈ ಮೂಲಕ ಆಯೋಜಕರು ಕೋರಿದ್ದಾರೆ, ಕಾರ್ಯಕ್ರಮದ ಉದ್ಘಾಟನೆಯನ್ನು ಸೂಡಾ ಅಧ್ಯಕ್ಷರಾದ ಹೆಚ್.ಎಸ್ ಸುಂದರೇಶ್‌ರವರು ನೆರವೇರಿಸುತ್ತಾರೆ, ಮುಖ್ಯ ಅತಿಥಿಗಳಾಗಿ ಕೆ.ಎಸ್ ಶಶಿ, ವಾಲಿಬಾಲ್ ಅಸೋಸಿಯೇಷನ್, ಎಸ್. ಆರ್ ಶ್ರೀನಾಥ್ ಅಧ್ಯಕ್ಷರು ಶಿವಮೊಗ್ಗ ಫುಟ್ಬಾಲ್ ಸಂಸ್ಥೆ, ಹಾಗೂ ದಾಸರಹಳ್ಳಿ ಚಲನಚಿತ್ರದ ಸಹ ನಿರ್ಮಾಪಕರು, ಗೀತಾ ಮಾನೆ ವಕೀಲರು ಶಿವಮೊಗ್ಗ, ಚಿರಂಜೀವಿ ಬಾಬು ಸಮಾಜಸೇವಕರು ಶಿವಮೊಗ್ಗ, ವಿನೋದ್ ಮಾಲೀಕರು ಕಂಪ್ಯೂಟರ್ ಹೌಸ್ ಶಿವಮೊಗ್ಗ, ಇವರುಗಳು ಉಪಸ್ಥಿತರಿರುತ್ತಾರೆ, ಮಲೆನಾಡು ಕಲಾ ಕೌಸ್ತುಭ ಪ್ರಶಸ್ತಿಯನ್ನು ಗಣೇಶ್ ಕೆಂಚನಾಲ, ಶಿವಮೊಗ್ಗ ರಾಮಣ್ಣ. ಶಿವಮೊಗ್ಗ ದಾನಂ, ಚೆನ್ನಯ್ಯ ಉಪನ್ಯಾಸಕರು, ಹಿರಿಯ ರಂಗಕರ್ಮಿ ತಿಪ್ಪಣ್ಣ, ಅಂಜನಮೂರ್ತಿ, ಪೂರ್ಣಿಮ ಪ್ರಸನ್ನ, ಸುಧೀರ್, ಸಿದ್ರಾಮ ಕುವೆಂಪು ಯೂನಿವರ್ಸಿಟಿ, ಇವರುಗಳಿಗೆ ಪ್ರಧಾನ ಮಾಡಲಾಗುವುದು ಎಂದು ಗಾರಾ ಫೌಂಡೇಶನ್, ಕ್ರಿಯೇಟಿವ್ ಗ್ರೂಪ್, ಭೂಮಿ ಸಂಸ್ಥೆಯ ಆಯೋಜಕರು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದ್ದಾರೆ.

## ಕರಪಾಲಮೇಳ ತಂಡದವರಿಂದ ಅರಿವು

**ಹುಳಿಯಾರು:** ಹುಳಿಯಾರು ಹೋಬಳಿ ಲಿಂಗಪ್ಪನಪಾಳ್ಯದಲ್ಲಿ ಶ್ರೀ ಸಂಗಮೇಶ್ವರ ಜಾನಪದ ಕರಪಾಲ ಮೇಳ ತಂಡದವರಿಂದ ಗರ್ಭಿಣಿಯರಿಗೆ ಅರಿವು ಮೂಡಿಸಲಾಯಿತು ಜಿಲ್ಲಾ ಆರೋಗ್ಯ ಕುಟುಂಬ ಇಲಾಖೆ ವತಿಯಿಂದ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಗರ್ಭಿಣಿಯರ ರಕ್ತ ಹೀನತ, ಶಿಶುಮರಣ, ತಾಯಿ ಮರಣ, ಕುಷ್ಟರೋಗ ಗಂಡಾಂತರ, ಗರ್ಭಿಣಿ ಬಾಣಂತಿಯರ ಆರೋಗ್ಯ ಅರಿವು ಮೂಡಿಸಲಾಯಿತು. ತಂಡದ ನಾಯಕ ಈಶ್ವರಯ್ಯ ಕಥಾನಾಯಕ ಬೇವಿನಹಳ್ಳಿ ಮರುಳಪ್ಪನವರು ಸಹಪಾಠಿಗಳಾದ ಈಶ್ವರಯ್ಯ, ನಿಂಗರಾಜು ಮತ್ತು ದೊಡ್ಡಬಿದರಿ ಬಸವರಾಜು ಮತ್ತು ಸುಗುಣ, ವಿಜಯ, ಹಾರ್ಮೋನಿಯಂ ಮಾಸ್ಟರ್ ಶಂಕ್ರಪ್ಪ, ತಬಲಾ ಮಾಸ್ಟರ್ ನಟರಾಜ್ ಇವರಿಂದ ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು. ಆರೋಗ್ಯ ಇಲಾಖೆಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಬಿ.ಸಿ.ರೇಣುಕರಾಜ್, ಆಶಾ ಕಾರ್ಯಕರ್ತೆರಾದ ಗಾಯತ್ರಮ್ಮ, ನಾಗವೇಣಿ, ಲಲಿತಮ್ಮ ಉಪಸ್ಥಿತರಿದ್ದರು.



## ನೋಂದಣಿಯಿಲ್ಲದೆ ಸಾಲ ನೀಡುವುದು ಕಾನೂನು ಬಾಹೀರ

**ಮಂಡ್ಯ:** ಜಿಲ್ಲೆಯಲ್ಲಿಕಾರ್ಯ ನಿರ್ವಹಿಸುತ್ತಿರುವಮೈಕ್ರೋ ಫೈನಾನ್ಸ್ ಸಂಸ್ಥೆಗಳು ಅಥವಾ ಸಾಲ ನೀಡಿಕೆ ಏಜೆನ್ಸಿಗಳು ಅಥವಾ ಲೇವಾದೇವಿದಾರರು ನೀಡುವದುಬಾರಿ ಬಡ್ಡಿದರಗಳ ಅನುಚಿತತೊಂದರೆ ಮತ್ತು ಬಲವಂತದ ವಸೂಲಾತಿಯನ್ನುತ ಡೆಗಟ್ಟಲುಕರ್ನಾಟಕಕಿರುಸಾಲ ಮತ್ತು ಸಣ್ಣ ಸಾಲ(ಬಲವಂತದ ಕ್ರಮಗಳ ಪ್ರತಿಬಂಧಕ)ಅಧ್ಯಾದೇಶ–2025 ರನ್ನುಸರ್ಕಾರ ಜಾರಿಗೊಳಿಸಿದ್ದು ಅಧ್ಯಾದೇಶಜಾರಿಗೊಂಡದಿನಾಂಕದಿಂದಒ ಂದು ತಿಂಗಳೊಳಗೆ ಜಿಲ್ಲೆಯಲ್ಲಿನ ಸಹಕಾರದಇಲಾಖೆಯಿಂದ ನೋಂದಾಯಿತ ಹಾಗೂ ನೋಂದವಣಿಯಾಗದ ಮೈಕ್ರೋ ಫೈನಾನ್ಸ್ ಸಂಸ್ಥೆಗಳು, ಸಾಲ ನೀಡಿಕೆ ಏಜೆನ್ಸಿಗಳು ಅಥವಾ ಲೇವಾದೇವಿದಾರರುಜಿಲ್ಲಾಧಿಕಾರಿಯವರ ಬಳಿ ನೋಂದಾಣಿ ಮಾಡಲು ಸೂಚಿಸಿದರೂ ಸಹ ಇಲ್ಲಿಯವರೆಗೆ ನೋಂದಣಿ ಮಾಡಿಕೊಳ್ಳದಿರುವುದು ಕಂಡುಬಂದಿದ್ದುಅಧ್ಯಾದೇಶದ ಪ್ರಕಾರ ಜಿಲ್ಲಾಧಿಕಾರಿಗಳ ಬಳಿ ನೋಂದಣಿಯಾಗದೆ ಸಾಲ ನೀಡುವುದು ಕಾನೂನು ಬಾಹಿರವಾಗಿದ್ದು, ಇಂತಹ ಸಂಸ್ಥೆಗಳ ವಿರುದ್ಧ ಕಾನೂನು ರೀತಿಕ್ರಮ ಕೈಗೊಳ್ಳಲಾಗುವುದು. ಅರ್ಥಿಕವಾಗಿದುರ್ಬಲ ಹೊಂದಿದಗುಂಪುಗಳು ಮತ್ತು ವ್ಯಕ್ತಿಗಳು, ವಿಶೇಷವಾಗಿರೈತರು, ಮಹಿಳೆಯರು ಮತ್ತು ಮಹಿಳಾ ಸ್ವಸಹಾಯ ಗುಂಪುಗಳನ್ನು ರಕ್ಷಿಸಲು ಮತ್ತು ಮುಕ್ತಗೊಳಿಸಲು ಕರ್ನಾಟಕಕಿರುಸಾಲ ಮತ್ತು ಸಣ್ಣ ಅಧ್ಯಾದೇಶ–2025 ರನ್ನು ಸರ್ಕಾರ ಜಾರಿಗೊಳಿಸಿದೆ.ಸದರಿ ಅಧ್ಯಾದೇಶದಂತೆ ಜಿಲ್ಲೆಯಲ್ಲಿರಿ ಸರ್ವ್ ಬ್ಯಾಂಕ್ಅಫ್ ಇಂಡಿಯಾದಲ್ಲಿ ನೋಂದಾಯಿಸದೆಕಾರ್ಯ ನಿರ್ವಹಿಸುತ್ತಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಅಥವಾ ಸಾಲ ನೀಡಿಕೆ ಏಜೆನ್ಸಿಗಳುಅಥವಾ ಲೇವಾದೇವಿದಾರರು ಸಹ ಸಾಲ ನೀಡುವುದು ಕಾನೂನು ಬಾಹಿರವಾಗಿದ್ದು, ಇಂತಹ ಸಂಸ್ಥೆಗಳ ವಿರುದ್ಧವು ಕಾನೂನು ರೀತಿಕ್ರಮ ಕೈಗೊಳ್ಳಲಾಗುವುದುಎಂದುಜಿ ಲ್ಲಾಧಿಕಾರಿಅವರುಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯುತ್ ವ್ಯತ್ಯಯ

**ಮಂಡ್ಯ:** 66/11 ಕೆ.ವಿ. ತೂಬಿನಕೆರೆ ವಿದ್ಯುತ್ ವಿತರಣಾಕೇಂದ್ರದಲ್ಲಿ ಕಾಳೇನಹಳ್ಳಿ ಫೀಡರ್‌ನ ನಿರ್ವಹಣೆಕಾಮಗಾರಿ ಹಮ್ಮಿಕೊಂಡಿರುವುದರಿಂದಮಾರ್ಚ್ 23 ರಂದುಬೆಳಿಗ್ಗೆ 09–00 ರಿಂದ ಸಂಜೆ 05–00 ಗಂಟೆಯ ವರೆಗೆ ವಿದ್ಯುತ್ ನಿಲುಗಡೆಗೊಳಿಸುವುದರಿಂದ ವಿದ್ಯುತ್ ನಲ್ಲಿ ವ್ಯತ್ಯಯಉಂಟಾಗಲಿದೆ. ಉರಮಾರಕಸಲಗೆರೆ, ಯಲಿಯೂರು, ಕಾಳೇನಹಳ್ಳಿ, ಎಲೆಚಾಕನಹಳ್ಳಿ, ರಾಗಿಮುದ್ದನಹಳ್ಳಿ, ಸುಂಡಹಳ್ಳಿ , ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯತ್ ವ್ಯತ್ಯಯಉಂಟಾಗಲಿದೆ.

## ಕಾಣೆಯಾದವರ ಪತ್ತೆಗಾಗಿ ಮನವಿ

**ಮಂಡ್ಯ:** ನಗರದಬೆಸಗರಹಳ್ಳಿ ಗ್ರಾಮದಗೌರಮ್ಮ (85) ಎಂಬ ಮಹಿಳೆ ಕಾಣೆಯಾಗಿದ್ದರೆಎಂದುಬೆಸಗರಹಳ್ಳಿ ಪೊಲೀಸ್ ಠಾಣೆಯಲ್ಲಿದೂರುದಾಖಲಾಗಿರುತ್ತದೆ. ಕಾಣೆಯಾದ ಮಹಿಳೆಯು ದುಂಡು ಮುಖ, ಗೋಧಿ ಮೈಬಣ್ಣ, ಕಪ್ಪು, ಬಿಳಿ ಮಿಶ್ರಿತ ಕೂದಲು. 5 ಅಡಿ ಎತ್ತರ, ಸಾಧರಣ ಮೈಕಟ್ಟುಹೊಂದಿದ್ದು, ಮನೆಯಿಂದ ಹೊರಡುವಾಗಚಿನ್ನದ ಮಿಶ್ರಿತ ಪಿಂಕ್ ಬಣ್ಣದ ಸೀರೆ ಮತ್ತುರವಿಕೆ ಧರಿಸಿರುತ್ತಾರೆ. ಕಾಣೆಯಾದಮಹಿಳೆಯ ಬಗ್ಗೆ ಸುಳಿವು ಸಿಕ್ಕಲ್ಲಿ ದೂ.ಸಂ: 08232–278264/ 08232–232150/08231–2422211/ 08232–224500 ಸಂಪರ್ಕಿಸಿ.

## ಚುನಾವಣೆ ಸ್ಥಳ ಬದಲಾವಣೆ

**ಯಳಂದೂರು:** ಪಟ್ಟಣದ ಬಳೇಪೇಟೆಯಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಡಳಿತ ಮಂಡಳಿಯ ಚುನಾವಣೆ ಸ್ಥಳವನ್ನು ಬದಲಾವಣೆ ಮಾಡಲಾಗಿದೆ. ಇದಕ್ಕಾಗಿ ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಚುನಾವಣೆ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ ಆ ದಿನ ಆದರ್ಶ ವಿದ್ಯಾಲಯದ ಪರೀಕ್ಷೆಗಳು ನಡೆಯಲಿದ್ದು ಕೊಠಡಿಯನ್ನು ಕೊಡಲು ಸಾಧ್ಯವಿಲ್ಲ ಎಂದು ಇಲ್ಲಿನ ಉಪಪ್ರಾಂಶುಪಾಲರು ಮಾಹಿತಿ ನೀಡಿದ್ದಾರೆ. ಹಾಗಾಗಿ ಈ ಪರೀಕ್ಷೆಯನ್ನು ಇದರ ಎದುರಿಗಿರುವ ಸಿದ್ಧಾರ್ಥ ಪ್ರೌಢಶಾಲೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

### ಸೊಸೈಟಿ ಮುಂದೆ ಕಾರ್ಡ್‌ದಾರರ ಆಕ್ರೋಶ | ಕಾರ್ಡ್‌ದಾರರೇ ಸ್ಕೇಲ್ ತಂದು ಆಹಾರಾಧಿಕಾರಿಗೆ ತೂಕ ವ್ಯತ್ಯಾಸ

# 15 ಕೆಜಿ ಅಕ್ಕಿಯ ಬದಲು 10 ಕೆಜಿ ಅಕ್ಕಿ ವಿತರಣೆ

**ಹುಳಿಯಾರು:** ಒಂದು ತಲೆಗೆ 15 ಕೆಜಿ ಅಕ್ಕಿ ಬದಲು 10 ಕೆಜಿ ಅಕ್ಕಿ ಕೊಡುತ್ತಿದ್ದನ್ನು ಖಂಡಿಸಿ ಕಾರ್ಡ್‌ದಾರರು ಸೊಸೈಟಿ ಮುತ್ತಿಗೆ ಹಾಕಿ ವಂಚನೆಯ ವಿರುದ್ಧ ಸಿಡಿದೆದ್ದ ಘಟನೆ ಹುಳಿಯಾರು ಹೋಬಳಿಯ ಗೌಡಗೆರೆಯಲ್ಲಿ ಶುಕ್ರವಾರ ಜರುಗಿದೆ.

ಅನ್ನಭಾಗ್ಯ ಯೋಜನೆಯಲ್ಲಿ ಅಕ್ಕಿ ಕೊರತೆಯಿಂದಾಗಿ ಇಲ್ಲಿಯವರೆವಿಗೂ ತಲಾ 5 ಕೆಜಿ ಅಕ್ಕಿ ಉಳಿದ 5 ಕೆಜಿಗೆ ಕಾರ್ಡ್‌ದಾರರ ಖಾತೆಗೆ ಹಣ ಸಂದಾಯ ಮಾಡಲಾಗುತ್ತಿತ್ತು. ಫೆಬ್ರವರಿ ಮಾಹೆಯಿಂದಲೇ ಹಣದ ಬದಲು ಅಕ್ಕಿ ಕೊಡುವುದಾಗಿ ಸರ್ಕಾರ ಘೋಷಿಸಿ ಮಾರ್ಚ್ ತಿಂಗಳ 10 ಕೆಜಿ ಅಕ್ಕಿಯ ಜೊತೆಗೆ ಫೆಬ್ರವರಿ ಮಾಹೆಯ 5 ಕೆಜಿ ಅಕ್ಕಿಯನ್ನೂ ಸೇರಿಸಿ ತಲಾ 15 ಕೆಜಿ ಅಕ್ಕಿ ವಿತರಣೆಗೆ ಮುಂದಾಗಿದೆ. ಅದರೆ ಗೌಡಗೆರೆಯ ನ್ಯಾಯಬೆಲೆ ಅಂಗಡಿಯಲ್ಲಿ ಸರ್ಕಾರ ನೀಡಿರುವಂತೆ ಯಾರೊಬ್ಬರಿಗೂ 15 ಕೆಜಿ ಅಕ್ಕಿ ವಿತರಿಸದೆ 10, 12, 14 ಹೀಗೆ ವ್ಯಕ್ತಿಯನ್ನು ನೋಡಿ ಅಕ್ಕಿ ವಿತರಿಸಲಾಗುತ್ತಿತ್ತು.

ವೃದ್ಧರು, ವಿದ್ಯಾರ್ಥಿಗಳು, ಅನಕ್ಷರಸ್ತರು ಬಂದರೆ ತಲಾ 10 ಕೆಜಿ ಅಕ್ಕಿ, ಪುರುಷರು ಬಂದರೆ 13 ಅಥವಾ 14 ಕೆಜಿ ಅಕ್ಕಿ ಹೀಗೆ ತೂಕದಲ್ಲಿ ವಂಚಿಸಲಾಗುತ್ತಿತ್ತು. ಅಂತ್ಯೋದಯ ಕಾರ್ಡ್‌ದಾರರಿಗೆ 3 ಮಂದಿಯವರೆವಿಗೆ 35 ಕೆಜಿ ನಂತರ ತಲಾ ಒಬ್ಬರಿಗೆ 10 ಕೆಜಿ ಅಕ್ಕಿ ಹೆಚ್ಚುವರಿಯಾಗಿ ವಿತರಿಸುವುದರ ಬದಲು ನಾಲ್ಕು, ಐದು, ಆರು ಹೀಗೆ ಕುಟುಂಬದ ಸದಸ್ಯರು 3 ಕ್ಕಿಂತ ಹೆಚ್ಚಿದ್ದರೂ ಸಹ 35 ಕೆಜಿ ಅಕ್ಕಿ ಮಾತ್ರ ವಿತರಿಸಲಾಗುತ್ತಿತ್ತು.

ಸಹಜವಾಗಿ ಇದರಿಂದ ಆಕ್ರೋಶಗೊಂಡ ಕಾರ್ಡ್‌ದಾರರು ಸೊಸೈಟಿಗೆ ಮುತ್ತಿಗೆ ಹಾಕಿ ತೂಕದಲ್ಲಿ ವಂಚಿಸುತ್ತಿದ್ದನ್ನು ಪ್ರಶ್ನಿಸಿದರು. ಅಕ್ಕಿ ಕಡಿಮೆ ಬಂದಿದೆ ಅಡ್ಜೆಸ್ಟ್ ಮಾಡಿ ಕೊಡಿ ಎಂದು ಮೇಲಧಿಕಾರಿಗಳು ಹೇಳಿರುವುದರಿಂದ ಕಡಿಮೆ ಕೊಡಲಾಗುತ್ತಿದೆ ಎಂದು ಸೊಸೈಟಿಯ ರಾಜು ಸಬೂಬು ಹೇಳಿದರು. ತಕ್ಷಣ ಆಹಾರ ನಿರೀಕ್ಷಕರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಸೊಸೈಟಿಯಲ್ಲಾಗುತ್ತಿರುವ ಅನ್ಯಾಯದ ಬಗ್ಗೆ ಗಮನಕ್ಕೆ ತಂದರಲ್ಲದೆ ಖುದ್ದು ಸ್ಥಳಕ್ಕೆ ಬಂದು ವಂಚನೆಯನ್ನು ಕಣ್ಣಾರೆ ನೋಡಿ ನ್ಯಾಯ ಕೊಡಬೇಕೆಂದು ಪಟ್ಟು ಹಿಡಿದರು.

ಪರಿಣಾಮ ಆಹಾರ ನಿರೀಕ್ಷಕ ಪ್ರಜ್ವಲ್ ಅವರು ಗೌಡಗೆರೆಗೆ ದೌಡಾಯಿಸಿ ಕಾರ್ಡ್‌ದಾರರ ಅಹವಾಲು ಆಲಿಸಿದರು. ಈ ಸಂದರ್ಭದಲ್ಲಿ ಕಾರ್ಡ್‌ದಾರರೇ ಸ್ಕೇಲ್ ತಂದು ಸೊಸೈಟಿಯವರು ತೂಗಿ ಕೊಟ್ಟಿರುವ ಅಕ್ಕಿ ಚೀಲವನ್ನು ಮತ್ತೆ ತೂಗಿ ತೂಕದಲ್ಲಿ ವಂಚಿಸಿರುವುದನ್ನು ತೋರಿಸಿದರು. ಅಲ್ಲದೆ ತಿಂಗಳಿಗೆ ಮೂರ್ನಲ್ಕು ದಿನಗಳು ಮಾತ್ರ ರೇಷನ್ ಕೊಡುತ್ತಾರೆ. ಅವರು ಕರೆದಾಗ ಹೋಗದಿದ್ದರೆ ಆ ತಿಂಗಳ ರೇಷನ್ ಕೊಡೋದಿಲ್ಲ. ಹಾಗಾಗಿ ಕೆಲಸ ಕಾರ್ಯ ಬಿಟ್ಟು ಮೂರ್ನಲ್ಕು ಕಿಮೀ ಬಿಸಿಲಿನಲ್ಲಿ ನಡೆದು ಬಂದು ರೇಷನ್ ತೆಗೆದುಕೊಂಡು ಹೋಗುತ್ತೇವೆ. ಆದರೆ ಹೀಗೆ ತೂಕದಲ್ಲಿ ಮೋಸ ಮಾಡಿದರೆ ಹೇಗೆ ಎಂದು ಪ್ರಶ್ನಿಸಿದರಲ್ಲದೆ ನಮ್ಮೂರಿಗೆ ಪ್ರತ್ಯೇಕ ಸೊಸೈಟಿ ಮಾಡಿಕೊಡಿ ಎಂದು ಒತ್ತಾಯಿಸಿದರು.



> “ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ
>
> ಈ ಸೊಸೈಟಿಯ ಬಗ್ಗೆ ಈ ಹಿಂದೆಯೂ ಅನೇಕ ದೂರುಗಳು ಬಂದಿದ್ದವು. ತಿದ್ದುಕೊಳ್ಳಿ ಎಂದು ನೋಟಿಸ್ ಕೊಟ್ಟು ತಿಳಿಸಲಾಗಿತ್ತು. ಆದರೂ ಸಹ ಇಂದು ರೆಡೆ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಕಾರ್ಡ್‌ದಾರರ ಸಮಾಕ್ಷಮದಲ್ಲೇ ಮಹಜರ್ ಸಹ ಮಾಡಲಾಗಿದ್ದು ತೂಕದಲ್ಲಿ ವಂಚಿಸಿರುವುದು ಕಂಡು ಬಂದಿದೆ. ಹಾಗಾಗಿ ಜಿಲ್ಲಾಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ವರದಿ ಕಳುಹಿಸಲಾಗುವುದು.
>
> | ಪ್ರಜ್ವಲ್ ಆಹಾರ ನಿರೀಕ್ಷಕ, ಚಿಕ್ಕನಾಯಕನಹಳ್ಳಿ

### ಕರೆಂಟ್ ಹೋದರೆ ಸ್ಕೇಲ್ ಆಫ್

ಗೌಡಗೆರೆ ನ್ಯಾಯಬೆಲೆ ಅಂಗಡಿಯಲ್ಲಿ ಅಕ್ಕಿ ತೂಗಿ ಕೊಡಲು ಸ್ಕೇಲ್ ಇದೆ. ಈ ಸ್ಕೇಲ್ 30 ಕೆಜಿ ಮಾತ್ರ ತೂಗುವಂತೆ ಲಾಕ್ ಮಾಡಲಾಗಿದೆ. ಅಲ್ಲದೆ ಕರೆಂಟ್ ಹೋದಾಗ ಸ್ಕೇಲ್ ಆಫ್ ಆಗುತ್ತದೆ. ಆಗ ಕರೆಂಟ್ ಹೋಗಿದೆ ಎಂದೇಳಿ ಕಣ್ಣಳತೆಯಲ್ಲೇ ತೂಗಿ ಕೊಡುತ್ತಿದ್ದಾರೆ. ಇದು ತೂಕದಲ್ಲಿ ವಂಚಿಸಲು ಸಹಕಾರಿಯಾಗಿದೆ. ಜನರೂ ಸಹ ಹೇಗೂ ಉಚಿತವಾಗಿ ಕೊಡೋದಲ್ವೆ ಎಂದೇಳಿ ಕೊಟ್ಟಷ್ಟೇ ಇಸ್ಕೋಂಡು ಹೋಗುತ್ತಿದ್ದಾರೆ. ಶುಕ್ರವಾರ ಆಹಾರ ನೀರೀಕ್ಷಕರು ಬಂದಾಗಲೂ ಸಹ ಕರೆಂಟ್ ಇಲ್ಲದ ಕಾರಣದಿಂದ ಸ್ಕೇಲ್ ಆಫ್ ಆಗಿ ಅಂದಾಜಿನ ಪ್ರಕಾರ ಅಕ್ಕಿ ಕೊಡುತ್ತಿದ್ದರು. ಕೊನೆಗೆ ಕಾರ್ಡ್‌ದಾರರೇ ತಂದಿದ್ದ ಸ್ಕೇಲ್‌ನಲ್ಲಿ ಉಳಿದ ಜನರಿಗೆ ಅಕ್ಕಿ ತೂಗಿ ಕೊಡುವ ವ್ಯವಸ್ಥೆ ಮಾಡಲಾಯಿತು.

### ನೂತನ ಅಧ್ಯಕ್ಷರಾಗಿ ಅಣಕನೂರು ವೆಂಕಟೇಶಪ್ಪ ಉಪಾಧ್ಯಕ್ಷೆಯಾಗಿ ಅಶ್ವಥಮ್ಮ

# ಪಟ್ರೇನಹಳ್ಳಿ ಗ್ರಾಪಂಗೆ ಆಯ್ಕೆ

**ಚಿಕ್ಕಬಳ್ಳಾಪುರ:** ತಾಲ್ಲೂಕಿನ ಪಟ್ರೇನಹಳ್ಳಿ ಗ್ರಾಮಪಂಚಾಯಿತಿ ನೂತನ ಅಧ್ಯಕ್ಷರಾಗಿ ಅಣಕನೂರು ವೆಂಕಟೇಶಪ್ಪ ಆಯ್ಕೆಯಾಗಿದ್ದು,ಸಂಸದ ಡಾ.ಕೆ ಸುಧಾಕರ್ ಅವರಿಗೆ ಧನ್ಯವಾದಗಳು ತಿಳಿಸಿ ಪಂಚಾಯ್ತಿಯಲ್ಲಿನ ಏಳು ಗ್ರಾಮಗಳಲ್ಲೂ ಕಸವಿಲೇವಾರಿ ಹಾಗು ಸ್ವಚ್ಚತೆಗೆ ಮೊದಲ ಆದ್ಯತೆ ನೀಡುವುದಾಗಿ ಹೇಳಿದ್ದಾರೆ.

ಶುಕ್ರವಾರ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ನಡೆದ ಅಧ್ಯಕ್ಷ ಉಪಾಧ್ಯಕ್ಷ ಆಯ್ಕೆ ಪ್ರಕ್ರಿಯೆಯಲ್ಲಿ ಅಧ್ಯಕ್ಷರಾಗಿ ಅಣಕನೂರು ವೆಂಕಟೇಶಪ್ಪ ಹಾಗು ಪೂಜನಹಳ್ಳಿ ಅಶ್ವಥಮ್ಮ ಉಪಾಧ್ಯಕ್ಷರಾಗಿ ಅವಿರೋದವಾಗಿ ಆಯ್ಕೆಯಾಗುತುದ್ದಂತೆ

ಅಭಿಮಾನಿಗಳು ಗೆದ್ದ ಅಭ್ಯರ್ಥಿಗೆ ಹೊಮಾಲೆ ಹಾಕಿ ಸಿಹಿ ಹಂಚಿ ಸಂಭ್ರಮಿಸಿದರು.

ಇದೇ ಸಂದರ್ಭದಲ್ಲಿ ನೂತನ ಅಧ್ಯಕ್ಷರಾದ ವೆಂಕಟೇಶಪ್ಪ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿ ಅಣಕನೂರಿನ ಗ್ರಾಮಸ್ಥರಿಗೆ ಎಂದೆಂದಿಗೂ ಅಭಾರಿಯಾಗಿರುತ್ತೇನೆ ನನ್ನ ಮೇಲೆ ನಂಬಿಕೆ ಇಟ್ಟು ಅಧ್ಯಕ್ಷನಾಗಿ ಮಾಡಲು ಸಹಕರಿಸಿದ ಪಂಚಾಯಿತಿ ಸದಸ್ಯರಿಗೆ ಧನ್ಯವಾದಗಳು ತಿಳಿಸುತ್ತೇನೆ,ಇನ್ನು ಪಟ್ರೇನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಏಳು ಗ್ರಾಮಗಳಲ್ಲಿ ಮೂಲಸೌಕರ್ಯ ಒದಗಿಸಲು ಪ್ರಥಮ ಆದ್ಯತೆ ಜೊತೆಗೆ ವಿವಿಧ ಕೆಲಸಗಳಿಗಾಗಿ ಪಂಚಾಯಿತಿಗೆ ಬರುವ ಜನರಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸಿ ಆದಷ್ಟು ಬೇಗ ಅವರ ಕೆಲಸಗಳನ್ನು ಮಾಡಲು ಕೆಲಸ ಮಾಡಲಾಗುವುದು.ಇನ್ನು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಸ್ವಚ್ಚತೆ ಮುಖ್ಯ ಹಾಗಾಗಿ ಪ್ರತಿ ಹಳ್ಳಿಗಳಲ್ಲಿ ಸ್ವಚ್ಚತೆ ಕಾಪಾಡಲು ಹೆಚ್ಚಿನ ಒತ್ತು ನೀಡಲಾಗುವುದು

ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ,ಬೀದಿ ದೀಪ ನಿರ್ವಹಣೆ,ಸಮೇತ ಜನರ ಪ್ರತಿ ಸಮಸ್ಯೆಗಳನ್ನು ಪರಿಹರಿಸಲು ಕಾಳಜಿಯಿಂದ ಕೆಲಸ ಮಾಡಲಾಗುವುದು ಸಿಕ್ಕಿರುವ ಅವಕಾಶವನ್ನು ಬಳಸಿಕೊಂಡು ಪಟ್ರೇನಹಳ್ಳಿ ಗ್ರಾಮ ಪಂಚಾಯಿತಿಯನ್ನು ಮಾದರಿ ಪಂಚಾಯಿತಿ ಮಾಡುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ಯನ್ನ ತಹಶೀಲ್ದಾರ್ ಅನಿಲ್ ರವರು ಸುಸೂತ್ರವಾಗಿ ನಡೆಸಿಕೊಟ್ಟರು

ನೂತನ ವಾಗಿ ಆಯ್ಕೆಯಾದ ವೆಂಕಟೇಶಪ್ಪ ಮತ್ತು ಅಶ್ವಥಮ್ಮ ಗೆಲುವಿಗೆ ಪಟಾಕಿ ಸಿಡಿಸಿ ಸಿಹಿ ಹಂಚಿ ಅಣಕನೂರು ಗ್ರಾಮದವರೆಗೂ ಮೆರವಣಿಗೆ ಮಾಡಿ ಸಂಭ್ರಮಿಸಿದರು.ಗೆದ್ದ ಅಧ್ಯಕ್ಷ ಉಪಾಧ್ಯಕ್ಷರನ್ನ ಪಿ ಎಲ್ ಡಿ ಬ್ಯಾಂಕ್ ನಿರ್ದೇಶಕ ಆನಂದಮೂರ್ತಿ ಮಾಜಿ ತಾಲ್ಲೂಕು ಪಂಚಾಯಿತಿ ಸದಸ್ಯ ಎ ಆರ್ ರಾಮಣ್ಣ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಬೃಂದ.ಡಿ.,ಲೋಕೇಶ್ ,ಜಯಚಂದ್ರ,ರಘುಪತಿ,ಪಟ್ರೇನಹಳ್ಳಿ ರಾಕೇಶ್ ಅಣಕನೂರು ಸುನಿಲ್,ಶ್ರೀನಿವಾಸ್ ದೇವರಾಜ್

ಅಣಕನೂರು ಮುನಿಕೃಷ್ಣಪ್ಪ ಲಕ್ಷ್ಮಣ ನಾಗರಾಜು ಗಂಗರಾಜು ಶ್ರೀನಿವಾಸ್ ವೆಂಕಟೇಶ ಇತರರು ಹಾಜರಾಗಿ ಅಭಿನಂದನೆ ಸಲ್ಲಿಸಿದರು.



## ಎಂಇಎಸ್ ತಂಟೆಕೋರರರನ್ನು ಬೆಳಗಾವಿಯಿಂದ ಗಡಿಪಾರು ಮಾಡುವಂತೆ ಒತ್ತಾಯ



**ಕೋಲಾರ:** ಬೆಳಗಾವಿಯಲ್ಲಿ ಎಂಇಎಸ್ ಪುಂಡಾಟಿಕೆ ವಿರೋಧಿಸಿ ಕನ್ನಡ ಒಕ್ಕೂಟವು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಕೋಲಾರ ಜಿಲ್ಲಾ ಕನ್ನಡ ಪರ ಸಂಘಟನೆಗಳ ಒಕ್ಕೂಟವು ಬೆಂಬಲಿಸಿ ಶನಿವಾರ ನಗರದ ಗಾಂಧಿವನದಲ್ಲಿ ಸಾಂಕೇತಿಕ ಪ್ರತಿಭಟನೆ ನಡೆಸಿದ ನಂತರ ಸರ್ಕಾರಕ್ಕೆ ಕೋಲಾರ ಜಿಲ್ಲಾಧಿಕಾರಿ ಎಂ.ಆರ್.ರವಿ ರವರ ಮೂಲಕ ಮನವಿಯನ್ನು ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹಿರಿಯ ಕನ್ನಡ ಹೋರಾಟಗಾರರಾದ ಜಯದೇವ ಪ್ರಸನ್ನ ಮತ್ತು ಕಲಾವಿದ ವಿಷ್ಣು ಮಾತನಾಡಿ, ಬೆಳಗಾವಿಯಲ್ಲಿ ಎಂಇಎಸ್ ಮತ್ತು ಶಿವಸೇನೆಯ ಪುಂಡಾಟಿಕೆ ಮಿತಿಮೀರಿದೆ, ಕೂಡಲೇ ಸಂಘಟನೆಗಳನ್ನು ನಿಷೇಧ ಮಾಡಬೇಕು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿರ್ವಾಹಕನ ಮೇಲೆ ಹಲ್ಲೆ ಹಾಗೂ ಚಾಲಕನ ಮುಖಕ್ಕೆ ಮಸಿ ಬಳಿದು ಅಟ್ಟಹಾಸ ಮೆರೆದಿರುವ ಎಂಇಎಸ್ ಸಂಘಟನೆಯ ತಂಟೆಕೋರರನ್ನು ಬೆಳಗಾವಿಯಿಂದ ಗಡಿಪಾರು ಮಾಡಬೇಕು ಹಾಗೂ ಬೆಳಗಾವಿಯಲ್ಲಿ ನೆಲೆಸಿ ಅಣ್ಣ ತಮ್ಮಂದಿರಂತಿರುವ ಕನ್ನಡ ಮತ್ತು ಮರಾಠಿ ಭಾಷಿಕರ ಮಧ್ಯೆ ಭಾಷಾ ದ್ವೇಷವನ್ನು ತುಂಬುತ್ತಾ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುತ್ತಿರುವ ಎಂಇಎಸ್ ಪುಂಡರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕನ್ನಡಪರ ಸಂಘಟನೆಗಳ ಮುಖಂಡರಾದ ಕೋ.ನಾ. ಪ್ರಭಾಕರ್, ಕನ್ನಡ ಮಿತ್ರ ವೆಂಕಟಪ್ಪ, ಕೆ.ಆರ್. ತ್ಯಾಗರಾಜ್, ಐ. ಸುನಿಲ್ ರಾಜ್, ಎನ್ .ಪಿ.ಶಿವಚಂದ್ರಯ್ಯ, ವೆಂಕಟಕೃಷ್ಣ, ಪಿ. ನಾರಾಯಣಪ್ಪ, ಗೌರಿಪೇಟೆ ರವೀಂದ್ರನಾಥ್, ಎಪಿಎಂಸಿ ಪುಟ್ಟರಾಜು ಭಾಗವಹಿಸಿದ್ದರು.

## ಕೋಲಾರಮ್ಮದೇವಿಯ ಬ್ರಹ್ಮರಥೋತ್ಸವ

**ಕೋಲಾರ:** ಕೋಟೆ ಪ್ರದೇಶದಲ್ಲಿರುವ ನಗರ ದೇವತೆ ಶ್ರೀಕೋಲಾರಮ್ಮದೇವಿಯ ಬ್ರಹ್ಮರಥೋತ್ಸವವು ಸಾವಿರಾರು ಭಕ್ತಾಧಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಕಾರ್ಯಕ್ರಮದಲ್ಲಿ ಕೋಟೆ ರಾಜೇಶ್, ವಕೀಲ ಸುಮನ್, ನಾಗೇಂದ್ರ, ಜಗದೀಶ್, ರವೀಶ್, ಸುಮನ್‌ಸಿಂಗ್, ಪುಟ್ಟರಾಜು, ಮಣಿ, ಆನಂದ್, ಗೋವಿಂದ, ಪೈ, ಮಧುಕರ್, ಎಸ್.ಓ.ಮಂಜುನಾಥ್, ಸೋಮಶೇಖರ್, ಶರತ್, ಜಯಚಂದ್ರ, ಆದಿತ್ಯ, ಜ್ಯೂಸ್ ನಾರಾಯಣಸ್ವಾಮಿ ಸೇರಿದಂತೆ ಕೋಟೆಯ ನಾಗರೀಕರು, ಭಕ್ತಾಧಿಗಳು ಉಪಸ್ಥಿತರಿದ್ದರು.

ಭಕ್ತಾಧಿಗಳಿಗೆ ಚಿತ್ರನ್ನ ಮತ್ತು ಕಾಬೂಲ್ ಕಳ್ಳೇ, ಮಜ್ಜಿಗೆ, ಲಾಡು ಮತ್ತು ನೀರಿನ ವ್ಯವಸ್ಥೆಯನ್ನು ಮಾಡಲಾಗಿತ್ತು.

ಈಗಾಗಲೇ ಸುಮಾರು ವರ್ಷಗಳಿಂದ ಪ್ರಭಾತ್ ಚಿತ್ರಮಂದಿರದ ಮುಂಭಾಗ ವಕೀಲ ಸುಮನ್ ಮತ್ತು ಕೋಟೆ ರಾಜೇಶ್ ಹಾಗೂ ಸ್ನೇಹಿತರು ರಥೋತ್ಸವ ಸಂದರ್ಭದಲ್ಲಿ ಆಗಮಿಸುವ ಭಕ್ತಾಧಿಗಳಿಗೆ ಚಿತ್ರನ್ನ ಮತ್ತು ಕಾಬೂಲ್ ಕಳ್ಳೇ, ಮಜ್ಜಿಗೆ, ಲಾಡು ಮತ್ತು ನೀರಿನ ವ್ಯವಸ್ಥೆ ಮಾಡುತ್ತಾ ಬರುತ್ತಿದ್ದು, ಮುಂದಿನ ದಿನಗಳಲ್ಲೂ ಸಹ ಮುಂದುವರೆಸಿಕೊಂಡು ಹೋಗುವುದಾಗಿ ಸುಮನ್ ಮತ್ತು ಕೋಟೆ ರಾಜೇಶ್ ಹಾಗೂ ಸ್ನೇಹಿತರ ಬಳಗ ತಿಳಿಸಿದೆ.



## ಹಿರೇಮಠ್ ಪೇನ್ ಹೀಲಿಂಗ್ ಆಸ್ಪತ್ರೆ ಉದ್ಘಾಟನೆ



**ಮೈಸೂರು:** ತಾಲ್ಲೂಕು ಹಂಚ್ಯಾ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಹಿರೇಮಠ್ ಪೇನ್ ಹೀಲಿಂಗ್ ಆಸ್ಪತ್ರೆಯನ್ನು ಜಪದ ಕಟ್ಟೆ ಸ್ವಾಮೀಜಿ ಹಾಗೂ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹೆಚ್.ಸಿ.ಕುಮಾರಸ್ವಾಮಿ ಇಂದು (ಮಾ.22) ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಡಾ.ಸತೀಶ್ ಹಿರೇಮಠ್ ಸೋಮಶೇಖರ್, ಗ್ರಾಮದ ಯಜಮಾಜರಾದ ಕೆ.ಸಣ್ಣಸ್ವಾಮಿ, ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಾದ ಬಸವರಾಜು, ಚೆನ್ನಯ್ಯ ಹಾಗೂ ಗ್ರಾಮದ ಮುಖಂಡ ಮಹೇಶ್, ಬೂಸ್ಟೂರ್ ಭಟ್, ಹೆಚ್.ಎಂ.ಬಸವರಾಜು, ಚಂದ್ರಶೇಖರ್, ಮನೋಜ್‌ಕುಮಾರ್, ಡಾ.ಸಂಗಮೇಶ್, ಡಾ.ವೀರೇಶ್‌ಬಾಬು, ಸ್ವಾಮಿಗೌಡ, ಪರಮೇಶ್ ಹಾಗೂ ಹಂಚ್ಯಾ ಸಾತಗಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.

# ಸ್ವಚ್ಛ ರಾಜಕಾರಣ ನಮ್ಮ ಮುಖ್ಯಧ್ಯೇಯ

**ಚಿಕ್ಕಬಳ್ಳಾಪುರ:** ಇಂದಿನ ರಾಜಕಾರಣದಲ್ಲಿ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದ್ದು ಇದರ ಬಾಗವಾಗಿ ಇಂದು ರಾಜಕಾರಣ ಇಂದು ದಂದೆಯಾಗಿ ರುವುದರಿಂದ ಇದನ್ನು ಸ್ವಚ್ಛೊಳಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಮಾಜಿ ಮುಖ್ಯಮಂತ್ರಿ ಜೆ ಹೆಚ್ ಪಟೇಲ್ ರವರ ಮಗ ಮಹಿಮಾ ಪಟೇಲ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಜೆ ಡಿ ಯು ರಾಜ್ಯಾದ್ಯಕ್ಷ ಮಹಿಮಾ ಪಾಟಿಲ್ ಇಂದಿನ ರಾಜಕಾರಣ ತುಂಬ ಮಲಿನತೆಯಿಂದ ಕೂಡಿದ್ದು ಇದು ಹೀಗೆ ಮುಂದುವರೆದರೆ ನಾಳಿನ ಜನಾಂಗಕ್ಕೆ ರಾಜಕಾರಣ ಮತ್ತು ಆಡಳಿತ ಯಂತ್ರಾಂಗ ಸಂಪೂರ್ಣವಾಗಿ ಮತ್ತೊಮ್ಮೆ ಬ್ರಿಟೀಷರು ನಮ್ಮನ್ನು ಆಳುವಂತಹ ಕ್ರಮವನ್ನು ಸೃಷ್ಟಿಸಬಹುದಾದ ಹೀನ ಸಂಸ್ಕೃತಿಯು ಬರುವ ದಿನಗಳು ದೂರದಲ್ಲಿಲ್ಲ ಎಂಬ ನೋವಿನ ವಿಷಯವನ್ನು ತಿಳಿಸಿದರು,ಚುನಾವಣೆಗಳಂದರೆ ಜನರಲ್ಲಿ ಹೆಂಡ,ಬಿರ್ಯಾನಿ,ಹಣ, ಸೀರೆ ಹಾಗೂ ಬೆಲೆಬಾಳುವ ಉಡುಗೊರೆಗೆ ಮಾರುವ ಸರಕಾಗಿ ತಮ್ಮ ಮತ,ಎಂಬ ಅಸಹ್ಯಕರ ಬಾವನೆಯನ್ನು ರೋಪಿಸಿರುದು ತುಂಬಾ ಖಂಡನೀಯ ಇಂತ ಶೋಚನೀಯ ಸ್ಥಿಯಲ್ಲಿ ನಮ್ಮ ದ ಡಾಕ್ಟರ್ ನಾಗರಾಜ್ ರವರನ್ನು ನಮ್ಮ ಪಕ್ಷದ ಅಭ್ಯರ್ಥಿಯಾಗಿ ಪ್ರತಿನಿಧಿಸಲಿದ್ದಾರೆ,ಇದರ ಬಾಗವಾಗಿ ದೇಶದ ಮತ್ತು ರಾಜ್ಯದ ಭ್ರಷ್ಟಾಚಾರ ತಡೆಗಟ್ಟುವ ನಿಟ್ಟಿನಲ್ಲಿ ಹಲವಾರು ಸಂಘ, ಹಾಗೂ ಸಂಘಟನೆಗಳು ಹೋರಾಟ ಮಾಡುತ್ತಿದ್ದು ಇಂತಹ ಸಮಯಕ್ಕೆ ಎದುರು ನೋಡುತ್ತಿದ್ದ ಅವರು ರಾಜ್ಯದ ಕೆ,ಆರ್.ಎಸ್. ಪಕ್ಷವು ನಮ್ಮ ಪಕ್ಷಕ್ಕೆ ಬೆಂಬಲ ಸೂಚಿಸಿದ್ದಾರೆ, ಇದೇ ದೆಸೆಯಲ್ಲಿ ಕರ್ನಾಟಕದಲ್ಲಿ ಹಲಾವಾರು ಸ್ಥಳಗಳಲ್ಲಿ ಜಾತಾ ಮಾಡುವ ಮೂಲಕ ಜನರಲ್ಲಿ ಭ್ರಷ್ಟಾಚಾರ ರಹಿತ ರಾಜಕೀಯ ಮತದಾನದ ಅರಿವನ್ನು ಮೂಡಿಸಿ ಪಾರದರ್ಶಕ ಚುನಾವಣೆಯನ್ನು ತರುವಲ್ಲಿ ನಾವೆಲ್ಲರೂ ಶ್ರಮಿಸಬೇಕು ಎಂದು ನುಡಿದರು.ಆಗ್ನೇಯ ಪದವೀದರ ಕ್ಷೇತ್ರದ ಅಭ್ಯರ್ಥಿ ಡಾ ನಾಗರಾಜ್ ಮಾತನಾಡಿ ದೇಶ ಮತ್ತು ರಾಜ್ಯ ಇರುವುದು ಅಭಿವೃದ್ದಿಗೆ ಬಹಳ ಮಾರಕವಾದ ವಿಷಯ ಅದ್ದರಿಂದ ಸರ್ವೋದಯ ಎಂಬ ಅಂಶದಲ್ಲಿ ಆರೋಗ್ಯ, ಕೃಷಿ, ಪರಿಸರ, ಮತ್ತು ಆಡಳಿತ ಇವುಗಳನ್ನು ಉನ್ನತಿಕರಿಸಿ ಉತ್ತಮ ಮಾರ್ಗದಲ್ಲಿ ನಡೆಯುವ ಹಾಗೆ ಸ್ವಚ್ಚ ಆಡಳಿತ ಬೇಕು ಎಂದರೆ ಸ್ವಚ್ಚವಾದ ಮತದಾನವಾಗಬೇಕಿದೆ ಇದರ ಹಿನ್ನೆಲೆಯಲ್ಲಿ ಜೆಡಿಯು ಒಂದು ಆಲೋಚನಾ ಹೆಜ್ಜೆಯನ್ನು ಕರ್ನಾಟಕದಲ್ಲಿ ತರಲು ಪ್ರಯತ್ನಿಸುತ್ತಿರುವ ಬಾಗವೇ ಆಗ್ನೇಯ ಪದವಿದರ ಕ್ಷೇತ್ರಕ್ಕೆ ನಮ್ಮ ಪಕ್ಷದಿಂದ ಸ್ಪರ್ದೆಗೆ ಅವಕಾಶ ನೀಡಲಾಗಿದೆ ಎಂದರು.ಈ ಸಂದರ್ಭದಲ್ಲಿ ಡಾ. ಕೆ ನಾಗರಾಜ್ ಆಗ್ನೇಯ ಪದವೀಧರ ಕ್ಷೇತ್ರದ ಎಆಗ ಅಭ್ಯರ್ಥಿ, ಚಂದ್ರ ಶೇಖರ್ ಗಂಗೂರ್ ರಾಜ್ಯ ಪ್ರದಾನ ಕಾರ್ಯದರ್ಶಿಗಳು,ಡಿ.ಕೆ ಶ್ರೀನಿವಾಸ ಗೌಡ, ಶ್ರೀಮತಿ ಕಲಾವತಿ ಮಹಿಳಾ ಅಧ್ಯಕ್ಷರು, ಕೆ, ಆರ್ ರಂಗನಾಥ್ ಪ್ರಧಾನ ಕಾರ್ಯದರ್ಶಿಗಳು, ಡಿಜೆ ಪ್ರಭು ಯುವ ಜನತಾದಳದ ರಾಜ್ಯ ಉಪಾಧ್ಯಕ್ಷರು, ನಾರಾಯಸ್ವಾಮಿ ಗೌಡ, ಮಹೇಶ್ ಗೌಡ, ಮನೋಜ್ ಗೌಡ, ನಾರಾಯಣಸ್ವಾಮಿ, ಮೋತಿಲಾಲ್, ಮುಂತಾದವರು.



## ಕಲ್ಲಿನ ಉತ್ಪನ್ನಗಳ ಮೇಲೆ ರಾಜಧನ ಹೆಚ್ಚಳ ಮಾಡಿದ ಸರ್ಕಾರ ಟಿಪ್ಪರ್ ಮಾಲೀಕರ ಮುಷ್ಕರ

**ಚಿಕ್ಕಬಳ್ಳಾಪುರ:** ರಾಜ್ಯಸರ್ಕಾರ ಕಲ್ಲಿನ ಉತ್ಪನ್ನಗಳ ಮೇಲಿನ ರಾಜಧನ ಹೆಚ್ಚಳ ಮಾಡಿ ಆದೇಶ ಮಾಡಿದೆ. ಇದನ್ನೇ ನೆಪ ಮಾಡಿಕೊಂಡ ಕ್ರಷರ್ ಮಾಲೀಕರು ಏಕಾಏಕಿ ಕಲ್ಲಿನ ಉತ್ಪನ್ನಗಳ ಬೆಲೆ ಏರಿಕೆ ಮಾಡಿದ್ದಾರೆ. ಇದರಿಂದ ರೊಚ್ಚಿಗೆದ್ದ ಟಿಪ್ಪರ್ ಮಾಲೀಕರು ಕಲ್ಲಿನ ಉತ್ಪನ್ನಗಳ ಮಾರಾಟಗಾರರು ನೂರಾರು ಟಿಪ್ಪರ್ ಗಳನ್ನ ಕ್ರಷರ್‌ಗಳ ರಸ್ತೆಗೆ ಅಡ್ಡ ಹಾಕಿ ಭಾರೀ ಮುಷ್ಕರ ನಡೆಸಿರುವ ಘಟನೆ ಚಿಕ್ಕಬಳ್ಳಾಪುರದಲ್ಲಿ ನಡೆದಿದೆ.

**ಮುಷ್ಕರ ಯಾಕೆ..?:** ಮನೆ, ರಸ್ತೆ, ಅಪಾರ್ಟ್‌ಮೆಂಟ್ ದೊಡ್ಡ ದೊಡ್ಡ ಬಿಲ್ಡಿಂಗ್ ಕಟ್ಟೋಕೆ ಎಂ ಸ್ಯಾಂಡ್, ಜಲ್ಲಿ ಕಲ್ಲು ಸೇರಿ ಕಲ್ಲಿನ ಉತ್ಪನ್ನಗಳು ಬೇಕೇಬೇಕು. ಅದ್ರಲ್ಲೂ ರಾಜಧಾನಿ ಬೆಂಗಳೂರಿಗೆ ಸರಬರಾಜು ಆಗೋ ಬಹುತೇಕ ಎಂ ಸ್ಯಾಂಡ್ ಬರೋದೇ ಚಿಕ್ಕಬಳ್ಳಾಪುರದಿಂದ. ಆದ್ರೆ ಈಗ ಚಿಕ್ಕಬಳ್ಳಾಪುರದ ಯಲಗಲಹಳ್ಳಿ ಕ್ರಷರ್ ಝೋನ್ ಬಳಿ ಎಂ ಸ್ಯಾಂಡ್ ಹಾಗೂ ಜಲ್ಲಿಕಲ್ಲಿನ ಬೆಲೆ ಧಿಢೀರ್ ಅಂತ ಏರಿಕೆ ಮಾಡಲಾಗಿದೆ. ಹೌದು. ರಾಜ್ಯ ಸರ್ಕಾರ ಇಷ್ಟು ದಿನ 1 ಟನ್ ಎಂ ಸ್ಯಾಂಡ್ ಹಾಗೂ ಜಲ್ಲಿಕಲ್ಲಿಗೆ 70 ರೂಪಾಯಿ ರಾಜಧನ ಇದ್ದು ಈಗ 80 ರೂಪಾಯಿ ಮಾಡಿದೆ. ಅಂದ್ರೆ, ಪ್ರತಿ ಟನ್ ಗೆ 10 ರೂಪಾಯಿ ಹೆಚ್ಚಳ ಮಾಡಿ ಆದೇಶ ಮಾಡಿದೆ. ಹೀಗಾಗಿ ಕ್ರಷರ್ ಮಾಲೀಕರು ಇಷ್ಟು ದಿನ 380 ರೂ.ನಿಂದ 450 ರೂ.ವರೆಗೂ ಮಾರಾಟ ಮಾಡ್ತಿದ್ದ ಎಂ ಸ್ಯಾಂಡ್ ಹಾಗೂ ಜಲ್ಲಿ ಕಲ್ಲಿನ ಬೆಲೆಯನ್ನ 450 ರಿಂದ 550 ರೂಪಾಯಿಯವರೆಗೂ ಏರಿಕೆ ಮಾಡಿದೆ. ಇದ್ರಿಂದ ರೋಸಿ ಹೋದ ಟಿಪ್ಪರ್ ಮಾಲೀಕರು ಧಿಢೀರ್ ಅಂತ ನೂರಾರು ಟಿಪ್ಪರ್ ಲಾರಿಗಳನ್ನ ಬಂದ್ ಮಾಡಿ ಮುಷ್ಕರ ನಡೆಸಿದ್ದಾರೆ.

ಅಂದಹಾಗೆ ಚಿಕ್ಕಬಳ್ಳಾಪುರ ತಾಲೂಕಿನ ಯಲಗಲಹಳ್ಳಿ ಕ್ರಷರ್ ಝೋನ್ ನಲ್ಲೇ 40ಕ್ಕೂ ಹೆಚ್ಚು ಕ್ರಷರ್ ಗಳಿವೆ, ಇವುಗಳನ್ನೇ ನಂಬಿಕೊಂಡು 1,500 ಕ್ಕೂ ಹೆಚ್ಚು ಟಿಪ್ಪರ್ ಮಾಲೀಕರು ಕಲ್ಲಿನ ಉತ್ಪನ್ನಗಳನ್ನ ಸಾಗಾಟ ಮಾರಾಟ ಮಾಡಿಕೊಂಡು ಜೀವನ ರೂಪಿಸಿಕೊಂಡಿದ್ದಾರೆ. ಆದ್ರೆ ಈಗ ಏಕಾಏಕಿ ಟನ್ ಮೇಲೆ ಸರಾಸರಿ 100 ರೂಪಾಯಿ ಏರಿಕೆ ಮಾಡಿರೋದು ಟಿಪ್ಪರ್ ಮಾಲೀಕರ ಆಕ್ರೋಶಕ್ಕೆ ಕಾರಣವಾಗಿದೆ. ಇನ್ನೂ ಮುಷ್ಕರದ ವೇಳೆ ಚಾಲಕರಿಗೆ ಸಮಸ್ಯೆ ಆದಾಗ ಟಿಪ್ಪರ್ ಮಾಲೀಕರು ಸ್ಪಂದಿಸಲ್ಲ. ಮುಷ್ಕರ ನಿರತ ಚಾಲಕರಿಗೆ ತಿಂಡಿ ಊಟ ಸಹ ನೀಡಿಲ್ಲ ಅಂತ ಚಾಲಕರು ಟಿಪ್ಪರ್ ಮಾಲೀಕರ ಮೇಲೆಯೇ ಮುಗಿಬಿದ್ದ ಕಾರಣ ಟಿಪ್ಪರ್ ಮಾಲೀಕರು ಹಾಗೂ ಚಾಲಕರ ನಡುವೆಯೇ ತಳ್ಳಾಟ ನೂಕಾಟ ನಡೆದು ವಾಗ್ವಾದವೂ ನಡೆಯಿತು. ರಾಜ್ಯ ಸರ್ಕಾರ 10 ರೂಪಾಯಿ ರಾಜಧನ ಏರಿಕೆ ಮಾಡಿದ್ರೆ, ಕ್ರಷರ್ ಮಾಲೀಕರು ಸರಾಸರಿ 100 ರೂಪಾಯಿ ಏರಿಕೆ ಮಾಡಿದ್ದು ಇದು ಟಿಪ್ಪರ್ ಮಾಲೀಕರ ಆಕ್ರೋಶಕ್ಕೆ ಕಾರಣವಾಗಿದೆ.



ಸಂಜೆ ಮುಗಿಲು
ಭಾನುವಾರ
23.3.2025



# ಪರಿಸರ ಅಭಿವೃದ್ಧಿ, ನಿರ್ವಹಣೆಯ ಸಂವಹನ ಕಾರ್ಯಾಗಾರ

**ಮಂಡ್ಯ:** ಗ್ರಾಮದಲ್ಲಿರುವ ಪರಿಸರ, ಜೀವವೈವಿಧ್ಯತೆ, ಜಲಾನಯನಅಭಿವೃದ್ಧಿ, ವನ್ಯಜೀವಿಸಂರಕ್ಷಣೆ, ವಿಪತ್ತು ನಿರ್ವಹಣೆ, ನೈಸರ್ಗಿಕ ಸಂಪನ್ಮೂಲಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿಗ್ರಾಮ ಪರಿಸರಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ವಿಕಸನ ಗ್ರಾಮೀಣ ಮತ್ತು ನಗರಾಭಿವೃದ್ಧಿ ಹಾಗೂ ಎಫ್ ಇ ಎಸ್ ಸಂಸ್ಥೆ ಸಹಯೋಗದೊಂದಿಗೆತಾಲ್ಲೂಕು ಮಟ್ಟದಗ್ರಾಮ ಪರಿಸರಅಭಿವೃದ್ಧಿ ಮತ್ತು ನಿರ್ವಹಣೆಯ ಬಗ್ಗೆ ಸಮುದಾಯ ಸಂವಹನ ಕಾರ್ಯಕ್ರಮವನ್ನು ಮಂಡ್ಯತಾಲ್ಲೂಕು ಪಂಚಾಯತ್ ಸಾಮರ್ಥ್ಯ ಸೌಧ ಸಭಾಂಗಣದಲ್ಲಿಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯನಿರ್ವಾಹಕಅಧಿಕಾರಿತಾಲ್ಲೂಕು ಪಂಚಾಯತ್ ಮಂಡ್ಯ ಶ್ರೀಮತಿ.ವೀಣಾ ಎಂ ಎಸ್‌ರವರುಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾಉತ್ತಮ ಪರಿಸರವನ್ನು ಉಳಿಸಿ ಕೊಳ್ಳಬೇಕಾದರೆ ಸಮುದಾಯದ ಆಸ್ತಿಗಳಾದ ನೀರಿನ ಮೂಲಗಳು, ಕೆರೆ, ಕಟ್ಟೆ, ಗೋಮಾಳ, ಸ್ಮಶಾನ, ಗುಂಡುತೋಪುಗಳನ್ನು ಅಭಿವೃದ್ಧಿ ಪಡಿಸಿ ಕೊಳ್ಳಬೇಕಾಗಿದೆ. ಇವುಗಳ ಅಭಿವೃದ್ಧಿಗಾಗಿ ನಮ್ಮಗ್ರಾಮ ಪಂಚಾಯಿತಿಗಳಲ್ಲಿ ಮಹಾತ್ಮಗಾಂಧಿಉದ್ಯೋಗಖಾತರಿಯೋಜನೆಯ ಮೂಲಕ ಸಮುದಾಯದ ಭಾಗವಹಿಸಿವಿಕೆಯಿಂದ ಅಭಿವೃದ್ಧಿ ಮಾಡಬೇಕುಎಂದರು. ವಿಕಸನ ಸಂಸ್ಥೆಯ ನಿರ್ದೇಶಕರಾದ ಶ್ರೀ ಮಹೇಶಚಂದ್ರಗುರು, ಮಾತನಾಡಿಗ್ರಾಮ ಪರಿಸರಅಭಿವೃದ್ಧಿ ಮತ್ತು ನಿರ್ವಹಣೆಯ ಸಮಿತಿಯು ನಿರ್ವಹಿಸಬೇಕಾದ ಜವಾಬ್ದಾರಿಗಳು ಮತ್ತು ವಿವಿಧ ಇಲಾಖೆಗಳ ಸಮನ್ವಯತೆ ಸಾಧಿಸಿ ಸಾಮೂಹಿಕ ಆಸ್ತಿಗಳನ್ನು ಅಭಿವೃದ್ಧಿಪಡಿಸಿ ಮುಂದಿನ ಪೀಳಿಗೆಗೆ ನಾವು ರಕ್ಷಣೆ ಮಾಡಬೇಕಾಗಿದೆಎಂದು ತಿಳಿಸಿದರು. ಶ್ರೀ ಭೀಮಾ ನಾಯಕ್‌ಎಫ್‌ಇಎಸ್ ಸಂಸ್ಥೆರವರು ಗೋಮಾಳದ ಉಪಯೋಜನೆಗಳ ಬಗ್ಗೆ ಮಾತನಾಡಿದರು.



ಶ್ರೀ ಮಲ್ಲೇಶ್ ಸಹಾಯಕ ನಿರ್ದೇಶಕರು, ಗ್ರಾಮೀಣಉದ್ಯೋಗತಾಲ್ಲೂಕು ಪಂಚಾಯತ್, ಶ್ರೀ ಶ್ರೀಧರ್ ಬಿ ವಿ ಸಹಾಯಕ ನಿರ್ದೇಶಕರು, ಪಂಚಾಯತ್‌ರಾಜ್ ಮಂಡ್ಯ, ಶ್ರೀ ಕೃಷ್ಣೇಗೌಡ, ಅಧ್ಯಕ್ಷರುಜನರಕ್ಷಗ್ರಾಮೀಣಅಭಿವೃದ್ಧಿ ಸಂಸ್ಥೆ ಮಂಡ್ಯ, ಶ್ರೀ ರವಿಕುಮಾರ್‌ಎಂಎಲ್‌ತಾಂತ್ರಿಕ ಸಂಯೋಜಕರು, ಹಾಗೂ ಜೀವನ್, ಪಿಡಿಒ ಮುದಗಂದೂರು, ರಾಮಕೃಷ್ಣ, ಪಿಡಿಒ ಶಿವಪುರ, ಪ್ರದೀಪ್ ಪಿಡಿಒ ಬೇವುಕಲ್ಲು, ಉಪಸ್ಥಿತರಿದ್ದರು, ಗ್ರಾಮ ಪರಿಸರ ಮತ್ತು ಸಮುದಾಯ ಆಸ್ತಿಗಳನ್ನು ಅಭಿವೃದ್ಧಿ ಮತ್ತುರಕ್ಷಣೆ ಮಾಡುವುದರ ಬಗ್ಗೆ ಸಮಿತಿಯ ಸದಸ್ಯರುಗಳಿಗೆ ಮಾಹಿತಿಯನ್ನು ಹಂಚಿಕೊಂಡರು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಮುದಾಯದ ಆಸ್ತಿಗಳನ್ನು ಅಭಿವೃದ್ಧಿ ಪಡಿಸಿ ರಕ್ಷಣೆ ಮಾಡಬೇಕಾಗಿದೆ. ಮುಖ್ಯವಾಗಿಗ್ರಾಮದಜನರು ಮತ್ತುಉಪಸಮಿತಿಯು ಭಾಗವಹಿಸಿ ಸಹಕಾರ ನೀಡಿದರೆ ಒಲುಓಖಇಲುಂ ಯೋಜನೆಯಕಾರ್ಯಕ್ರಮದ ಮೂಲಕ ವಾರ್ಡ್ ಮತ್ತು ಗ್ರಾಮಸಭೆಗಳಲ್ಲಿ ಕ್ರಿಯಾಯೋಜನೆಗೆ ಸೇರಿಸಿ ಅನುಮೋದನೆ ಮಾಡಿಗ್ರಾಮದ ಸಮುದಾಯದ ಆಸ್ತಿಗಳನ್ನು ಅಭಿವೃದ್ಧಿಪಡಿಸಿ ರಕ್ಷಣೆ ಮಾಡಲು ಸಾಧ್ಯವಾಗುತ್ತದೆಎಂದುಅಭಿಪ್ರಾಯಿಸಲಾಯಿತು.

ಶಿವಪುರ ಗ್ರಾಮ ಪಂಚಾಯಿತಿ ಪಿಡಿಒಕಾರ್ಯಕ್ರಮದ ಬಗ್ಗೆ ಕುರಿತು ಮಾತನಾಡಿದರು, ಹಾಗೂ ಜಿಪಿಎಎನ್‌ಎಸ್ ಸಮಿತಿ ಸದಸ್ಯರು ಮಾತನಾಡಿ ಸಮುದಾಯದ ಆಸ್ತಿಗಳನ್ನು ಗ್ರಾಮಸ್ಥರೇ ಗುರುತಿಸಿ ಅಭಿವೃದ್ಧಿ ಮತ್ತು ನಿರ್ವಹಣೆ ಮಾಡುವ ಬಗ್ಗೆ ಜಾಗೃತಿ ಮೂಡಿಸಿ ಗ್ರಾಮದಜನರುಗ್ರಾಮ ಪಂಚಾಯಿತಿಜೊತೆ ಕೈ ಜೋಡಿಸಿ ಸಮುದಾಯದ ಆಸ್ತಿಗಳನ್ನು ಅಭಿವೃದ್ಧಿ ಪಡಿಸಿಕೊಂಡು ಉತ್ತಮ ಪರಿಸರ ನಿರ್ಮಾಣ ಮಾಡುವುದರಿಂದ ಮುಂದಿನ ಪೀಳಿಗೆಗೆ ಅನುಕೂಲವಾಗುತ್ತದೆಎಂದು ತಿಳಿಸಿದರು.

## ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ಮುಂದೂಡಿಕೆ

**ಪಿರಿಯಾಪಟ್ಟಣ:** ಕೋಮಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ 12 ಸ್ಥಾನಗಳಿಗೆ 12 ಸ್ಥಾನಗಳಲ್ಲಿ ಜಯಗಳಿಸಿದ್ದ ಕಾಂಗ್ರೆಸ್ ಪಕ್ಷ ಬೆಂಬಲಿತ ನಿರ್ದೇಶಕರಲ್ಲಿ ಒಮ್ಮತ ಮೂಡದ ಹಿನ್ನೆಲೆಯಲ್ಲಿ ಚುನಾವಣೆ ಮುಂದೂಡಲ್ಪಟ್ಟಿದೆ. ತಾಲೂಕಿನ ಕೋಮಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಆಯ್ಕೆ ಸಂಬಂಧ ಶುಕ್ರವಾರ ಚುನಾವಣೆ ನಿಗದಿಯಾಗಿತ್ತು. ಕೋಮಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 12 ಸ್ಥಾನಗಳಿಗೆ 12 ಸ್ಥಾನಗಳಲ್ಲಿಯೂ ಕಾಂಗ್ರೆಸ್ ಬೆಂಬಲಿತ ನಿರ್ದೇಶಕರು ಚುನಾಯಿತರಾಗುವ ಮೂಲಕ ಅಧಿಕಾರದ ಗದ್ದುಗೆ ಏರುವ ಅವಕಾಶವನ್ನು ಪಡೆದುಕೊಂಡಿದ್ದರು. ಆದರೆ ಶುಕ್ರವಾರ ನಿಗದಿಯಾಗಿದ್ದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೆ.ಪಿ.ಜೀವನ್ ಕುಮಾರ್ ಹಾಗೂ ಜ್ಯೋತಿ, ಉಪಾಧ್ಯಕ್ಷ ಸ್ಥಾನಕ್ಕೆ ಧರ್ಮಪಾಲ ಹಾಗೂ ಗೋವಿಂದೇಗೌಡ ನಾಮಪತ್ರ ಸಲ್ಲಿಸಿದ್ದರು. ಆದರೆ ಚುನಾವಣಾ ಪ್ರಕ್ರಿಯೆ ಆರಂಭವಾಗಿ ಒಂದು ಒಂದು ಗಂಟೆ ಕಳೆದರೂ ಅವಶ್ಯಕವಿರುವ ನಿರ್ದೇಶಕರು ಪಾಲ್ಗೊಳ್ಳದ ಕಾರಣ ಚುನಾವಣೆ ಮುಂದೂಡಲ್ಪದೆ ಎಂದು ಚುನಾವಣಾಧಿಕಾರಿ ಸೈಯದಾ ಉಜ್ಮಾ ಶಮಾನಾ ತಿಳಿಸಿದರು. ಈ ಸಂದರ್ಭದಲ್ಲಿ ಚುನಾವಣಾಧಿಕಾರಿ ಸೈಯದಾ ಉಜ್ಮಾ ಶಮಾನಾ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರದೀಪ್ ಕುಮಾರ್, ಸಿಬ್ಬಂದಿ ರಾಮಕೃಷ್ಣ, ನಿರ್ದೇಶಕರಾದ ಹೆಚ್.ಸಿ.ರವಿ, ಮುಖಂಡರಾದ ಗೋವಿಂದೇಗೌಡ, ಸ್ವಾಮಿಗೌಡ, ವಕೀಲ ಸುದೀಶ್ ಸೇರಿದಂತೆ ಸಾರ್ವಜನಿಕರು ಹಾಗೂ ರೈತ ಮುಖಂಡರು ಉಪಸ್ಥಿತರಿದ್ದರು.

## ವಿವಿಧೆಡೆ ವಿದ್ಯುತ್ ವ್ಯತ್ಯಯ

**ಚಾಮರಾಜನಗರ:** ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಚಾಮರಾಜನಗರ ಉಪವಿಭಾಗ ವ್ಯಾಪ್ತಿಯ ಪಣ್ಯದಹುಂಡಿ ಮಾರ್ಗದಲ್ಲಿ 4ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಮಾರ್ಚ್ 23 ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಬದನಗುಪ್ಪೆ, ಪಣ್ಯದಹುಂಡಿ, ಬೆಂಡರವಾಡಿ, ಕೆಲ್ಲಂಬಳ್ಳಿ ಎನ್.ಜೆ.ವೈ. ಇಂಡಸ್ಟ್ರೀಯಲ್ ಏರಿಯಾ, ಕೆ.ಇ.ಡಿ.ಪಿ. 10 ಮತ್ತು 11, ಮುತ್ತಿಗೆ, ಹೆಗ್ಗೋಠಾರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ನಿಗಮದ ಜೊತೆ ಸಹಕರಿಸಬೇಕು. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂ.ಸಂ 1912 ಗೆ ಕರೆ ಮಾಡುವಂತೆ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗುಂಡ್ಲು ಪೇಟೆ: ನೀರಿನ ಪೈಪ್ ಲೈನ್ ಮಾರ್ಗದಲ್ಲಿ ಸೋರಿಕೆ ಕಂಡು ಬಂದರೆ ಮಾಹಿತಿ ನೀಡಿ

**ಚಾಮರಾಜನಗರ:** ಗುಂಡ್ಲುಪೇಟೆ ಪಟ್ಟಣ ವ್ಯಾಪ್ತಿಯ ಹಲವು ಬಡಾವಣೆಗಳಿಗೆ ಕಬಿನಿ ನದಿಯಿಂದ ಹೊಸ ಪೈಪ್‌ಲೈನ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದ್ದು, ಸದರಿ ಪೈಪ್ ಲೈನ್ ಮಾರ್ಗದಲ್ಲಿ ಸೋರಿಕೆ ಕಂಡು ಬಂದಲ್ಲಿ ಪುರಸಭೆ ಕಚೇರಿಗೆ ತುರ್ತಾಗಿ ಮಾಹಿತಿ ನೀಡುವಂತೆ ಮನವಿ ಮಾಡಲಾಗಿದೆ. ಅಮೃತ್ 2.0ರ ಯೋಜನೆಯಡಿ ಗುಂಡ್ಲುಪೇಟೆ ಪಟ್ಟಣಕ್ಕೆ ಕಬಿನಿ ಕುಡಿಯುವ ನೀರು ಸರಬರಾಜು ಮಾಡುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಪ್ರಸ್ತುತ ಗುಂಡ್ಲುಪೇಟೆ ಪಟ್ಟಣ ವ್ಯಾಪ್ತಿಯ ಹಲವು ಬಡಾವಣೆಗಳಿಗೆ ಕಬಿನಿ ನದಿಯಿಂದ ಹೊಸ ಪೈಪ್‌ಲೈನ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದ್ದು, ಸದರಿ ಪೈಪ್ ಲೈನ್ ಮಾರ್ಗದಲ್ಲಿ ಸೋರಿಕೆ ಕಂಡು ಬಂದಲ್ಲಿ ಪುರಸಭೆ ಕಚೇರಿಗೆ ತುರ್ತಾಗಿ ಮಾಹಿತಿ ನೀಡಬೇಕು. ಆರೋಗ್ಯದ ಹಿತದೃಷ್ಟಿಯಿಂದ ಸಾರ್ವಜನಿಕರು ನೀರನ್ನು ಕುದಿಸಿ ಆರಿಸಿ ಬಳಸುವಂತೆ ಪುರಸಭೆ ಅಧ್ಯಕ್ಷರು ಮತ್ತು ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ಕೋರಿದ್ದಾರೆ.

## 25ರಂದು ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ

**ಚಾಮರಾಜನಗರ:** ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಚಾಮರಾಜನಗರದ ಪ್ಯಾಲೆಸ್ ಟೊಯೋಟಾ ಇವರ ಸಹಯೋಗದೊಂದಿಗೆ ವಿವಿಧ ಹುದ್ದೆಗಳ ನೇಮಕಾತಿಗಾಗಿ ಮಾರ್ಚ್ 25 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 3 ಗಂಟೆಯ ವರೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನ ನಡೆಸಲಾಗುತ್ತದೆ. ಸೇಲ್ಸ್ ಎಕ್ಸಿಕ್ಯೂಟಿವ್ ಇನ್ ಶೋ ರೂಂ, ಸರ್ವಿಸ್ ಅಡ್ವೈಸರ್,ಟೆಕ್ನಿಷಿಯನ್, ರಿಸಪ್ಷನಿಸ್ಟ್ ಬ್ಯಾಕ್ ಎಂಡ್ ಎಕ್ಸಿಕ್ಯೂಟಿವ್ 25 ಹುದ್ದೆಗಳಿಗೆ ಪಿ.ಯು.ಸಿ. ಐಟಿಐ, (ಆಟೋ ಮೊಬೈಲ್ ಮತ್ತು ಮೆಕ್ಯಾನಿಕಲ್), ಡಿಪ್ಲೋಮಾ, ಯಾವುದೇ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿರುವ 21 ರಿಂದ 32 ವಯೋಮಿತಿಯ ಯುವಕ- ಯುವತಿಯರು ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಸ್ವ-ವಿವರ (ಬಯೋಡೆಟಾ) ಮತ್ತು ಅಂಕಪಟ್ಟಿಗಳ ಮೂಲ ಹಾಗೂ ಜೆರಾಕ್ಸ್ ಪ್ರತಿಗಳೊಂದಿಗೆ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗಾಧಿಕಾರಿಗಳು, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಚಾಮರಾಜನಗರ, ಇವರನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ ಅಥವಾ ದೂರವಾಣಿ ಸಂಖ್ಯೆ 08226-224410 ಗೆ ಕರೆಮಾಡಿ ಮಾಹಿತಿ ಪಡೆಯುವಂತೆ ಪ್ರಕಟಣೆ ತಿಳಿಸಿದೆ.

# ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಶಾಸಕರಿಂದ ಗುದ್ದಲಿ ಪೂಜೆ

**ಚಾಮರಾಜನಗರ:** ಚಾಮರಾಜನಗರ ಹೊಸ ಪ್ರಾದೇಶಿಕ ಸಾರಿಗೆ ಕಚೇರಿಯ ಸಮೀಪ ಇರುವ ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯದ ಸುತ್ತುಗೋಡೆ ನಿರ್ಮಾಣ ಕಾಮಗಾರಿಗೆ ಎಂಎಸ್‌ಐಎಲ್ ಅಧ್ಯಕ್ಷರು, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು. ಇದೇವೇಳೆ ಅವರು ಮಾತನಾಡಿ, ಉರ್ದು ಶಾಲೆಯ ಬಾಲಕಿಯರ ವಿದ್ಯಾರ್ಥಿನಿಲಯದ ಸುತ್ತುಗೋಡೆ ನಿರ್ಮಾಣಕ್ಕೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 1.8 ಕೋಟಿ ರೂ. ಅನುದಾನ ಮಂಜೂರಾಗಿದೆ, ಗುತ್ತಿಗೆದಾರರು ನಿಗ್ಧಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಶಾಲೆಗಳಿಗೆ ಬೇಕಾದ ಮೂಲಸೌಕರ್ಯ ಒದಗಿಸಲು ತಾವು ಬದ್ದರಾಗಿದ್ದು, ನನ್ನ ಪ್ರಥಮ ಆಧ್ಯತೆ ಶಿಕ್ಷಣಕ್ಕೆ ಎಂದರು.

ಚುಡಾಅಧ್ಯಕ್ಷ ಮಹಮದ್ ಅಸ್ಗರ್, ನಗರಸಭೆ ಮಾಜಿಸದಸ್ಯ ಅತೀಕ್ ಅಹಮದ್ ,ವಿನೋದ್, ಮುಖಂಡರು ಹಾಜರಿದ್ದರು.



## ಭಾರತದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರದ ಪ್ರಭಾವ ಕುರಿತ ವಿಚಾರ ಸಂಕಿರಣ

**ಚಾಮರಾಜನಗರ:** ಬೆಂಗಳೂರಿನ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಚಾಮರಾಜನಗರ ವಿಶ್ವವಿದ್ಯಾಲಯ ಇವರ ಸಹಯೋಗದಲ್ಲಿ ''ಭಾರತದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರದ ಪ್ರಭಾವ'' ಕುರಿತ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಮಾರ್ಚ್ 25ರಂದು ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಬ್ಯಾಂಕ್ ಸ್ಥಾಪನೆಗೆ ಅಡಿಗಲ್ಲಾದ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೇರುಕೃತಿ 'ದಿ ಪ್ರಾಬ್ಲಂ ಆಫ್ ದಿ ರುಪಿ' ಪುಸ್ತಕದ ಶತಮಾನೋತ್ಸವ ಅಂಗವಾಗಿ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದ್ದು, ವಿದ್ಯಾರ್ಥಿಗಳು, ಸಾರ್ವಜನಿಕರು, ಮುಖಂಡರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಮುನಿರಾಜು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶಾಸಕ ಸಿ. ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಚಾಲನೆ

# ಚಾಮರಾಜನಗರ ಸ್ವಚ್ಛತಾ ಅಭಿಯಾನಕ್ಕೆ

**ಚಾಮರಾಜನಗರ:** ಚೆಲುವ ಚಾಮರಾಜನಗರ ಸ್ವಚ್ಛತಾ ಅಭಿಯಾನ ಕಾರ್ಯಕ್ರಮಕ್ಕೆ ಎಂ.ಎಸ್.ಐ.ಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ನಗರದಲ್ಲಿ ಇಂದು ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ ಸೇರಿದಂತೆ ಪಟ್ಟಣದ ಹಲವು ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ನಗರದ ಸಂತೇಮರಹಳ್ಳಿ ವೃತ್ತದಲ್ಲಿಂದು ಹಮ್ಮಿಕೊಳ್ಳಲಾಗಿದ್ದ ಸ್ವಚ್ಚತಾ ಅಭಿಯಾನಕ್ಕೆ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಹಸಿರು ನಿಶಾನೆ ತೋರಿದರು.

ಬಳಿಕ ನಗರಸಭಾ ಅಧ್ಯಕ್ಷರಾದ ಎಸ್. ಸುರೇಶ್, ಉಪಾಧ್ಯಕ್ಷರಾದ ಮಮತ, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ, ಇತರೆ ಗಣ್ಯರು ನಗರದ ದೊಡ್ಡಂಗಡಿ ಬೀದಿಯುದ್ದಕ್ಕೂ ಕಸಪೊರಕೆ ಹಿಡಿದು ರಸ್ತೆಯನ್ನು ಸ್ವಚ್ಚಗೊಳಿಸುವ ಮೂಲಕ ಚಾಮರಾಜನಗರ ಸ್ವಚ್ಚತಾ ಅಭಿಯಾನ ಕಾರ್ಯಕ್ರಮಕ್ಕೆ ಹುರುಪು ತಂದರು. ಪಟ್ಟಣದ ಸ್ವಚ್ಚತೆಗಾಗಿ ನಗರದ ನಾಗರಿಕರನ್ನು ಪ್ರೇರೇಪಿಸಿದರು. ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ ಅವರು ರಸ್ತೆಯ ಅಂಗಡಿಗಳ ಮಾಲೀಕರೊಂದಿಗೆ ಮಾತನಾಡಿ ರಸ್ತೆಯಲ್ಲಿ ಮುಂಭಾಗದಲ್ಲಿ ಎಲ್ಲೆಂದರಲ್ಲಿ ಕಸ ಸುರಿಯದೇ ನಿಗಧಿತ ಸ್ಥಳದಲ್ಲೇ ಹಾಕಬೇಕು. ಪ್ಲಾಸ್ಟಿಕ್ ಬಳಸಬಾರದು. ಅಂಗಡಿ ಮುಂದಿನ ಚರಂಡಿಯಲ್ಲಿ ಕಸ ಹಾಕದಂತೆ ಮಾಲೀಕರ ಮನವೊಲಿಸಿದರು. ಶುದ್ಧ ಗಾಳಿ, ಶುದ್ಧ ಜಲಕ್ಕಾಗಿ ಸ್ವಚ್ಚತೆಯ ಅರಿವನ್ನು ಸಾರ್ವಜನಿಕರಿಗೆ ಮೂಡಿಸಿದರು.



ಆರಂಭದಲ್ಲಿ ಸ್ವಚ್ಚತಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಎಂ.ಎಸ್.ಐ.ಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಚಾಮರಾಜನಗರ ಪಟ್ಟಣ ನಾಲ್ಕೂ ಕಡೆಯು ಅಭಿವೃದ್ಧಿ ಹೊಂದುತ್ತಿದೆ. ಮುಖ್ಯವಾಗಿ ಪಟ್ಟಣದ ಜನರಿಗೆ ಸ್ವಚ್ಚತೆಯ ಬಗ್ಗೆ ಜಾಗೃತಿ ಅಗತ್ಯವಾಗಿದೆ. ಸುಂದರ ಪಟ್ಟಣಕ್ಕಾಗಿ ಸ್ವಚ್ಚತಾ ಕಾರ್ಯ ನಿರಂತರವಾಗಿ ನಡೆಯಬೇಕು. ಪಟ್ಟಣದ ಒಳಚರಂಡಿ ವ್ಯವಸ್ಥೆಯನ್ನು ಸಮಗ್ರ ಅಭಿವೃದ್ಧಿಗಾಗಿ 144 ಕೋಟಿ ಅನುದಾನದ ಅವಶ್ಯವಿದೆ. ಸ್ವಚ್ಚತೆಗೆ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳ ಸಹಕಾರವು ಬೇಕು ಎಂದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಬಹಳ ಉತ್ಸಾಹದಿಂದ ಸ್ವಚ್ಚತಾ ಅಭಿಯಾನ ಆರಂಭಿಸಿದ್ದೇವೆ. ಸ್ವಚ್ಚತೆ ಎನ್ನುವುದು ನಗರಸಭೆಯ ಕೆಲಸ ಮಾತ್ರವಲ್ಲ. ಸ್ವಚ್ಚತಾ ಕಾರ್ಯದಲ್ಲಿ ಎಲ್ಲರ ಸಹಭಾಗಿತ್ವ ಅಗತ್ಯವಾಗಿದೆ. ಮುಂದಿನ ಒಂದು ವರ್ಷದೊಳಗೆ ಚಾಮರಾಜನಗರ ಸ್ವಚ್ಛ, ಸುಂದರ ಪಟ್ಟಣವಾಗುವ ನಿಟ್ಟಿನಲ್ಲಿ ಪಟ್ಟಣದ ಎಲ್ಲಾ 31 ವಾರ್ಡ್‌ಗಳಲ್ಲಿಯೂ ಪ್ರತಿವಾರ ಸ್ವಚ್ಚತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಚೆಲುಚ ಚಾಮರಾಜನಗರಕ್ಕಾಗಿ ಎಲ್ಲರೂ ಒಗ್ಗೂಡಿ ಶ್ರಮಿಸಬೇಕಾಗಿದೆ. ಇದಕ್ಕಾಗಿ ಎಲ್ಲಾ ಸಂಘ ಸಂಸ್ಥೆಗಳ ಸಹಕಾರ, ನೆರವು ಬೇಕಾಗಿದೆ ಎಂದರು.

ಸ್ವಚ್ಚತೆ ಒಂದು ದಿನದ ಕಾರ್ಯಕ್ರಮ ವಾಗಬಾರದು. ನಿರಂತರವಾಗಿರಬೇಕು. ಎಲ್ಲಾ ವಾರ್ಡ್‌ಗಳಲ್ಲಿ ಜನಾಂದೋಲನ ಮಾದರಿಯಲ್ಲಿ ಸ್ವಚ್ಚತಾ ಅರಿವು ಕಾರ್ಯಕ್ರಮ ನಡೆಯಬೇಕು. ಎಲ್ಲಾ ಜನಪ್ರತಿನಿಧಿಗಳು, ನಾಗರಿಕರು ಸ್ವಚ್ಚತಾ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಮನೆಮನೆಗಳಲ್ಲಿ, ಅಂಗಡಿಗಳ ಹಂತದಲ್ಲಿಯೇ ಹಸಿ ಕಸ, ಒಣಕಸ ಬೇರ್ಪಡಿಸಿ ಸ್ವಚ್ಚತಾ ವಾಹನಗಳಿಗೆ ನೀಡಬೇಕು. ಕಸವನ್ನು ಸೂಕ್ತವಾಗಿ ವಿಲೇವಾರಿ ಮಾಡಬೇಕು. ಪ್ರತಿದಿನ ಬೆಳ್ಳಂಬೆಳಿಗ್ಗೆಯೇ ಸ್ವಚ್ಚತೆ ಕಾರ್ಯದಲ್ಲಿ ತೊಡುಗುವ ಪೌರಕಾರ್ಮಿಕರಿಗೆ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ತಿಳಿಸಿದರು.

ಚುಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ನಗರಸಭೆ ಸದಸ್ಯರಾದ ಕುಮುದ, ಬಸವಣ್ಣ, ಚಂದ್ರಶೇಖರ್, ಚಿನ್ನಮ್ಮ, ಮುಂಜುನಾಥ್, ಶಿವರಾಜು, ಪೌರಾಯುಕ್ತರಾದ ಎಸ್.ವಿ. ರಾಮದಾಸ್, ಪಟ್ಟಣದ ವಿವಿಧ ಸಂಘಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು ಸ್ವಚ್ಚತಾ ಅಭಿಯಾನ ಕಾರ್ಯಕ್ರಮದಲ್ಲಿ ಇದ್ದರು.

# ಬರಗೂರು ಬೆಟ್ಟದಲ್ಲಿ ಮಹಿಳಾ ದಿನ



**ಮೈಸೂರು:** ಅರಸು ಮಹಿಳಾಜಾಗೃತಿಸಭಾಟ್ರಸ್ಟ್ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ದ್ರೋಣ ಗಿರಿಮಠ ಬರಗೂರು ಬೆಟ್ಟದಲ್ಲಿ ಸೋಲಿಗರ ನಡುವೆ ಅದ್ದೂರಿಯಾಗಿ ಆಚರಿಸಲಾಯಿತು ಮಠಾದೀಶ್ವರರಾದ ಪೂಜ್ಯ ಶ್ರೀ ಶ್ರೀ ಅಶೋಕ ಸ್ವಾಮೀಜಿಗಳ ಸಾರಥ್ಯದಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಆಟೋಟಸ್ಪರ್ದೆಗಳನ್ನು ಏರ್ಪಡಿಸಲಾಗಿತ್ತು. ಗೆದ್ದವರಿಗೆ ಬಹುಮಾನವಿರಿಸಲಾಯಿತು. ಸೋಲಿಗರ ಶಾಲಾ ಮಕ್ಕಳಿಗೆ ಬ್ಯಾಗ್ ವಿತರಿಸಲಾಯಿತು.

ಎಲ್ಲಾ ಮಹಿಳೆಯರಿಗೆ ಸೀರೆ ಕುಪ್ಪಸವನ್ನು ನೀಡುವುದರ ಮೂಲಕ ಹಾಗು ಅಲ್ಲಿನಮಕ್ಕಳು ಮನರಂಜನಾಕಾರ್ಯಕ್ರಮವನ್ನು ನೀಡುವುದರ ಮೂಲಕ ರಂಜಿಸಿದರುಈಕಾರ್ಯಕ್ರಮದ ಉಸ್ತುವಾರಿ ಸಂಸ್ಥೆಯ ಸಂಸ್ಥಾಪನಅಧ್ಯಕ್ಷರಾದ ಶ್ರೀಮತಿ ಡಾ.ಪಿ.ಬಿ.ಇಂದುಕಲಾಅರಸ್ ಬಿ.ವಿಜಯ ಕಾರ್ಯ ದರ್ಶಿಗಳಾ ಶ್ರೀಮತಿಪೂರ್ಣಿಮ ಅರಸ್ ಹಾಗೂ ಕೃಪಾಲಿನಿ ಅರಸ್ ಅಂಬಿಕಾ ಅರಸ್, ರೂಪಾಅರಸ್ ,ರಾಜೇಶ್ವರಿಅರಸ್, ಕಾಂತಮ್ಮಣ್ಣಿಅರಸ್ ಅವರುಗಳು ಬಾಗವಹಿಸಿದ್ದರು.

# ಸಾಧಕಿಯರಿಗೆ ಸನ್ಮಾನ

**ಮೈಸೂರು:** ಮೈಸೂರಿನ ಮೂಡ ಎದುರು ಜೆ ಎಲ್ ಬಿ ರಸ್ತೆಯಲ್ಲಿರುವ ರೋಟರಿ ಸಂಭಾಂಗಣದಲ್ಲಿ ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ತು(ರಿ) ವತಿಯಿಂದ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳಾ ಸಾಧಕಿಯರಿಗೆ ಸನ್ಮಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಲಾಯಿತು.

ಶ್ರೀರಾಂಪುರ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು ಶ್ರೀಮತಿ ಕಮಲ ನಟರಾಜು ರವರು ಉದ್ಘಾಟನೆ ಮಾಡಿದರು.

50 ಮಹಿಳಾ ಸಾಧಕರಿಗೆ ಸನ್ಮಾನ ಮಾಡಲಾಯಿತು. ಈ ಸಂದರ್ಭದಲ್ಲಿ ಸಂಸ್ಥಾಪಕ ಗೌರವಾಧ್ಯಕ್ಷರು ಹಾಗೂ ಖ್ಯಾತ ಮನೋವಿಜ್ಞಾನಿ ಶ್ರೀಮತಿ ಡಾ. ರೇಖಾ ಮನ:ಶಾಂತಿ ಮತ್ತು ಸಂಸ್ಥಾಪಕ ಅಧ್ಯಕ್ಷರು ಡಾ. ಕಸ್ತೂರಿ ಚಂದ್ರು, ಹಾಗೂ ಮೈಸೂರು ನಗರಾಧ್ಯಕ್ಷರು ಶ್ರೀಮತಿ ಡಾ. ಮೌಲ್ಯ ಜೈಕುಮಾರ್ ಮತ್ತು ಮೈಸೂರು ಜಿಲ್ಲಾಧ್ಯಕ್ಷರು ಶ್ರೀಮತಿ ಅಮೀನಾ ಬೇಗಂ ಹಾಗೂ ಅಶೋಕಪುರಂ ಠಾಣೆಯ ಮಹಿಳಾ ಸಹಾಯಕ ಇನ್ಸ್‌ಪೆಕ್ಟರ್ ಗೀತಾ ಎಂ.ಬಿ, ಹಾಗೂ ಸಮಾಜ ಸೇವಕರು ಖುಷಿ ವಿನು ಮತ್ತು ಇನ್ನು ಮುಂತಾದವರು ಭಾಗಿಯಾಗಿದ್ದರು.




# ಪ್ಯಾಲೆಸ್ಟಿನ್ ಮೇಲಿನ ಇಸ್ರೇಲ್ ದಾಳಿ ಖಂಡಿಸಿ ಪ್ರತಿಭಟನೆ

**ಮೈಸೂರು:** ಪ್ಯಾಲೆಸ್ಟಿನ್ ಗುರಿಯಾಗಿಸಿ ಇಸ್ರೇಲ್ ನಡೆಸುತ್ತಿರುವ ದಾಳಿ ಯನ್ನು ಖಂಡಿಸಿ ಎಸ್‌ಡಿಪಿಐ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಂತ ಫಿಲೋಮಿನಾ ಚರ್ಚ್ ಎದುರು ಶನಿವಾರ ಮಧ್ಯಾಹ್ನ ಜಮಾಯಿ ಸಿದ ಎಸ್‌ಡಿಪಿಐ ಕಾರ್ಯಕರ್ತರು ಇಸ್ರೇಲ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತ ನಾಡಿ, ಇಸ್ರೇಲ್ ಕದನ ವಿರಾಮ ಘೋಷಿ ಸಿದ ನಂತರ ಏಕಾಏಕಿ ಪ್ಯಾಲೆಸ್ಟಿನ್ ಮೇಲೆ ದಾಳಿ ನಡೆಸಿ ಸುಮಾರು 500ಕ್ಕೂ ಹೆಚ್ಚು ಜನರನ್ನು ಕೊಂದು ಹಾಕಿದೆ. ಇದರಲ್ಲಿ 200ಕ್ಕೂ ಹೆಚ್ಚು ಮಕ್ಕಳು ಮೃತ ರಾಗಿದ್ದಾರೆ. ಅಮೆರಿಕಾ ಪರೋಕ್ಷವಾಗಿ ಜನಾಂಗೀಯ ಹತ್ಯೆಗೆ ಕುಮ್ಮಕ್ಕು ನೀಡಿದರೆ, ವಿಶ್ವಸಂಸ್ಥೆ ಕಣ್ಣಿದ್ದು

ಕುರುಡಾಗಿದೆ ಎಂದು ಕಿಡಿ ಕಾರಿದರು. ಮುಸ್ಲಿಂ ರಾಷ್ಟ್ರಗಳ ಒಕ್ಕೂಟ ಸೇರಿದಂತೆ ★ ಇಡೀ ಜಗತ್ತು ಇಸ್ರೇಲ್‌ನ ಈ ಅಮಾನ ವೀಯ ಹತ್ಯಾಕಾಂಡವನ್ನು ವಿರೋಧಿಸುತಿಲ್ಲದಿರುವುದು ಆಘಾತಕಾರಿ ವಿಷಯ. ಇದುವರೆಗೂ ಇಸ್ರೇಲ್ ದಾಳಿಯಿಂದ ಸುಮಾರು 50 ಸಾವಿರ ಪ್ಯಾಲೆಸ್ತಿನರು ಹತರಾಗಿದ್ದಾರೆ. ಇದರಲ್ಲಿ ಅರ್ಧದಷ್ಟು ಮಕ್ಕಳು ಸಾವನ್ನಪ್ಪಿರುವುದು ಅತ್ಯಂತ ದಾರುಣ ಘಟನೆಯಾಗಿದೆ. ನಾವು ಪ್ಯಾಲೆಸ್ಟಿನ್ ಜನತೆಗೆ ಮಾನವೀಯ ದೃಷ್ಟಿಯಿಂದ ಬೆಂಬಲ ನೀಡಬೇಕಿದೆ ಎಂದು ಹೇಳಿದರು.

ಮಹಾತ್ಮ ಗಾಂಧಿ ಅವರ ಕಾಲದಿಂದಲೂ ಪ್ಯಾಲೆಸ್ಟಿನ್ ಸ್ವಾತಂತ್ರ್ಯ ಹೋರಾಟವನ್ನು ಭಾರತ ಬೆಂಬಲಿಸಿದೆ. ಪ್ರಸ್ತುತ ಭಾರತ ಸರ್ಕಾರವು ಇಸ್ರೇಲ್‌ನ ವಿರುದ್ಧ ತಕ್ಷಣವೇ ಗಂಭೀರ ನಿಲುವು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಜಿಲ್ಲಾಧ್ಯಕ್ಷ ರಫತ್ ಖಾನ್, ರಾಜ್ಯ ಕಾರ್ಯದರ್ಶಿ ಮೌಲಾನಾ ಆಕ್ರಮ್, ಜಿಲ್ಲಾ ಕಾರ್ಯದರ್ಶಿ ಆಯೇಶಾ ಜಬಿ, ರಾಜ್ಯ ಖಜಾಂಚಿ ಅಮ್ಜದ್ ಖಾನ್, ಜಿಲ್ಲಾ ಮುಖಂಡರಾದ ಸಫಿಯುಲ್ಲಾ, ಫಿರ್ದೋಸ್, ಫರ್ಧಿನ್, ಮೌಲಾನಾ ನೂರುದ್ದೀನ್, ಅಲ್ತಾಫ್, ತಬ್ರೇಜ್ ಸೇಠ್, ಮನ್ಸೂರ್ ಖಾನ್, ಸುಹೇಲ್ ಆತಿಫ್, ಫೈರೋಜ್ ಮತ್ತಿತರರಿದ್ದರು.




**ಪ್ಯಾಲೆಸ್ಟಿನ್ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿ ಖಂಡಿಸಿ ಎಸ್‌ಡಿಪಿಐ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.**

# ಅಪಘಾತದಲ್ಲಿ ಮರಣ ಹೊಂದಿದ ವಾರಸುದಾರರು, ಗಾಯಗೊಂಡವರಿಗೆ ಪರಿಹಾರ

**ಚಾಮರಾಜನಗರ:** ಹಿಟ್ ಮತ್ತು ರನ್ ಅಪಘಾತದಲ್ಲಿ ಮರಣ ಹೊಂದಿದ ವಾರಸುದಾರರು ಮತ್ತು ಗಾಯಗೊಂಡವರು ಪರಿಹಾರ ಮೊತ್ತವನ್ನು ಪಡೆಯಲು ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಅರ್ಜಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ತಿಳಿಸಿದ್ದಾರೆ.

ಮೋಟಾರು ವಾಹನ ಕಾಯ್ದೆ 1988 ರಡಿ ಸೆಕ್ಷನ್ 161 ರಲ್ಲಿ ಕಾಂಪನ್‌ಷೇಶನ್ ಟು ವಿಕ್ಟಿಮ್ಸ್ ಆಫ್ ಹಿಟ್ ಅಂಡ್ ರನ್ ಮೋಟಾರ್ ಆಕ್ಸಿಡೆಂಟ್ ಸ್ಕೀಮ್-2022ರ ಸೊಲಾಷಿಯಂ ಯೋಜನೆಯ 1989ಅನ್ನು ಮರುಪರಿಶೀಲಿಸಿ 2022ರ ಏಪ್ರೀಲ್ 1 ರಿಂದ ಜಾರಿಗೆ ಬರುವಂತೆ ಸದರಿ ಯೋಜನೆಯನ್ನು ವರ್ಧಿಸಲು ಹಾಗೂ ರಸ್ತೆ ಅವಘಾತಗಳ ಹಿಟ್ ಮತ್ತು ರನ್ ಪ್ರಕರಣಗಳಲ್ಲಿ ಗಾಯಗೊಂಡವರಿಗೆ ಐವತ್ತು ಸಾವಿರ ರೂಗಳನ್ನು ಮತ್ತು ಮೃತಪಟ್ಟ ಅವಲಂಬಿತ ಕುಟುಂಬದ ಸದಸ್ಯರಿಗೆ ಎರಡು ಲಕ್ಷ ರೂಗಳ ಪರಿಹಾರ ಮೊತ್ತವನ್ನು ಈ ಯೋಜನೆಯಡಿಯಲ್ಲಿ ಪಡೆದುಕೊಳ್ಳಬಹುದು.



ಸಾರ್ವಜನಿಕರು ಪರಿಹಾರದ ಅನುಕೂಲವನ್ನು ಪಡೆದುಕೊಳ್ಳಲು ಸಮಿತಿಯನ್ನು ರಚಿಸಲಾಗಿರುತ್ತದೆ. ಅದರಂತೆ ಕ್ಲೈಮ್ಸ್ ಸೆಟ್ಟಲ್‌ಮೆಂಟ್ ಕಮಿಷನರ್ ಆಗಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಜಿಲ್ಲಾ ಪೊಲೀಸ್ ವರಿ?ಾಧಿಕಾರಿಗಳು/ಪೊಲೀಸ್ ಉಪಾಧೀಕ್ಷಕರು, ಕ್ಲೈಮ್ಸ್ ಸೆಟ್ಟಲ್ ಮೆಂಟ್ ಎನ್‌ಕ್ವೈರಿ ಆಫೀಸರ್ ಆಗಿ ಉಪವಿಭಾಗಾಧಿಕಾರಿಗಳು, ಜಿಲ್ಲಾ ಶಸ್ತ್ರ ಚಿಕಿತ್ಸಕರು ಹಾಗೂ ಅಧೀಕ್ಷಕರು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ರಸ್ತೆ ಸುರಕ್ಷತೆಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯ ಸದಸ್ಯರಾದ ನಗರದ ರೋಟರಿ ಸಿಲ್ಕ್, ಸಿಟಿಯ ಮಾಜಿ ಅಧ್ಯಕ್ಷರಾದ ಡಿ.ಎಸ್ ಗಿರೀಶ್, ಸಮಿತಿಯ ಸದಸ್ಯರಾಗಿದ್ದಾರೆ. ಸದಸ್ಯ ಕಾರ್ಯದರ್ಶಿಗಳಾಗಿ ಮೈಸೂರಿನ ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂಪನಿ ಲಿಮಿಟೆಡ್ ಅಧಿಕಾರಿ ಶಿವಪ್ರಸಾದ್ ನೇಮಕವಾಗಿದ್ದಾರೆ.

ಹಿಟ್ ಮತ್ತು ರನ್ ಅಪಘಾತದಲ್ಲಿ ಮರಣ ಹೊಂದಿದ ವಾರಸುದಾರರು ಹಾಗೂ ಗಾಯಗೊಂಡವರು ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಚೇರಿ ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ: 08226-223160, ಮೊ.ಸಂ: 9740942901 ಹಾಗೂ ಪೊಲೀಸ್ ಇಲಾಖೆಯ ಕಂಟ್ರೋಲ್ ರೂಂ ದೂ. ಸಂ: 08226-222383, ಮೊ.ಸಂ.: 9480804600 ಅನ್ನು ಸಂಪರ್ಕಿಸುವಂತೆ ಜಿಲ್ಲಾಧಿಕಾರಿಗಳಾದ ಶಿಲ್ಪಾ ನಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಜೆ ಟಿಪ್ಸ್

## ವಿ ಯಲ್ಲಿ ನಿರಂತರವಾಗಿ ಕ್ರಿಕೆಟ್ ಆನಂದಿಸಿ; ಇದೀಗ 101 ರೂಪಾಯಿಗಳಿಂದ ಪ್ಯಾಕ್‌ಗಳು ಆರಂಭ

**ಮೈಸೂರು:** ಟಿ20 ಲೀಗ್ ನ ರೋಚಕ ಪಂದ್ಯಗಳನ್ನು ವೀಕ್ಷಿಸಲು ಸಿದ್ಧರಾಗಿರುವ ಅಭಿಮಾನಿಗಳಿಗೆ ನಿರಂತರವಾಗಿ ಸುಗಮವಾಗಿ ಪಂದ್ಯ ವೀಕ್ಷಿಸಲು ಸಾಕಷ್ಟು, ಬೇಕಾದಷ್ಟು ಮತ್ತು ವೇಗದ ಡೇಟಾದ ಅಗತ್ಯ ಇರುತ್ತದೆ. ಅದಕ್ಕೆ ವಿ ಸಂಸ್ಥೆ ಸೂಕ್ತ ವ್ಯವಸ್ಥೆ ಮಾಡಿದ್ದು, ಇದೀಗ ವಿ ಪ್ರಿಪೇಯ್ಡ್ ಗ್ರಾಹಕರು ಈ ಪಂದ್ಯಗಳ ಪ್ರತೀ ಕ್ಷಣವನ್ನು ಅತ್ಯುತ್ತಮ ಡೇಟಾ ವ್ಯವಸ್ಥೆಯೊಂದಿಗೆ ಮತ್ತು ಉಚಿತ ಜಿಯೋ ಹಾಟ್‌ಸ್ಟಾರ್ ಸಬ್ ಸ್ಕ್ರಿಪ್ಷನ್ ಮೂಲಕ ಆನಂದಿಸಬಹುದು. ನಿರಂತರ ಮತ್ತು ಸುಗಮ ಕ್ರಿಕೆಟ್ ಅನುಭವಕ್ಕಾಗಿ ವಿ ಗ್ರಾಹಕರಿಗೆ ಹಲವು ಪ್ಯಾಕ್ ಗಳನ್ನು ಪರಿಚಯಿಸಲಾಗಿದೆ. ಈ ಸೀಸನ್ ಗಾಗಿ ವಿಶೇಷವಾಗಿ ವಿ ಸಂಸ್ಥೆಯು 3 ಹೊಸ ರೀಚಾರ್ಜ್ ಪ್ಯಾಕ್ ಗಳನ್ನು ಪರಿಚಯಿಸಿದೆ, ಇವು ಗ್ರಾಹಕರಿಗೆ ಉತ್ತಮ ಮೌಲ್ಯ ಮತ್ತು ಪ್ರಯೋಜನಗಳನ್ನು ಒದಗಿಸುತ್ತವೆ: 101 ರೂಪಾಯಿ ರೀಚಾರ್ಜ್: 3 ತಿಂಗಳ ಜಿಯೋ ಹಾಟ್ ಸ್ಟಾರ್ (ಮೊಬೈಲ್) ಸಬ್‌ಸ್ಕ್ರಿಪ್ಷನ್ ಜೊತೆಗೆ 5ಜಿಬಿ ಡೇಟಾ ದೊರೆಯುತ್ತದೆ. 399 ರೂಪಾಯಿ ರೀಚಾರ್ಜ್: ಅನಿಯಮಿತ ಕರೆಗಳು + ಮಧ್ಯರಾತ್ರಿ 12ರಿಂದ ಮಧ್ಯಾಹ್ನ 12ರವರೆಗೆ ಅನಿಯಮಿತ ಡೇಟಾ + ಪ್ರತಿದಿನ ಹೆಚ್ಚುವರಿ 2 ಜಿಬಿ ಡೇಟಾ ಮತ್ತು ಜಿಯೋ ಹಾಟ್ ಸ್ಟಾರ್ ಮೊಬೈಲ್ ಸಬ್‌ಸ್ಕ್ರಿಪ್ಷನ್, 28 ದಿನಗಳ ವ್ಯಾಲಿಡಿಟಿ ದೊರೆಯುತ್ತದೆ. 239 ರೂಪಾಯಿ ರೀಚಾರ್ಜ್: ಅನಿಯಮಿತ ಕರೆಗಳು + 2 ಜಿಬಿ ಡೇಟಾ ಮತ್ತು ಜಿಯೋ ಹಾಟ್ ಸ್ಟಾರ್ ಮೊಬೈಲ್ ಸಬ್ ಸ್ಕ್ರಿಪ್ಷನ್, 28 ದಿನಗಳ ವ್ಯಾಲಿಡಿಟಿ ದೊರೆಯುತ್ತದೆ.

## ನಿಮಗಿದು ಗೊತ್ತೇ?

ಎಂ. ವೆಂಕಟೇಶ್ ಶೇಷಾದ್ರಿ

62.ಹೊಯ್ಸಳ ಸಾಮ್ರಾಜ್ಯದ ರಾಜಧಾನಿ ಯಾವುದಾಗಿತ್ತು?

## ಆಲೂಗಡ್ಡೆ ಪಲ್ಯ

### ಪಾಕ ಶಾಲೆ



### ಬೇಕಿರುವ ಸಾಮಗ್ರಿ

ಸಿಪ್ಪೆ ತೆಗೆದು ಬೇಯಿಸಿದ 3 ಬಿಳಿ ಆಲೂಗಡ್ಡೆ, ಉದ್ದುದ್ದ ಕೊಯ್ದ ಎರಡು ಈರುಳ್ಳಿ, ಉದ್ದುದ್ದ ಹೆಚ್ಚಿದ 5 ಹಸಿ ಮೆಣಸಿನಕಾಯಿ, 1 ಟೀ ಚಮಚದಷ್ಟು ಶುಂಠಿ, , 1 ಟೀ ಚಮಚ ಕೊತ್ತಂಬರಿ ಬೀಜದ ಪುಡಿ, 1 ಟೀ ಚಮಚ ಸಾಸಿವೆ, 1 ಟೀ ಚಮಚ ಬಿಳಿ ಉದ್ದಿನ ಬೇಳೆ, 1 ಟೀ ಚಮಚ ಚೆನ್ನ ದಾಲ್, 8 ಬಿಡಿಸಿದ ಗೋಡಂಬಿ, 2 ಟೇಬಲ್ ಚಮಚ ಎಣ್ಣೆ, ಅರ್ಧ ಟೀ ಚಮಚ ಅರಿಶಿನ, 1 ಟೇಬಲ್ ಚಮಚ ಲಿಂಬೆ ರಸ, 2 ಟೀ ಚಮಚ ಉಪ್ಪು.

### ಮಾಡುವ ವಿಧಾನ

ಆಲೂಗಡ್ಡೆಯನ್ನು 20 ನಿಮಿಷ ಚೆನ್ನಾಗಿ ಬೇಯಿಸಿ. ಎಣ್ಣೆಯನ್ನು ನಾನ್‌ಸ್ಟಿಕ್ ಬಾಣಲೆಯಲ್ಲಿಟ್ಟು ಮಧ್ಯಮ ಉರಿಯಲ್ಲಿ ಕಾಯಿಸಿ. ಗೋಡಂಬಿಯನ್ನು ಹಾಕಿ, ಕಂದು ಬಣ್ಣಕ್ಕೆ ಬರುವಂತೆ ಬಾಡಿಸಿ. ಸಾಸಿವೆ ಮತ್ತು ಬೇಳೆಗಳನ್ನು ಹಾಕಿ. ಸಾಸಿವೆ ಚಿಟಿಗುಟ್ಟಲಿ. ಐದೆಂಟು ಸೆಕೆಂಡುಗಳ ನಂತರ ಒಲೆಯ ಉರಿಯನ್ನು ಕಡಿಮೆ ಮಾಡಿ. ಹಸಿರು ಮೆಣಸಿನಕಾಯಿ, ಶುಂಠಿ ಮತ್ತು ಈರುಳ್ಳಿಯನ್ನು ಬಾಣಲೆಗೆ ಹಾಕಿ. ಸ್ವಲ್ಪ ಹೊತ್ತು ಹುರಿದಂತೆ ಮಾಡಿ. ಅರಿಶಿನ, ಧನಿಯಾ ಪುಡಿ ಹಾಗೂ ಉಪ್ಪನ್ನು ಹಾಕಿ. ಇದಕ್ಕೆ ಬೇಯಿಸಿದ ಆಲೂಗಡ್ಡೆಯನ್ನು ಸಿಪ್ಪೆ ಸುಲಿದು ಚೆನ್ನಾಗಿ ಕಿವುಚಿ ಅಥವಾ ಪುಡಿ ಮಾಡಿ ಸೇರಿಸಿ. ಚಿನ್ನಗಂದು ಬಣ್ಣ ಬರುವವರೆಗೆ ಕೈಯಾಡಿಸಿ. ಇದಕ್ಕೆ 12ರಿಂದ 15 ನಿಮಿಷ ಬೇಕಾಗಬಹುದು. ಆಮೇಲೆ ಲಿಂಬೆರಸ ಹಾಕಿ. ಮೂರ್ನಾಲ್ಕು ಚಮಚ ನೀರು ಹಾಕಿ. ನೀರು ಆವಿಯಾಗುವವರೆಗೆ ಹುರಿಯುವುದನ್ನು ಮುಂದುವರೆಸಿ.

## ತೂಕ ಇಳಿಕೆಗೆ ಕಲ್ಲಂಗಡಿ ಬೀಜ ಅದ್ಭುತ ಪರಿಹಾರ

### ಹೆಲ್ತ್ ಟಿಪ್ಸ್



ಕಲ್ಲಂಗಡಿ ಬೀಜಗಳು ತೂಕವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಬೇಸಿಗೆಯಲ್ಲಿ ಬಾಯಾರಿಕೆಯನ್ನು ನೀಗಿಸುವ ಕಲ್ಲಂಗಡಿ ತೂಕ ಇಳಿಸಿಕೊಳ್ಳಲು ಸಹಾಯ ಮಾಡುತ್ತದೆ ಎಂದು ತಜ್ಞರು ಹೇಳುತ್ತಾರೆ. ಇದು ಅದ್ಭುತವಾದ ಜಲಸಂಚಯನ ಹಣ್ಣು ಮಾತ್ರವಲ್ಲದೆ, ಇದರಲ್ಲಿರುವ ಸಣ್ಣ ಬೀಜಗಳು ತೂಕ ನಷ್ಟದಲ್ಲಿ ಬಹಳ ಶಕ್ತಿಶಾಲಿ ಎಂದು ಹೇಳಲಾಗುತ್ತದೆ. ಇದು ಸುಮಾರು 92% ನೀರನ್ನು ಹೊಂದಿದ್ದು, ಖನಿಜಗಳು ಮತ್ತು ಜೀವಸತ್ವಗಳಿಂದ ಸಮೃದ್ಧವಾಗಿದೆ. ಇದು ಬೇಸಿಗೆಯಲ್ಲಿ ಉತ್ತಮ ಚೈತನ್ಯ ನೀಡುವ ರಸಭರಿತ ಹಣ್ಣಾಗಿದೆ.

ಕಲ್ಲಂಗಡಿ ತಿಂದ ನಂತರ ಸಾಮಾನ್ಯವಾಗಿ ನಾವು ಅವುಗಳನ್ನು ಬಿಸಾಡುತ್ತೇವೆ. ಇವುಗಳಲ್ಲಿ ಅಗತ್ಯವಾದ ಪೋಷಕಾಂಶಗಳು, ಆರೋಗ್ಯಕರ ಕೊಬ್ಬುಗಳು ಮತ್ತು ಖನಿಜಗಳು ಕೂಡ ಸಮೃದ್ಧವಾಗಿವೆ. ತೂಕ ಇಳಿಸುವಲ್ಲಿ ಅವು ಪರಿಣಾಮಕಾರಿ ಎಂದು ಆರೋಗ್ಯ ತಜ್ಞರು ಹೇಳುತ್ತಾರೆ. ಅಧಿಕ ಪ್ರೋಟೀನ್: ಕಲ್ಲಂಗಡಿ ಬೀಜಗಳು ಪ್ರೋಟೀನ್ನಲ್ಲಿ ಸಮೃದ್ಧವಾಗಿವೆ, ಇದು ಸ್ನಾಯುಗಳನ್ನು ಬಲಪಡಿಸಲು ಅವಶ್ಯಕವಾಗಿದೆ. ಇದರಲ್ಲಿರುವ ಪ್ರೋಟೀನ್ ನಿಮಗೆ ಹೆಚ್ಚು ಸಮಯದವರೆಗೆ ಹೊಟ್ಟೆ ತುಂಬಿರುವಂತೆ ಅನಿಸುತ್ತದೆ. ತಿಂಡಿ ತಿನ್ನುವ ಬಯಕೆಯನ್ನು ಕಡಿಮೆ ಮಾಡುತ್ತದೆ ಮತ್ತು ತೂಕ ನಿರ್ವಹಣೆಗೆ ಸಹಾಯ ಮಾಡುತ್ತದೆ. ಈ ಕೆಲವು ಬೀಜಗಳು ದೈನಂದಿನ ಪ್ರೋಟೀನ್ನ ಗಮನಾರ್ಹ ಪ್ರಮಾಣವನ್ನು ಒದಗಿಸುತ್ತವೆ.

ಆರೋಗ್ಯಕರ ಕೊಬ್ಬುಗಳಿಂದ ಸಮೃದ್ಧವಾಗಿದೆ: ಈ ಬೀಜಗಳು ಒಮೆಗಾ -6 ಸೇರಿದಂತೆ ಆರೋಗ್ಯಕರ ಕೊಬ್ಬನ್ನು ಹೊಂದಿರುತ್ತವೆ. ಇವು ದೇಹದ ಕೊಬ್ಬನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ. ಈ ಕೊಬ್ಬುಗಳು ತ್ವರಿತ ಶಕ್ತಿಯನ್ನು ಒದಗಿಸುತ್ತವೆ. ಸಕ್ರಿಯವಾಗಿರುವುದು ದಿನವಿಡೀ ಕ್ಯಾಲೊರಿಗಳನ್ನು ಸುಡಲು ಸಹಾಯ ಮಾಡುತ್ತದೆ.

ಹೆಚ್ಚಿನ ನಾರಿನ ಅಂಶ: ಕಲ್ಲಂಗಡಿ ಬೀಜಗಳು ನಾರಿನ ಮೂಲವಾಗಿದೆ. ಇದು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ. ಹೊಟ್ಟೆ ತುಂಬಿದ ಭಾವನೆಯನ್ನು ಉತ್ತೇಜಿಸುತ್ತದೆ. ಇದು ಅತಿಯಾಗಿ ತಿನ್ನುವುದನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಇದಲ್ಲದೆ, ಇದು ಒಟ್ಟಾರೆ ಕ್ಯಾಲೊರಿ ಸೇವನೆಯನ್ನು ಕಡಿಮೆ ಮಾಡುತ್ತದೆ. ತೂಕ ಇಳಿಸುವ ಪ್ರಯತ್ನಗಳನ್ನು ಸಹ ಬೆಂಬಲಿಸುತ್ತದೆ.

ಚಯಾಪಚಯ ಕ್ರಿಯೆಯನ್ನು ಹೆಚ್ಚಿಸುತ್ತದೆ: ಕಲ್ಲಂಗಡಿ ಬೀಜಗಳಲ್ಲಿ ಕಂಡುಬರುವ ಮೆಗ್ನೀಸಿಯಮ್ ಚಯಾಪಚಯ ಕ್ರಿಯೆಗೆ ಸಂಬಂಧಿಸಿದ ಶಕ್ತಿ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಪರಿಣಾಮಕಾರಿ ತೂಕ ನಷ್ಟಕ್ಕೆ ಆರೋಗ್ಯಕರ ಚಯಾಪಚಯ ಕ್ರಿಯೆ ಅತ್ಯಗತ್ಯ. ಏಕೆಂದರೆ ಇದು ದೇಹದಲ್ಲಿನ ಕ್ಯಾಲೊರಿಗಳನ್ನು ಸುಡಲು ಸಹಾಯ ಮಾಡುತ್ತದೆ. ಇದು ದೇಹದಲ್ಲಿನ ಹೆಚ್ಚುವರಿ ಕಿಲೋಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ಕಡಿಮೆ ಕ್ಯಾಲೋರಿಗಳು: ಇತರ ಹಲವು ತಿಂಡಿ ಆಯ್ಕೆಗಳಿಗೆ ಹೋಲಿಸಿದರೆ ಕಲ್ಲಂಗಡಿ ಬೀಜಗಳಲ್ಲಿ ಕ್ಯಾಲೋರಿಗಳು ತುಂಬಾ ಕಡಿಮೆ. ತೂಕ ಇಳಿಸಿಕೊಳ್ಳಲು ಬಯಸುವವರಿಗೆ ಇದು ಪೌಷ್ಟಿಕ ಮತ್ತು ತೃಪ್ತಿಕರ ಆಯ್ಕೆಯಾಗಿದೆ.

## ಬೆಲ್ಲದ ಫೇಸ್ ಪ್ಯಾಕ್

### ಬ್ಯೂಟಿ ಟಿಪ್ಸ್



ಬೆಲ್ಲದಿಂದ ನೀವು ಫೇಸ್ ಪ್ಯಾಕ್ ತಯಾರು ಮಾಡಿ ಮುಖಕ್ಕೆ ಹಚ್ಚಿಕೊಳ್ಳುವುದರಿಂದ ನಿಮ್ಮ ಮುಖದ ಕಾಂತಿ ಹೆಚ್ಚಾಗುತ್ತದೆ. ಏಕೆಂದರೆ ಬೆಲ್ಲದಲ್ಲಿರುವ ಗ್ಲುಟೆನ್ ಅಂಶ ಆಂಟಿ - ಆಕ್ಸಿಡೆಂಟ್ ಅಂಶ ಮತ್ತು ಪೌಷ್ಟಿಕ ಸತ್ವಗಳನ್ನು ಒಳಗೊಂಡ ಹಲವಾರು ಅಂಶಗಳು ನಿಮ್ಮ ದೇಹಕ್ಕೆ ಸೇರುವುದರ ಜೊತೆಗೆ ನಿಮ್ಮ ಚರ್ಮದ ಭಾಗದಲ್ಲಿ ಕಂಡು ಬರುವ ಹಲವು ಬಗೆಯ ಮೊಡವೆಗಳು, ಗುಳ್ಳೆಗಳು, ಗೆರೆಗಳು ಮತ್ತು ಸುಕ್ಕುಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನಿವಾರಣೆ ಮಾಡಿ ಹೊಳಪಿನ ಚರ್ಮವನ್ನು ನಿಮ್ಮದಾಗಿಸುತ್ತದೆ.

ಬೆಲ್ಲದಲ್ಲಿ ವಿಟಮಿನ್ ' ಸಿ ' ಅಂಶ ಹೆಚ್ಚಾಗಿರುವ ಕಾರಣ ಕಬ್ಬಿಣದ ಅಂಶದ ಜೊತೆ ಸೇರಿ ನಿಮ್ಮ ಕೂದಲಿನ ಆರೋಗ್ಯವನ್ನು ಕಾಪಾಡುತ್ತದೆ. ಮುಖದ ಸೌಂದರ್ಯವನ್ನು ಕಾಪಾಡಲು ನೀವು ಮನೆಯಲ್ಲಿ ಬಳಸುವ ಇತರ ಫೇಸ್ ಪ್ಯಾಕ್ ಗಳಿಗೆ ಹೋಲಿಸಿದರೆ ಬೆಲ್ಲದ ಫೇಸ್ ಪ್ಯಾಕ್ ತುಂಬಾ ಸರಳ ಮತ್ತು ಅಷ್ಟೇ ಅನುಕೂಲಕರ. ಮುಖದ ಮೇಲೆ ಬಹಳ ದಿನಗಳಿಂದ ಉಳಿದಿರುವ ಮೊಡವೆಗಳು ಮತ್ತು ಅದರ ಕಲೆಗಳನ್ನು ನಿವಾರಣೆ ಮಾಡುವಲ್ಲಿ ಬೆಲ್ಲದ ಫೇಸ್ ಪ್ಯಾಕ್ ತುಂಬಾ ಅನುಕೂಲಕರ. ಬೆಲ್ಲದ ಪುಡಿಯ ಜೊತೆಗೆ ಸ್ವಲ್ಪ ನಿಂಬೆ ರಸವನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ.

ನಿಂಬೆ ಹಣ್ಣಿನ ರಸ ನಿಮ್ಮ ಬಳಿ ಇಲ್ಲದಿದ್ದರೆ ಸ್ವಲ್ಪ ನೀರನ್ನು ಸೇರಿಸಿ ಮಿಶ್ರಣ ಮಾಡಿ. ಮೊಡವೆಗಳು ಹೆಚ್ಚಾಗಿ ಕಂಡು ಬಂದ ನಿಮ್ಮ ಮುಖದಲ್ಲಿನ ಚರ್ಮದ ಭಾಗಕ್ಕೆ ಈ ಮಿಶ್ರಣವನ್ನು ಲೇಪನ ಮಾಡಿ ಸುಮಾರು 15 ರಿಂದ 20 ನಿಮಿಷಗಳ ಕಾಲ ಹಾಗೆ ಬಿಟ್ಟು ನಂತರ ಉಗುರು ಬೆಚ್ಚಗಿನ ನೀರಿನಲ್ಲಿ ಮುಖ ತೊಳೆದುಕೊಳ್ಳಿ. ಒಳ್ಳೆಯ ಫಲಿತಾಂಶ ನಿಮ್ಮದಾಗಬೇಕಾದರೆ ಪ್ರತಿದಿನ ಇದೇ ರೀತಿ ಮಾಡಿ.



## ಆಲಿಯಾ ನನ್ನ ಮೊದಲ ಹೆಂಡತಿ ಅಲ್ಲ: ರಣಬೀರ್ ಕಪೂರ್!

ರಣಬೀರ್ ಕಪೂರ್ ತಮ್ಮ ನಟನೆಯಿಂದ ಅಭಿಮಾನಿಗಳನ್ನು ಮೆಚ್ಚಿಸಿರುವ ನಟ.. ಅಲ್ಲದೇ ತಮ್ಮ ಅದ್ಭುತ ವ್ಯಕ್ತಿತ್ವದಿಂದ ಲಕ್ಷಾಂತರ ಹೃದಯಗಳನ್ನು ಆಳುತ್ತಾರೆ. ಕಪೂರ್ ಕುಟುಂಬದ ರಣಬೀರ್ ತಮ್ಮ ವೈವಾಹಿಕ ಜೀವನದಲ್ಲಿ ತುಂಬಾ ಸಂತೋಷವಾಗಿದ್ದಾರೆ. ಆಲಿಯಾ ಮತ್ತು ರಣಬೀರ್ ಆಗಾಗ್ಗೆ ತಮ್ಮ ಮಗಳು ರಾಹಾ ಜೊತೆ ಕಾಣಿಸಿಕೊಳ್ಳುತ್ತಾರೆ. ಆದರೆ ಒಂದು ಸಮಯದಲ್ಲಿ ರಣಬೀರ್ ತನ್ನ ಬಗ್ಗೆಯೇ ಶಾಕಿಂಗ್ ಸಂಗತಿಯನ್ನು ಹೇಳಿದ್ದರು.

ರಣಬೀರ್ ಕಪೂರ್‌ಗಾಗಿ ಎಷ್ಟು ಹುಡುಗಿಯರು ಹಂಬಲಿಸುತ್ತಿದ್ದಾರೋ ಏನೋ? ಯಾಕಂದ್ರೆ, ನಟನ ಮೋಡಿಯೇ ಅಂಥದ್ದು. ನಟ ತನ್ನ ಜೀವನದಲ್ಲಿ ಅನೇಕರೊಂದಿಗೆ ಡೇಟಿಂಗ್ ಮಾಡಿದ್ದಾನೆ. ದೀಪಿಕಾ ಪಡುಕೋಣೆ ಮತ್ತು ಕತ್ರಿನಾ ಕೈಫ್ ಅವರಂತಹ ದೊಡ್ಡ ಹೆಸರುಗಳೂ ಇದರಲ್ಲಿ ಸೇರಿಕೊಂಡಿವೆ. ಆಲಿಯಾಗೂ ಮೊದಲು, ರಣಬೀರ್ ಕಪೂರ್ ಈ ಹಿಂದೆ ಒಮ್ಮೆ ಮದುವೆಯಾಗಿದ್ದರು ಎಂದು ನಟ ಸ್ವತಃ ಒಪ್ಪಿಕೊಂಡಿದ್ದಾರೆ.. ವಾಸ್ತವವಾಗಿ, ಸಂದರ್ಶನವೊಂದರಲ್ಲಿ, ರಣಬೀರ್ ಕಪೂರ್ ಸ್ವತಃ ಆಸಕ್ತಿದಾಯಕ ಗೂಗಲ್ ಪ್ರಶ್ನೆಗಳಿಗೆ ಉತ್ತರಿಸಿದ್ದು... ಈ ಪ್ರಶ್ನೆಗಳಲ್ಲಿ ಒಂದು ಅವರ ಮಾಜಿ ಪತ್ನಿಗೆ ಸಂಬಂಧಿಸಿದೆ. ಈ ಬಗ್ಗೆ ನಟ ವಿವರಣೆಯನ್ನು ನೀಡಿದ್ದರು. ಇದು ಹುಚ್ಚು ಅಭಿಮಾನಕ್ಕೆ ಸಂಬಂಧಿಸಿದ ಘಟನೆ.. ನನ್ನ ಮೇಲಿನ ಪ್ರೀತಿ ಅಭಿಮಾನದಿಂದ ಹುಡುಗಿಯೊಬ್ಬಳು ನನ್ನನ್ನು ಮದುವೆಯಾದಂತೆ ಭಾವಿಸಿ.. ನನ್ನ ಮನೆಯ ಗೇಟಿನೊಂದಿಗೆ ಮದುವೆಯಾಗಿದ್ದಾಳೆ.. ಆ ದಿನ ಗೇಟಿಗೆ ಹೂವಿನ ಮಾಲೆ ಹಾಕಿ ಕುಂಕುಮ ಹಚ್ಚಲಾಗಿತ್ತು.. ಅದನ್ನು ನೋಡಿ ನಾನೇ ಶಾಕ್ ಆಗಿದ್ದೆ.. ಆದರೆ ಆಕೆ ಯಾರು.. ಎಲ್ಲಿದ್ದಾಳೆ ಎಂದು ನನಗೆ ಇಲ್ಲಿಯವರೆಗೂ ತಿಳಿದಿಲ್ಲ.. ಅವಳೇ ನನ್ನ ಮೊದಲ ಪತ್ನಿ.. ನಾನು ಇನ್ನೂ ನನ್ನ ಮಾಜಿ ಪತ್ನಿಯನ್ನು ಭೇಟಿ ಮಾಡಿಲ್ಲ ಆದರೆ ನಾನು ಖಂಡಿತವಾಗಿಯೂ ಅವಳನ್ನು ಭೇಟಿಯಾಗಲು ಬಯಸುತ್ತೇನೆ ಎಂದು ನಡೆದ ಘಟನೆಯ ಬಗ್ಗೆ ಹೇಳಿಕೊಂಡಿದ್ದರು.

ಈ ಸ್ಟೋರಿ ತಿಳಿದ ತಕ್ಷಣ ಅಭಿಮಾನಿಗಳು ಸಹ ಶಾಕ್ ಆಗಿದ್ದಾರೆ... ಇನ್ನು ರಣಬೀರ್ ಕಪೂರ್ ಅವರ ಹೆವಿ ಫ್ಯಾನ್ ಫಾಲೋಯಿಂಗ್‌ನಲ್ಲಿ ಹುಡುಗಿಯರೇ ಹೆಚ್ಚಿದ್ದಾರೆ.. ಆದರೆ ಅಭಿಮಾನಿಯೊಬ್ಬರು ಈ ರೀತಿ ನಟನ ಮನೆಗೆ ಹೋಗುತ್ತಾರೆ ಮತ್ತು ಅಂತಹ ಕೃತ್ಯವನ್ನು ಮಾಡುತ್ತಾರೆ ಎಂದು ಯಾರೂ ಊಹಿಸಿರಲಿಲ್ಲ.

## ಕ್ಯೂಎಸ್ ಸಬ್ಜೆಕ್ಟ್ ರ‍್ಯಾಂಕಿಂಗ್ಸ್ 2025 ರಲ್ಲಿ ಐತಿಹಾಸಿಕ ಮೈಲಿಗಲ್ಲು ಸಾಧಿಸಿದ ಒ.ಪಿ. ಜಿಂದಾಲ್ ಗ್ಲೋಬಲ್ ಯುನಿವರ್ಸಿಟಿ

ಕ್ಯೂಎಸ್ ಸಬ್ಜೆಕ್ಟ್ ರ‍್ಯಾಂಕಿಂಗ್ ವಿಶ್ವವಿದ್ಯಾಲಯದ ಕಾರ್ಯಕ್ಷಮತೆಯನ್ನು ಕಟ್ಟುನಿಟ್ಟಾದ ಮಾನದಂಡಗಳನ್ನು ಬಳಸಿ ಮೌಲ್ಯಮಾಪನ ಮಾಡುತ್ತದೆ. ಇದರಲ್ಲಿ ಶೈಕ್ಷಣಿಕ ಸಂಸ್ಥೆಯ ಗೌರವ, ಉದ್ಯೋಗದಾತರ ಗೌರವ, ಸಂಶೋಧನೆಯಿಂದ ಆದ ಪರಿಣಾಮ (ಉಲ್ಲೇಖಗಳು ಮತ್ತು ಎಚ್-ಇಂಡೆಕ್ಸ್) ಮತ್ತು ಅಂತಾರಾಷ್ಟ್ರೀಯ ಸಹಭಾಗಿತ್ವಗಳನ್ನು ಇದು ಮೌಲ್ಯಮಾಪನ ಮಾಡುತ್ತದೆ. ಕ್ಯೂಎಸ್ 5200 ವಿಶ್ವವಿದ್ಯಾಲಯಗಳನ್ನು ವಿಶ್ಲೇಷಣೆ ಮಾಡಿದೆ. ಈ ಪೈಕಿ, 55 ಸಂಕೀರ್ಣ ವಿಷಯಗಳು ಮತ್ತು 5 ವಿಶಾಲ ವಲಯಗಳಲ್ಲಿ 1747 ವಿಶ್ವವಿದ್ಯಾಲಯಗಳಿಗೆ ಶ್ರೇಯಾಂಕಗಳನ್ನು ನೀಡಿದೆ.

ಈ ವಿಶಿಷ್ಟ ಸಾಧನೆಯ ಬಗ್ಗೆ ಮಾತನಾಡಿದ ಜೆಜಿಯು ಕುಲಪತಿ ನವೀನ್ ಜಿಂದಾಲ್ ಸಂಸ್ಥೆಯ ಬಗ್ಗೆ ಹೆಮ್ಮೆಯನ್ನು ವ್ಯಕ್ತಪಡಿಸಿದರು. ವಿವಿಧ ವಿಭಾಗಗಳಲ್ಲಿ ಕ್ಯೂಎಸ್ ವರ್ಲ್ಡ್ ಯೂನಿವರ್ಸಿಟಿ ರ‍್ಯಾಂಕಿಂಗ್ಸ್ (ವಿಷಯದ ಪ್ರಕಾರ) 2025 ರಲ್ಲಿ ಜೆಜಿಯು ಮನ್ನಣೆ ಪಡೆದಿರುವುದು ನಮ್ಮ ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಯ ಬದ್ಧತೆ ಮತ್ತು ಪರಿಣಿತಿಗೆ ಸಾಕ್ಷಿಯಾಗಿದೆ. ಶೈಕ್ಷಣಿಕ ಬದ್ಧತೆ, ಸಂಶೋಧನೆ ಮತ್ತು ಜಾಗತಿಕ ತೊಡಗಿಸಿಕೊಳ್ಳುವಿಕೆಯಲ್ಲಿ ಬದ್ಧತೆಗಾಗಿ ನಮ್ಮ ವಿಶ್ವವಿದ್ಯಾಲಯ ಮನ್ನಿಸಲ್ಪಡುತ್ತಿರುವುದ ನಮಗೆ ಅತ್ಯಂತ ಖುಷಿಯ ಸಂಗತಿಯಾಗಿದೆ. ಭಾರತದ ನಂ.1 ಕಾನೂನು ಶಿಕ್ಷಣ ಸಂಸ್ಥೆಯಾಗಿ ಜೆಜಿಎಲ್‌ಎಸ್ ಸತತ ಆರನೇ ವರ್ಷವೂ ಯಶಸ್ವಿಯಾಗಿದ್ದು, ವಿಶ್ವದರ್ಜೆಯ ಕಾನೂನು ಶಿಕ್ಷಣವನ್ನು ನೀಡುವಲ್ಲಿ ನಮ್ಮ ಬದ್ಧತೆಗೆ ಸಾಕ್ಷಿಯಾಗಿದೆ. ಅಷ್ಟೇ ಅಲ್ಲ, ಕಲೆ ಮತ್ತು ಮಾನವಶಾಸ್ತ್ರ ಹಾಗೂ ರಾಜಕೀಯ ಮತ್ತು ಅಂತಾರಾಷ್ಟ್ರೀಯ ಅಧ್ಯಯನದಲ್ಲಿ ಭಾರತದಲ್ಲಿ ನಂ.1 ಖಾಸಗಿ ವಿಶ್ವವಿದ್ಯಾಲಯ ಎಂಬ ರ‍್ಯಾಕಿಂಗ್ ಅನ್ನು ಪಡೆದಿರುವುದು ಕೂಡಾ ದೇಶದ ಬೌದ್ಧಿಕವಲಯದಲ್ಲಿ ನಮ್ಮ ಪ್ರಭಾವ ವಿಸ್ತರಿಸುವುದರ ಸಂಕೇತವಾಗಿದೆ.

ಜೆಜಿಯು ಉಪಕುಲಪತಿ ಪ್ರೊಫೆಸರ್ (ಡಾ.) ಸಿ ರಾಜ್ ಕುಮಾರ್ ಮಾತನಾಡಿ ಕ್ಯೂಎಸ್ ವರ್ಲ್ಡ್ ಯೂನಿವರ್ಸಿಟಿ ರ‍್ಯಾಂಕಿಂಗ್ಸ್ (ವಿಷಯದ ಪ್ರಕಾರ) 2025 ರಲ್ಲಿ ನಿರಂತರ ಯಶಸ್ಸನ್ನು ಸಾಧಿಸುತ್ತಿರುವುದು ಶೈಕ್ಷಣಿಕ ಅನ್ವೇಷಣೆ, ಜಾಗತಿಕ ಪಾಲುದಾರಿಕೆ ಮತ್ತು ಪರಿಣಾಮ ಉಂಟುಮಾಡುವ ಸಂಶೋಧನೆಯಲ್ಲಿ ನಾವು ಹೆಚ್ಚು ಗಮನಹರಿಸಿದ್ದೇವೆ ಎಂಬುದನ್ನು ಪ್ರತಿಫಲಿಸುತ್ತದೆ. ಕಾನೂನು ವಿಭಾಗದಲ್ಲಿ ನಮ್ಮ ನಿರಂತರ ಯಶಸ್ಸು ಮತ್ತು ರಾಜಕೀಯ, ಅರ್ಥಶಾಸ್ತ್ರ ಮತ್ತು ಬ್ಯುಸಿನೆಸ್ ವಿಭಾಗದಲ್ಲಿನ ಜಾಗತಿಕ ರ‍್ಯಾಂಕಿಂಗ್ಸ್‌ನಲ್ಲಿ ನಾವು ಹೊಸದಾಗಿ ಪ್ರವೇಶ ಪಡೆದಿದದ್ದು ಕಾನೂನು ಮತ್ತು ಕಾನೂನಾತ್ಮಕ ಅಧ್ಯಯನಗಳಾಚೆಗೂ ನಾವು ಪ್ರಭಾವ ಬೀರುತ್ತಿದ್ದೇವೆ ಎಂಬುದನ್ನು ಸೂಚಿಸುತ್ತದೆ.




ಉನ್ನತ ಶಿಕ್ಷಣದಲ್ಲಿ ಜಾಗತಿಕ ನಾಯಕನಾಗಿ ಜೆಜಿಯು ಬೆಳೆಯುತ್ತಿರುವುದಕ್ಕೆ ಈ ಮನ್ನಣೆಯು ಸ್ಪಷ್ಟ ಸೂಚನೆಯಾಗಿದೆ. ನಾವು ವಿಶ್ವದರ್ಜೆಯ ವಿಶ್ವವಿದ್ಯಾಲಯವಾಗಿ ಹೊರಹೊಮ್ಮುವ ಧ್ಯೇಯವನ್ನು ನಾವು ಪೂರೈಸುತ್ತಿದ್ದೇವೆ. ಇದು ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಧ್ಯೇಯೋದ್ದೇಶವೂ ಆಗಿದೆ. ನಮ್ಮ ಕುಲಪತಿ ಶ್ರೀ ನವೀನ್ ಜಿಂದಾಲ್ ಅವರ ಉದಾರ ದತ್ತಿ ಮನೋಭಾವಕ್ಕೆ ನಾನು ಆಭಾರಿಯಾಗಿದ್ದೇನೆ. ಅವರು ಬೋಧಕ ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಜೆಜಿಯು ಸಿಬ್ಬಂದಿಗೆ ಅಪಾರ ಬೆಂಬಲವನ್ನು ನೀಡಿದ್ದು, ಕೇವಲ 15 ವರ್ಷಗಳಲ್ಲಿ ಶಿಕ್ಷಣ ಸಂಸ್ಥೆ ಈ ಮಹತ್ವದ ಸಾಧನೆ ಮಾಡಿದೆ.

ಸತತ ಆರು ವರ್ಷಗಳವರೆಗೆ ಜಿಂದಾಲ್ ಗ್ಲೋಬಲ್ ಲಾ ಸ್ಕೂಲ್ (ಜೆಜಿಎಲ್‌ಎಸ್) ಭಾರತದಲ್ಲಿ 1 ಮತ್ತು ವಿಶ್ವದಲ್ಲಿ ಅಗ್ರ 100 ರಲ್ಲಿ ಒಂದಾಗಿರುವ (ವಿಶ್ವದಲ್ಲಿ 78ನೇ) ಕಾನೂನು ಶಿಕ್ಷಣ ಸಂಸ್ಥೆ ಎಂದು ಶ್ರೇಣಿ ಪಡೆದಿದೆ ಮತ್ತು ಜಿಂದಾಲ್ ಗ್ಲೋಬಲ್ ಲಾ ಸ್ಕೂಲ್ (ಜೆಜಿಎಲ್ ಎಸ್) ಭಾರತದಲ್ಲಿ ಪ್ರಮುಖ ಕಾನೂನು ಶಿಕ್ಷಣ ಸಂಸ್ಥೆಯಾಗಿದ್ದು, ಕಾನೂನು ಅಧ್ಯಯನಕ್ಕೆ ಜಾಗತಿಕವಾಗಿ ಪ್ರಮುಖ ಕೇಂದ್ರವಾಗಿದೆ. ಕಾನೂನು ವಿಭಾಗದಲ್ಲಿ ಒಂಬತ್ತು ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಜೆಜಿಎಲ್‌ಎಸ್ ಒದಗಿಸುತ್ತದೆ. ಅತ್ಯಾಧುನಿಕ ಪಠ್ಯಕ್ರಮ ಮತ್ತು ಜಾಗತಿಕ ಪಾಲುದಾರಿಕೆಯ ಮೂಲಕ ಈ ಶಿಕ್ಷಣವನ್ನು ಒದಗಿಸಲಾಗುತ್ತಿದೆ. ಸಮಾಜ ವಿಜ್ಞಾನ ಮತ್ತು ನಿರ್ವಹಣೆ ವಿಭಾಗದಲ್ಲಿ ಮೊಟ್ಟ ಮೊದಲ ಬಾರಿಗೆ ರ‍್ಯಾಂಕಿಂಗ್ ಅನ್ನು ಜೆಜಿಯು ಪಡೆದಿದ್ದು, ಭಾರತದಲ್ಲಿ 3ನೇ ಖಾಸಗಿ ವಿಶ್ವವಿದ್ಯಾಲಯ ಮತ್ತು ವಿಶ್ವದಲ್ಲಿ 274ನೇ ವಿಶ್ವವಿದ್ಯಾಲಯ ಎಂದು ಮನ್ನಣೆ ಪಡೆದಿದೆ. ಈ ರ‍್ಯಾಂಕಿಂಗ್‌ನಿಂದಾಗಿ ಸಾಮಾಜಿಕ ವ್ಯವಸ್ಥೆಗಳು, ಮಾನವನ ವರ್ತನೆ ಮತ್ತು ಆಡಳಿತಾತ್ಮಕ ವಿಜ್ಞಾನವನ್ನು ಅಧ್ಯಯನ ನಡೆಸಲು ಜೆಜಿಯು ಅತ್ಯಾಧುನಿಕ ಕಾರ್ಯವಿಧಾನವನ್ನು ಬಳಸುತ್ತದೆ ಎಂಬುದು ಸಾಬೀತಾಗಿದೆ. ಕಲೆ ಮತ್ತು ಮಾನವಶಾಸ್ತ್ರದಲ್ಲಿ ಭಾರತದಲ್ಲಿ 1 ಖಾಸಗಿ ವಿಶ್ವವಿದ್ಯಾಲಯ ಮತ್ತು ವಿಶ್ವದಲ್ಲಿ 360ನೇ ವಿಶ್ವವಿದ್ಯಾಲಯ ಎಂಬ ಮನ್ನಣೆಯನ್ನು ಜೆಜಿಯು ಪಡೆದಿದೆ. ಸಾಹಿತ್ಯ, ತತ್ವಶಾಸ್ತ್ರ, ಇತಿಹಾಸ ಮತ್ತು ಕಲೆ ವಿಭಾಗದಲ್ಲಿ ಕ್ರಿಯಾಶೀಲತೆ, ಸಂಕೀರ್ಣ ಚಿಂತನೆ ಮತ್ತು ಬೌದ್ಧಿಕತೆಯನ್ನು ಪ್ರೋತ್ಸಾಹಿಸುವುದಕ್ಕೆ ಜೆಜಿಯು ಬದ್ಧವಾಗಿದೆ ಎಂಬುದನ್ನು ಈ ಮನ್ನಣೆಯು ಸೂಚಿಸುತ್ತದೆ.

ಸಮಾಜ ವಿಜ್ಞಾನ ಮತ್ತು ನಿರ್ವಹಣೆ ವಿಭಾಗದಲ್ಲಿ 16 ವಿಷಯಗಳಲ್ಲಿ ಕ್ಯೂಎಸ್ ರ‍್ಯಾಂಕಿಂಗ್ ಅನ್ನು ನೀಡುತ್ತದೆ. ಒದಗಿಸಲಾಗುವ ಪ್ರೋಗ್ರಾಮ್‌ಗಳು ಮತ್ತು ಸಂಶೋಧನೆಯ ಫಲಿತಾಂಶಗಳನ್ನು ಆಧರಿಸಿ, 4 ವಿಭಾಗಗಳಲ್ಲಿ ಭಾಗವಹಿಸಲು ಜೆಜಿಯು ಅರ್ಹತೆ ಪಡೆದಿದೆ.

ಮೊದಲ ಬಾರಿಗೆ ರಾಜಕೀಯ ಮತ್ತು ಅಂತಾರಾಷ್ಟ್ರೀಯ ಅಧ್ಯಯನ ವಿಭಾಗದಲ್ಲಿ ಭಾರತದಲ್ಲಿ 1 ಖಾಸಗಿ ವಿಶ್ವವಿದ್ಯಾಲಯ ಮತ್ತು ವಿಶ್ವದಲ್ಲಿ 201-250 ರ ವಿಭಾಗದಲ್ಲಿ ಒಂದು ಎಂಬ ಮನ್ನಣೆಯನ್ನು ಜೆಜಿಯು ಪಡೆದುಕೊಂಡಿದೆ. ಜಿಂದಾಲ್ ಸ್ಕೂಲ್ ಆಫ್ ಇಂಟರ್‌ನ್ಯಾಷನಲ್ ಅಫೇರ್ಸ್ (ಜೆಎಸ್‌ಐಎ), ಜಿಂದಾಲ್ ಸ್ಕೂಲ್ ಆಫ್ ಗವರ್ನ್‌ಮೆಂಟ್ ಆಂಡ್ ಪಬ್ಲಿಕ್ ಪಾಲಿಸಿ (ಜೆಎಸ್‌ಜಿಪಿ) ಮತ್ತು ಜಿಂದಾಲ್ ಸ್ಕೂಲ್ ಆಫ್ ಲಿಬರಲ್ ಆರ್ಟ್ಸ್ ಆಂಡ್ ಹ್ಯುಮಾನಿಟೀಸ್ (ಜೆಎಸ್‌ಎಲ್‌ಎಚ್) ಶೈಕ್ಷಣಿಕ ಸಂಸ್ಥೆಗಳು ಜಾಗತಿಕ ನೀತಿ ನಿರೂಪಣೆ, ಆಡಳಿ ಮತ್ತು ರಾಜತಾಂತ್ರಿಕ ವಿಭಾಗದಲ್ಲಿ ಮಹತ್ವದ ಸ್ಥಾನವನ್ನು ಹೊಂದಿವೆ ಎಂಬುದಕ್ಕೆ ಈ ರ‍್ಯಾಂಕಿಂಗ್‌ಗಳು ಸಾಕ್ಷಿಯಾಗಿದೆ. ಅರ್ಥಶಾಸ್ತ್ರ ಮತ್ತು ಎಕೊನೊಮೆಟ್ರಿಕ್ಸ್ ವಿಭಾಗದಲ್ಲಿ ಭಾರತದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ 2 ಮತ್ತು ವಿಶ್ವದಲ್ಲಿ 551-700 ರಲ್ಲಿ ಒಂದು ರ‍್ಯಾಂಕಿಂಗ್ ಅನ್ನು ಪಡೆದಿದೆ. ಜೆಎಸ್‌ಜಿಪಿ ಮತ್ತು ಜಿಂದಾಲ್ ಸ್ಕೂಲ್ ಆಫ್ ಬ್ಯಾಂಕಿಂಗ್ ಆಂಡ್ ಫೈನಾನ್ಸ್ (ಜೆಎಸ್‌ಬಿಎಫ್) ಶೈಕ್ಷಣಿಕ ಸಂಸ್ಥೆಗಳು ಆರ್ಥಿಕ ಸಂಶೋಧನೆ, ನೀತಿ ವಿಶ್ಲೇಷಣೆ ಮತ್ತು ಆರ್ಥಿಕ ಅಧ್ಯಯನದಲ್ಲಿ ಜೆಜಿಯು ಮುನ್ನಡೆಯನ್ನು ಸಾಧಿಸಲು ಸಹಾಯ ಮಾಡಿವೆ. ಬ್ಯುಸಿನೆಸ್ ಶಿಕ್ಷಣದಲ್ಲಿ ಜಿಂದಾಲ್ ಗ್ಲೋಬಲ್ ಬ್ಯುಸಿನೆಸ್ ಸ್ಕೂಲ್ (ಜೆಜಿಬಿಎಸ್) ಪರಿಣಿತಿಯನ್ನು ಮುಂದುವರಿಸಿದ್ದು, ಭಾರತದಲ್ಲಿನ ಖಾಸಗಿ ಬ್ಯುಸಿನೆಸ್ ಶಿಕ್ಷಣ ಸಂಸ್ಥೆಗಳ ಪೈಕಿ 6 ಹಾಗೂ ವಿಶ್ವದಲ್ಲಿ 451-500 ರಲ್ಲಿ ಒಂದು ಎಂಬ ಮನ್ನಣೆಯನ್ನು ಪಡೆದುಕೊಂಡಿದೆ. ಬ್ಯುಸಿನೆಸ್ ಶಿಕ್ಷಣದಲ್ಲಿ ಜಿಂದಾಲ್ ಗ್ಲೋಬಲ್ ಬ್ಯುಸಿನೆಸ್ ಸ್ಕೂಲ್ (ಜೆಜಿಬಿಎಸ್) ಪರಿಣಿತಿಯನ್ನು ಹೊಂದಿದ್ದು, ಉದ್ಯಮಕ್ಕೆ ಪೂರಕವಾಗಿ ಪಠ್ಯಕ್ರಮ ಮತ್ತು ಜಾಗತಿಕ ಪಾಲುದಾರಿಕೆಗಳ ಮೇಲೆ ಹೆಚ್ಚಿನ ಗಮನ ಹರಿಸಿದೆ.

## ರಾಶಿ ಭವಿಷ್ಯ



**ಜಯಶ್ರೀ.ಬಿ.ಆರ್**
ಖ್ಯಾತ ಜ್ಯೋತಿಷಿ
ದೂರವಾಣಿ–9964739507
www.jyotishyavaastu.com

**ಮೇಷ:** ಅನಾರೋಗ್ಯ ಸಮಸ್ಯೆಗಳು, ಮಕ್ಕಳಿಂದ ತೊಂದರೆ, ಹಿರಿಯ ವ್ಯಕ್ತಿಗಳ ಶಾಪಕ್ಕೆ ಗುರಿಯಾಗುವಿರಿ

**ವೃಷಭ:** ರೋಗ ಬಾಧೆ ಮುಕ್ತಿ, ಕುಟುಂಬದಲ್ಲಿ ವಾಗ್ವಾದಗಳು, ಪಾಲುದಾರಿಕೆಯಲ್ಲಿ ಆರ್ಥಿಕ ಸಂಕಷ್ಟಗಳು

**ಮಿಥುನ:** ಸಂಕಷ್ಟಕ್ಕೆ ಸಿಲುಕುವಿರಿ, ಶುಭಕಾರ್ಯಗಳು ಮುಂದೂಡಿಕೆ, ಅನಾರೋಗ್ಯ ಸಮಸ್ಯೆಗಳು

**ಕಟಕ:** ಮಾನಸಿಕ ಕಿರಿಕಿರಿ ಮತ್ತು ತೊಂದರೆ, ಆರ್ಥಿಕ ಸಂಕಷ್ಟಗಳಿಂದ ಮುಕ್ತಿ, ಸರ್ಕಾರಿ ಕೆಲಸದಲ್ಲಿ ಅನುಕೂಲ

**ಸಿಂಹ:** ಮಕ್ಕಳಿಂದ ಕಿರಿಕಿರಿ, ಅನಾರೋಗ್ಯ ಸಮಸ್ಯೆ, ಕೆಲಸಕಾರ್ಯಗಳಲ್ಲಿ ವಿಘ್ನ.

**ಕನ್ಯಾ:** ಉದ್ಯೋಗ ಲಾಭ, ಸಾಲಗಾರರಿಂದ ಮುಕ್ತಿ, ಶತ್ರು ದಮನ, ತಂತ್ರ ಬಾಧೆಗಳಿಗೆ ಗುರುಗಳಿಂದ ಮಾರ್ಗದರ್ಶನ

**ತುಲಾ:** ನಿದ್ರಾಭಂಗ, ಉದ್ಯೋಗ ಒತ್ತಡಗಳು, ಕಾಲು ನೋವು, ಮಂದತ್ವ, ವೈರಾಗ್ಯದ ಭಾವ ಅಧಿಕ

**ವೃಶ್ಚಿಕ:** ಆಕಸ್ಮಿಕ ಅವಘಡಗಳಿಂದ ಅಧಿಕ ಖರ್ಚು, ಸ್ಥಿರಾಸ್ತಿ ಭೂಮಿ ವಾಹನ ಖರೀದಿಯಲ್ಲಿ ಮೋಸ, ಕೆಲಸಕಾರ್ಯಗಳಲ್ಲಿ ಸೋಮಾರಿತನ

**ಧನಸ್ಸು:** ಕುಟುಂಬದಲ್ಲಿ ಕಿರಿಕಿರಿ ಮತ್ತು ಕಲಹ, ಪ್ರಯಾಣಕ್ಕೆ ಅಡೆತಡೆ, ಅವಮಾನಗಳಿಗೆ ಗುರಿಯಾಗುವ ಸಂದರ್ಭ

**ಮಕರ:** ವ್ಯವಹಾರ ಸ್ಥಳದಲ್ಲಿ ಕಿರಿಕಿರಿ, ಆರ್ಥಿಕ ಸಹಾಯ, ದಾಯಾದಿ ಕಲಹ, ಕೋರ್ಟ್ ಕೇಸುಗಳಲ್ಲಿ ಜಯ

**ಕುಂಭ:** ಪಿತ್ರಾರ್ಜಿತ ಆಸ್ತಿಯಿಂದ ಲಾಭ, ಉದ್ಯೋಗ ಬದಲಾವಣೆಗೆ ಅಡೆತಡೆ, ದಾಂಪತ್ಯದಲ್ಲಿ ವಿರಸ.

**ಮೀನ:** ಆಕಸ್ಮಿಕ ಅವಘಡಗಳಿಂದ ಮಾನಸಿಕ ಕಿರಿಕಿರಿ, ಕಬ್ಬಿಣದ ವಸ್ತುಗಳಿಂದ ಪೆಟ್ಟು, ಕೆಲಸ ಕಾರ್ಯಗಳಿಗೆ ಅಡೆತಡೆ, ಮಾನಸಿಕ ನೆಮ್ಮದಿ ಭಂಗ

## ವಿಶ್ವ ಹವಾಮಾನ ದಿನ




ಭೂಮಿಯ ವಾತಾವರಣದ ಪ್ರಾಮುಖ್ಯತೆ ಮತ್ತು ಪರಸ್ಪರ ಸಂಪರ್ಕ ಹೊಂದಿದ ಜನರ ನಡವಳಿಕೆಯನ್ನು ಈ ದಿನವು ಎತ್ತಿ ತೋರಿಸುತ್ತದೆ. ವಿಶ್ವಸಂಸ್ಥೆಯಿಂದ ರಚಿಸಲ್ಪಟ್ಟ ವಿಶೇಷ ಸಂಸ್ಥೆಯಾದ ವಿಶ್ವ ಹವಾಮಾನ ಸಂಸ್ಥೆಯ ಸ್ಥಾಪನೆಯ ಸ್ಮರಣಾರ್ಥವಾಗಿ ಪ್ರತಿ ವರ್ಷ ಮಾರ್ಚ್ 23 ರಂದು ಇದನ್ನು ಆಚರಿಸಲಾಗುತ್ತದೆ.

ವಿಶ್ವ ಹವಾಮಾನ ದಿನ 2022 ರ ಥೀಮ್ ಮುಂಚಿನ ಎಚ್ಚರಿಕೆ ಮತ್ತು ಆರಂಭಿಕ ಕ್ರಮ. ಇದು ವಿಪತ್ತು ಅಪಾಯ ಕಡಿತಕ್ಕಾಗಿ ಜಲ ಹವಾಮಾನ ಮತ್ತು ಹವಾಮಾನ ಮಾಹಿತಿಯ ಮಹತ್ವವನ್ನು ಎತ್ತಿ ತೋರಿಸುತ್ತದೆ. ವಿಶ್ವ ಹವಾಮಾನ ದಿನ 2021 ರ ಥೀಮ್ ಸಾಗರ, ನಮ್ಮ ಹವಾಮಾನ ಮತ್ತು ಹವಾಮಾನವಾಗಿತ್ತು. ಇದು ಭೂಮಿಯ ವ್ಯವಸ್ಥೆಯೊಳಗೆ ಸಾಗರ, ಹವಾಮಾನ ಮತ್ತು ಹವಾಮಾನವನ್ನು ಸಂಪರ್ಕಿಸುವ ಮೇಲೆ ಕೇಂದ್ರೀಕರಿಸುತ್ತದೆ. ಇದು ಸುಸ್ಥಿರ ಅಭಿವೃದ್ಧಿಗಾಗಿ ವಿಶ್ವಸಂಸ್ಥೆಯ ಸಾಗರ ವಿಜ್ಞಾನದ ದಶಕ (2021-2030) ಆರಂಭದ ವರ್ಷವನ್ನು ಗುರುತಿಸುತ್ತದೆ. ನವೀನ ಮತ್ತು ಪರಿವರ್ತಕ ವಿಚಾರಗಳ ಮೂಲಕ, ಸುಸ್ಥಿರ ಅಭಿವೃದ್ಧಿಯನ್ನು ಬೆಂಬಲಿಸಲು ಮಾಹಿತಿಯ ಆಧಾರವಾಗಿ ಕಾರ್ಯನಿರ್ವಹಿಸುವ ಸಾಗರ ವಿಜ್ಞಾನವನ್ನು ಸಂಗ್ರಹಿಸುವ ಪ್ರಯತ್ನಗಳನ್ನು ಈ ದಶಕವು ಪ್ರೇರೇಪಿಸುತ್ತದೆ. ಈ ಸಂದರ್ಭದಲ್ಲಿ, ಹಲವಾರು ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಮಾರ್ಚ್ 23, 1950 ರಂದು, ವಿಶ್ವ ಹವಾಮಾನ ಸಂಸ್ಥೆಯ ಸಮಾವೇಶವು ಜಾರಿಗೆ ಬಂದಿತು ಮತ್ತು 1951 ರಲ್ಲಿ ಹವಾಮಾನಶಾಸ್ತ್ರ, ಕಾರ್ಯಾಚರಣೆಯ ಜಲವಿಜ್ಞಾನ ಮತ್ತು ಸಂಬಂಧಿತ ಭೂ ಭೌತ ವಿಜ್ಞಾನಗಳಿಗೆ ವಿಶ್ವಸಂಸ್ಥೆಯ ವಿಶೇಷ ಸಂಸ್ಥೆಯಾಯಿತು. ವಿಶ್ವ ಹವಾಮಾನ ಸಂಸ್ಥೆಯು ಪ್ರತಿ ವರ್ಷ ಆಯ್ಕೆ ಮಾಡಲಾದ ವಿಭಿನ್ನ ವಿಷಯಗಳೊಂದಿಗೆ ವಿಶ್ವ ಹವಾಮಾನ ದಿನವನ್ನು ಆಚರಿಸುತ್ತಿದೆ.ಜನರ ಸುರಕ್ಷತೆ ಮತ್ತು ಕಲ್ಯಾಣಕ್ಕೆ ಕೊಡುಗೆ ನೀಡುವಲ್ಲಿ ವಿಶ್ವ ಹವಾಮಾನ ಸಂಸ್ಥೆ ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದ, ಆಹಾರ ಭದ್ರತೆ, ಜಲ ಸಂಪನ್ಮೂಲಗಳು ಮತ್ತು ಸಾರಿಗೆಯನ್ನು ಒದಗಿಸುವಲ್ಲಿ ಅದರ ಕೆಲಸ ಮುಖ್ಯವಾಗಿದೆ.

ಸಂಜೆ ಮುಗಿಲು

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಬರುತ್ತಿದೆ ಬಂಡೆ ಸಾಹೇಬ್, ನಿಜ ಪೊಲೀಸ್‌ನ ದುರಂತ ಕಥೆ



ಹಲವಾರು ಸಾವಿರಾರು ಪೊಲೀಸ್ ಸಿನಿಮಾಗಳು ಈ ವರೆಗೆ ಬಂದಿವೆ. ಈಗಲೂ ಸಹ ಬರುತ್ತಲೇ ಇವೆ. ಪೊಲೀಸ್ ಕತೆಗಳು ಬಹುತೇಕ ಹಿಟ್ ಆಗುತ್ತವೆ. ಹಾಗಾಗಿಯೇ ನಿರ್ದೇಶಕರಗೆ, ನಾಯಕರಿಗೂ ಸಹ ಪೊಲೀಸ್ ಸಿನಿಮಾಗಳ ಮೇಲೆ ಬಹಳ ಆಸಕ್ತಿ. ಇದೀಗ ಕನ್ನಡದಲ್ಲಿ ಅಪರೂಪದ ಪೊಲೀಸ್ ಸಿನಿಮಾ ಬರುತ್ತಿದೆ. ರೌಡಿಗಳೊಂದಿಗಿನ ಹೋರಾಟದಲ್ಲಿ ದುರಂತ ಅಂತ್ಯ ಕಂಡ ನಿಜ ಪೊಲೀಸ್ ಅಧಿಕಾರಿಯ ಕತೆಯನ್ನು ಸಿನಿಮಾ ಮಾಡಲಾಗುತ್ತಿದೆ. ಸಿನಿಮಾ ಆಗುತ್ತಿರುವುದು ಹುತಾತ್ಮ ಪೊಲೀಸ್ ಅಧಿಕಾರಿ ಮಲ್ಲಿಕಾರ್ಜುನ ಬಂಡೆ ಕತೆ. ಕಳೆದ ಕೆಲವುವರ್ಷಗಳ ಹಿಂದೆ ಗುಲ್ಬರ್ಗದಲ್ಲಿ ರೌಡಿ ಶೀಟರ್ ಮುನ್ನಾ ಅನ್ನು ಸೆರೆಹಿಡಿಯುವ ಸಂದರ್ಭದಲ್ಲಿ ಶೂಟೌಟ್‌ಗೆ ಬಲಿಯಾದ ಹುತಾತ್ಮ ಪೊಲೀಸ್ ಅಧಿಕಾರಿ ಮಲ್ಲಿಕಾರ್ಜುನ ಬಂಡೆ ಕುರಿತಾದ ಸಿನಿಮಾ ನಿರ್ಮಾಣ ಆಗುತ್ತಿದೆ. ಸಿನಿಮಾಕ್ಕೆ 'ಬಂಡೆ ಸಾಹೇಬ್' ಎಂದು ಹೆಸರಿಡಲಾಗಿದೆ.

ಮಲ್ಲಿಕಾರ್ಜುನ ಬಂಡೆ ಪಾತ್ರದಲ್ಲಿ ಸಂತೋಷ್ ರಾಮ್ ನಟಿಸಿದ್ದಾರೆ. ಸಂತೋಷ್ ಈ ಮುಂಚೆ 'ಕೃಷ್ಣ ರುಕ್ಮಿಣಿ' ಸೇರಿದಂತೆ ಹಲವು ಜನಪ್ರಿಯ ಧಾರಾವಾಹಿಗಳಲ್ಲಿ ನಟಿಸಿದ್ದಾರೆ. 'ಟೋನಿ' ಸೇರಿದಂತೆ ಅನೇಕ ಹಿಟ್ ಸಿನಿಮಾಗಳಲ್ಲಿ ಸಹ ನಟಿಸಿದ್ದಾರೆ. 'ಪಂಟ್ರು' ಸಿನಿಮಾದ ನಾಯಕ ಪಾತ್ರದಲ್ಲಿ ಸಹ ನಟಿಸಿದ್ದಾರೆ. ಇದು ನಾಯಕನಾಗಿ ಅವರಿಗೆ ಎರಡನೇ ಸಿನಿಮಾ. ಮಾಡೆಲಿಂಗ್ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಕಾವ್ಯ ಭಾರದ್ವಾಜ್ ಈ ಚಿತ್ರದ ನಾಯಕಿ. ವೀರಣ್ಣ ಕೊರಳ್ಳಿ, ಬಿರಾದಾರ್, ಸಿಂಬಾ ಮುಂತಾದವರು ಸಿನಿಮಾದ ಬೇರೆ ಬೇರೆ ಪಾತ್ರಗಳಲ್ಲಿ ನಟಿಸಿದ್ದಾರೆ.

ಗೋಪಣ್ಣ ದೊಡ್ಮನಿ, ಕಮಲ ದೊಡ್ಮನಿ ಹಾಗೂ ಮಾಲ ವಿ ಕೊರಳ್ಳಿ ಅವರು ಈ ಸಿನಿಮಾಕ್ಕೆ ಬಂಡವಾಳ ಹೂಡಿದ್ದಾರೆ. ಚಿನ್ಮಯ್ ರಾಮ್ ನಿರ್ದೇಶನ ಮಾಡುತ್ತಿದ್ದಾರೆ. 'ಕುರುಕ್ಷೇತ್ರ', 'ದಿ ವಿಲನ್' ಸೇರಿದಂತೆ ಇನ್ನೂ ಕೆಲವು ಸಿನಿಮಾಗಳಲ್ಲಿ ಇವರು ಸಹಾಯಕ ನಿರ್ದೇಶಕನಾಗಿ ಕಾರ್ಯ ನಿರ್ವಹಿಸಿದ್ದಾರೆ. ಸ್ವತಂತ್ರ್ಯ ನಿರ್ದೇಶಕರಾಗಿ ಇದು ಅವರಿಗೆ ಮೊದಲ ಸಿನಿಮಾ.

'ಬಂಡೆ ಸಾಹೇಬ್' ಸಿನಿಮಾದ ಚಿತ್ರೀಕರಣ ಬಹುತೇಕ ಮುಕ್ತಾಯವಾಗಿದೆ. ಸಿನಿಮಾದ ಚಿತ್ರೀಕರಣವನ್ನು ಗುಲ್ಬರ್ಗ, ಬೆಂಗಳೂರಿನಲ್ಲಿ ಮಾಡಲಾಗಿದೆ. ಎಂ.ಎಸ್ ತ್ಯಾಗರಾಜ್ ಈ ಸಿನಿಮಾಕ್ಕೆ ಸಂಗೀತ ನೀಡಿದ್ದಾರೆ. ನಾಲ್ಕು ಹಾಡುಗಳನ್ನು ಸಿನಿಮಾಕ್ಕಾಗಿ ಚಿತ್ರೀಕರಿಸಲಾಗಿದೆ. ಹೆಸರಾಂತ ಮ್ಯೂಸಿಕ್ ಸಂಸ್ಥೆಯೊಂದು ಹಾಡುಗಳು ಹಕ್ಕು ಖರೀದಿ ಮಾಡಿದ್ದು, ಶೀಘ್ರವೇ ಹಾಡುಗಳ ಬಿಡುಗಡೆ ಆಗಲಿದೆಯಂತೆ. ಸಿನಿಮಾದ ಪ್ರಮುಖಪಾತ್ರದಲ್ಲಿ ನಟಿಸಿರುವ ವೀರಣ್ಣ ಕೊರಳ್ಳಿ ಅವರು ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ. ಮುಂಜಾನೆ ಮಂಜು ಛಾಯಾಗ್ರಹಣ ಹಾಗೂ ಚಂದ್ರು, ಬಂಡೆ ಅವರ ಸಾಹಸ ನಿರ್ದೇಶನ ''ಬಂಡೆ ಸಾಹೇಬ್'' ಚಿತ್ರಕ್ಕಿದೆ.



# 45 ಚಿತ್ರದ ಟೀಸರ್ ರಿಲೀಸ್‌ಗೆ ದಿನಾಂಕ ಫಿಕ್ಸ್

ನಟ ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ. ಶೆಟ್ಟಿ '45' ಚಿತ್ರದಲ್ಲಿ ನಟಿಸುತ್ತಿದ್ದಾರೆ ಎಂದಾಗಲೇ ಕುತೂಹಲ ಹೆಚ್ಚಿತ್ತು. ಸಂಗೀತ ಸಂಯೋಜಕ ಅರ್ಜುನ್ ಜನ್ಯ ಅವರು ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಈ ಸಿನಿಮಾ ಯಾವ ರೀತಿಯಲ್ಲಿ ಇರಲಿದೆ ಎಂಬ ಕುತೂಹಲ ಅಭಿಮಾನಿಗಳಲ್ಲಿ ಇದೆ. ಅದಕ್ಕೆ ಕೊನೆಗೂ ಉತ್ತರ ಸಿಗುವ ಸಮಯ ಬಂದಿದೆ. ಹೌದು, ಯುಗಾದಿ ಪ್ರಯುಕ್ತ ಮಾರ್ಚ್ 30ರಂದು '45' ಚಿತ್ರದ ಟೀಸರ್ ರಿಲೀಸ್ ಆಗಲಿದೆ.

ಈವರೆಗೆ '45' ಚಿತ್ರದ ವಿವಿಧ ಪೋಸ್ಟರ್‌ಗಳು ರಿಲೀಸ್ ಆಗಿವೆ. ಎಲ್ಲರ ಅವತಾರವೂ ಭಿನ್ನವಾಗಿದೆ. ಇದರಲ್ಲಿ ವಿಲನ್ ಯಾರು, ಹೀರೋ ಯಾರು ಎಂಬಿತ್ಯಾದಿ ಡಾಟ್‌ಗಳನ್ನು ಸೇರಿಸಲು ಪ್ರೇಕ್ಷಕ ವಿಫಲನಾಗುತ್ತಿದ್ದಾನೆ. ಈಗ ರಿಲೀಸ್ ಆಗುವ ಟೀಸರ್ ಮೂಲಕ ಚಿತ್ರದ ಬಗ್ಗೆ ಒಂದಷ್ಟು ಮಾಹಿತಿಯನ್ನು ಪ್ರೇಕ್ಷಕ ತಿಳಿದುಕೊಳ್ಳಬಹುದು.



ಇದಕ್ಕಾಗಿ ಮಾರ್ಚ್ 30ರವರೆಗೆ ಕಾಯಬೇಕಿದೆ.

ಹಬ್ಬ-ಹರಿದಿನ ಬಂದಾಗ ಸಿನಿಮಾ ತಂಡಗಳು ಅಭಿಮಾನಿಗಳಿಗೆ ಒಂದಷ್ಟು ಅಪ್‌ಡೇಟ್ ನೀಡುತ್ತವೆ. ಅದೇ ರೀತಿ, ಯುಗಾದಿ ದಿನ ಸಂಜೆ 6.45ಕ್ಕೆ '45' ಚಿತ್ರದ ಟೀಸರ್ ಬರಲಿದೆ. ಈ ಬಗ್ಗೆ ತಂಡದ ಕಡೆಯಿಂದ ಮಾಹಿತಿ ಹೊರ ಬಿದ್ದಿದೆ. ಅರ್ಜುನ್ ಜನ್ಯ ಅವರಿಗೆ ಇದು ನಿರ್ದೇಶನದಲ್ಲಿ ಮೊದಲ ಅನುಭವ. ಸಂಗೀತದ ಮೂಲಕ ಮೋಡಿ ಮಾಡಿದ ಅವರು, ಈಗ ಸಿನಿಮಾ ನಿರ್ದೇಶನದಲ್ಲಿ ಯಾವ ರೀತಿಯಲ್ಲಿ ಕೈ ಚಳಕ ತೋರಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ಎಂ. ರಮೇಶ್ ರೆಡ್ಡಿ ಅವರು ತಮ್ಮ 'ಸೂರಜ್ ಪ್ರೊಡಕ್ಷನ್' ಬ್ಯಾನರ್ ಅಡಿಯಲ್ಲಿ '45' ಚಿತ್ರ ನಿರ್ಮಾಣ ಮಾಡಿದ್ದಾರೆ. ಶಿವರಾಜಕುಮಾರ್, ಉಪೇಂದ್ರ, ರಾಜ್ ಬಿ ಶೆಟ್ಟಿ ಚಿತ್ರದಲ್ಲಿ ನಟಿಸುತ್ತಿರುವುದೇ ವಿಶೇಷ. ಈ ಚಿತ್ರದಲ್ಲಿ ನುರಿತ ತಂತ್ರಜ್ಞರ ಜತೆಗೆ ಹಾಲಿವುಡ್‌ನ ಪ್ರಸಿದ್ಧ ತಂತ್ರಜ್ಞರು ಕಾರ್ಯ ನಿರ್ವಹಿಸಿದ್ದಾರೆ ಅನ್ನೋದು ವಿಶೇಷ. ಈ ಸಿನಿಮಾ ಈ ವರ್ಷ ಆಗಸ್ಟ್ 15ರಂದು ತೆರೆಗೆ ಬರಲಿದೆ.

# ದೇವಾಲಯದಲ್ಲಿ ದರ್ಶನ್, ಶತ್ರು ಸಂಹಾರಕ್ಕಾಗಿ ಪೂಜೆ

ರೇಣುಕಾ ಸ್ವಾಮಿ ಕೊಲೆ ಆರೋಪಿ ದರ್ಶನ್ ಇತ್ತೀಚೆಗಷ್ಟೆ ಮತ್ತೆ ಸಿನಿಮಾ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದಾರೆ. ತಾವು ಜೈಲಿಗೆ ಹೋದ ಕಾರಣದಿಂದ ನಿಂತು ಹೋಗಿದ್ದ 'ಡೆವಿಲ್' ಸಿನಿಮಾದ ಚಿತ್ರೀಕರಣವನ್ನು ಇತ್ತೀಚೆಗಷ್ಟೆ ಪುನಃ ಪ್ರಾರಂಭಿಸಿದ್ದಾರೆ. ಇದರ ನಡುವೆ ತಮ್ಮ ಇತ್ತೀಚೆಗಿನ ಸಂಕಷ್ಟಗಳಿಂದ ಪಾರು ಮಾಡುವಂತೆ ದೇವರ ಮೊರೆಯನ್ನು ಹೋಗಿದ್ದಾರೆ ನಟ ದರ್ಶನ್, ಮಾತ್ರವೇ ಅಲ್ಲದೆ ತಮ್ಮ ಶತ್ರುಗಳ ವಿನಾಶವಾಗಲೆಂದು ವಿಶೇಷ ದೇವಾಲಯವೊಂದರಲ್ಲಿ ಪೂಜೆ ಸಹ ಮಾಡಿಸಿದ್ದಾರೆ ಎನ್ನಲಾಗುತ್ತಿದೆ.



ನಟ ದರ್ಶನ್, ಪತ್ನಿ ವಿಜಯಲಕ್ಷ್ಮಿ, ಮಗ ವಿನೀತ್ ಹಾಗೂ ಧನ್ವೀರ್ ಗೌಡ ಅವರುಗಳ ಜೊತೆಯಲ್ಲಿ ಕೇರಳದ ಕಣ್ಣೂರಿನ ಪ್ರಸಿದ್ಧ ಮಾಡಾಯಿಕಾವು ಶ್ರೀಭಗವತೀ ದೇವಸ್ಥಾನಕ್ಕೆ ಭೇಟಿ ನೀಡಿದ್ದಾರೆ. ಈ ದೇವಾಲಯವು ಶತ್ರು ಸಂಹಾರ ಹೋಮಕ್ಕೆ ಬಹಳ ಪ್ರಸಿದ್ಧಿ ಪಡೆದಿದೆ. ಇದೀಗ ದರ್ಶನ್ ಅವರು ಕುಟುಂಬ ಸಮೇತ ಇಲ್ಲಿಗೆ ಬಂದಿರುವುದು ಸಹ ಶತ್ರು ಸಂಹಾರ ಹೋಮಕ್ಕಾಗಿಯೇ ಎನ್ನಲಾಗುತ್ತಿದೆ. ಈ ದೇವಾಲಯದಲ್ಲಿ ಹಲವಾರು ರಾಜಕಾರಣಿಗಳು, ಉದ್ಯಮಿಗಳು ಸಹ ವಿಶೇಷ ಪೂಜೆಗಳನ್ನು ಸಲ್ಲಿಸುತ್ತಿರುತ್ತಾರೆ.

ದರ್ಶನ್ ಇದೀಗ ಭೇಟಿ ನೀಡಿರುವ ಶ್ರೀಭಗವತೀ ದೇವಸ್ಥಾನ ಹಲವು ವಿಶೇಷತೆಗಳನ್ನು ಹೊಂದಿದೆ. ಇಲ್ಲಿ ಪಾರ್ವತಿ ರುದ್ರಕಾಳಿಯ ಅವತಾರದಲ್ಲಿ ಸಂಚರಿಸುತ್ತಾಳೆ ಎಂಬ ನಂಬುಗೆ ಇದೆ. ಹಾಗಾಗಿ ರಾತ್ರಿ ಎಂಟ ಗಂಟೆ ಮೇಲೆ ಪೂಜಾರಿಗಳ ಹೊರತಾಗಿ ಇನ್ಯಾರು ಸಹ ಇಲ್ಲಿ ಇರುವಂತಿಲ್ಲ. ಮಾತ್ರವಲ್ಲದೆ ಇಲ್ಲಿ ಪೂಜೆ ಮಾಡುವವರಿಗೆ ಮಾಂಸವನ್ನು ಪ್ರಸಾದವನ್ನಾಗಿ ನೀಡಲಾಗುತ್ತದೆ. ಇಲ್ಲಿ ಪೂಜೆ ಮಾಡುವ ಕೆಲ ಬ್ರಾಹ್ಮಣರು ಸಹ ಮಾಂಸಾಹಾರವನ್ನು ಪ್ರಸಾದವಾಗಿ ಸ್ವೀಕರಿಸುತ್ತಾರೆ ಎಂಬ ಮಾತುಗಳಿವೆ.

ಈ ದೇವಾಲಯದಲ್ಲಿ ಎಂಟು ರೀತಿಯ ಪೂಜೆಗಳನ್ನು ಮಾಡಲಾಗುತ್ತದೆ. ಶತ್ರು ಸಂಹಾರ ಪೂಜೆ ಬಹಳ ವಿಶೇಷವಾದುದು. ಈ ಪೂಜೆಯನ್ನು ಮಧ್ಯಾಹ್ನ 12 ಗಂಟೆ ಹಾಗೂ ಸಂಜೆ 6 ಗಂಟೆಯ ನಡುವೆ ಈ ಪೂಜೆಯನ್ನು ಮಾಡಿಸಲಾಗುತ್ತದೆ. ಈ ವೇಳೆ ಪೂಜೆ ಮಾಡಿಸುವವರ ಹೊರತಾಗಿ ಇನ್ಯಾರೂ ಸಹ ದೇವಾಲಯದಲ್ಲಿ ಇರುವಂತಿಲ್ಲ. ಈ ಪೂಜೆಗಳು ಬಹಳ ಗೌಪ್ಯವಾಗಿ ನಡೆಯುತ್ತವೆಯಂತೆ.

ಇದೀಗ ನಟ ದರ್ಶನ್ ಈ ದೇವಾಲಯಕ್ಕೆ ಕುಟುಂಬ ಸಮೇತರಾಗಿ ಭೇಟಿ ನೀಡಿರುವುದು ಸಹಜವಾಗಿಯೇ ಕುತೂಹಲ ಕೆರಳಿಸಿದೆ. ದರ್ಶನ್, ತಮ್ಮ ಶತ್ರುಗಳ ವಿರುದ್ಧ ಜಯ ಕಾಣಲೆಂದು, ಶತ್ರು ಕಾಟ ನಿವಾರಣೆಗಾಗಿ ಈ ದೇವಾಲಯಕ್ಕೆ ಭೇಟಿ ನೀಡಿದ್ದಾರೆ. ಅವರ ಇಚ್ಛೆ ಈಡೇರುತ್ತದೆಯೇ ಕಾದು ನೋಡಬೇಕಿದೆ.

# ಟಾಕ್ಸಿಕ್ ಸಿನಿಮಾ ರಿಲೀಸ್ ದಿನಾಂಕ ಘೋಷಿಸಿದ ಯಶ್

ರಾಕಿಂಗ್ ಸ್ಟಾರ್ ಯಶ್ ಅಭಿನಯದ ಬಹುನಿರೀಕ್ಷಿತ ಟಾಕ್ಸಿಕ್ ಚಿತ್ರದ ಬದಲಾದ ರಿಲೀಸ್ ದಿನಾಂಕ ಘೋಷಣೆಯಾಗಿದೆ. ಮುಂದಿನ ವರ್ಷ (2026) ಮಾ.19 ಕ್ಕೆ ಟಾಕ್ಸಿಕ್ ಸಿನಿಮಾ ತೆರೆಗೆ ಬರಲಿದೆ.

ಈ ಮೊದಲು ಇದೇ ಏ.10 ಕ್ಕೆ ರಿಲೀಸ್ ಡೇಟ್‌ನ್ನು ಯಶ್ ಘೋಷಿಸಿದ್ದರು. ಫಸ್ಟ್ ಲುಕ್ ಟೀಸರ್‌ನಲ್ಲೇ ರಿಲೀಸ್ ಡೇಟ್ ಅನೌನ್ಸ್ ಮಾಡಿದ್ದರು. ಆದರೆ, ಟಾಕ್ಸಿಕ್ ವೀಕ್ಷಿಸಲು ಇನ್ನೊಂದು ವರ್ಷ ಕಾಯಬೇಕು.

ಏಕಕಾಲದಲ್ಲಿ ಇಂಗ್ಲಿಷ್ ಹಾಗೂ ಕನ್ನಡ ಭಾಷೆಯ ಟಾಕ್ಸಿಕ್ ತಯಾರಾಗುತ್ತಿದ್ದು, ಬೇರೆ ಬೇರೆ ಭಾಷೆಗಳಲ್ಲೂ ಬರ್ತಿದೆ. ಯಶ್ ನಟನೆ, ಗೀತು ಮೋಹನ್‌ದಾಸ್ ನಿರ್ಮಾಣ ಸಿನಿಮಾವನ್ನು ನೋಡಲು ಫ್ಯಾನ್ಸ್ ಕಾತರದಿಂದ ಕಾಯ್ತಿದ್ದಾರೆ. ಯಶ್ ಹಾಗೂ ಕೆವಿಎನ್ ಫಿಲಂಸ್ ನಿರ್ಮಾಣದ ಸಿನಿಮಾ ಇದಾಗಿದೆ.



# ಕೊಹ್ಲಿ, ಸಾಲ್ಟ್ ಫಿಫ್ಟಿ ಆಟ

## 7 ವಿಕೆಟ್ ಜಯದೊಂದಿಗೆ ಆರ್‌ಸಿಬಿಗೆ ಶುಭಾರಂಭ

ಫಿಲ್ ಸಾಲ್ಟ್, ವಿರಾಟ್ ಕೊಹ್ಲಿ ಆಕರ್ಷಕ ಅರ್ಧಶತಕ ನೆರವಿನಿಂದ ಆರ್‌ಸಿಬಿ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಐಪಿಎಲ್ 2025ರಲ್ಲಿ ಆರ್‌ಸಿಬಿ ಶುಭಾರಂಭ ಪಡೆದಿದೆ. ತವರಲ್ಲೇ ಕೋಲ್ಕತ್ತಾ ನೈಟ್ ರೈಡರ್ಸ್ ಮುಖಭಂಗ ಅನುಭವಿಸಿದೆ.

ಟಾಸ್ ಗೆದ್ದ ಆರ್‌ಸಿಬಿ ನಾಯಕ ರಜತ್ ಪಾಟೀದಾರ್ ಫೀಲ್ಡಿಂಗ್ ಆಯ್ದುಕೊಂಡರು. ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ 8 ವಿಕೆಟ್ ನಷ್ಟಕ್ಕೆ 174 ರನ್ ಗಳಿಸಿತು. 175 ರನ್‌ಗಳ ಗುರಿ ಬೆನ್ನತ್ತಿದ ಆರ್‌ಸಿಬಿ 3 ವಿಕೆಟ್ ನಷ್ಟಕ್ಕೆ 16.2 ಓವರ್‌ಗಳಿಗೆ 177 ರನ್ ಗಳಿಸಿ ಗೆದ್ದು ಬೀಗಿತು.



ಮೊದಲು ಬ್ಯಾಟ್ ಮಾಡಿದ ಕೆಕೆಆರ್ ಮೊದಲ ಓವರ್‌ನಲ್ಲೇ ಕ್ವಿಂಟನ್ ಡಿಕಾಕ್ (4) ವಿಕೆಟ್ ಕಳೆದುಕೊಂಡು ಆಘಾತ ಎದುರಿಸಿತು. ಈ ವೇಳೆ ಜೊತೆಯಾದ ಸುನಿಲ್ ನರೈನ್ ಮತ್ತು ಅಜಿಂಕ್ಯಾ ರಹಾನೆ ಬಿರುಸಿನ ಆಟದ ಮೂಲಕ ಗಮನ ಸೆಳೆದರು. ಆರ್‌ಸಿಬಿ ಬೌಲರ್‌ಗಳ ಬೆವರಿಳಿಸಿದ ರಹಾನೆ ಕೇವಲ 25 ಬಾಲ್‌ಗಳಿಗೆ ಫಿಫ್ಟಿ ಬಾರಿಸಿ ಅಬ್ಬರಿಸಿದರು.

ಇತ್ತ ಅಜಿಂಕ್ಯಾ 31 ಎಸೆತಕ್ಕೆ 56 ರನ್ (6 ಫೋರ್, 4 ಸಿಕ್ಸರ್) ಗಳಿಸಿದ್ದರು. ಅತ್ತ ನರೈನ್ 26 ಬಾಲ್‌ಗೆ 44 ರನ್ (5 ಫೋರ್, 3 ಸಿಕ್ಸರ್) ಬಾರಿಸಿದ್ದರು. ರಹಾನೆ ಮತ್ತು ನರೈನ್ ಶತಕದ ಜೊತೆಯಾಟ ಆರ್‌ಸಿಬಿಗೆ ನುಂಗಲಾರದ ತುತ್ತಾಗಿತ್ತು. ಈ ವೇಳೆ ರಶಿಕ್ ಸಲಾಮ್ ಬೌಲಿಂಗ್‌ನಲ್ಲಿ ನರೈನ್ ಕ್ಯಾಚ್ ನೀಡಿ ನಿರ್ಗಮಿಸಿದರು. ಸ್ಪಿನ್ ಜಾದು ಮಾಡಿದ ಕೃಣಾಲ್ ಪಾಂಡ್ಯ, ಕೆಕೆಆರ್ ಓಟಕ್ಕೆ ಬ್ರೇಕ್ ಹಾಕಿದರು. ಪ್ರಮುಖ ಬ್ಯಾಟರ್‌ಗಳಾದ ವೆಂಕಟೇಶ್ ಅಯ್ಯರ್ (6), ರಿಂಕು ಸಿಂಗ್ (12) ಇಬ್ಬರನ್ನೂ ಹೊರಹಾಕುವಲ್ಲಿ ಯಶಸ್ವಿಯಾದರು.

ಅಂಗ್‌ಕ್ರಿಶ್ ರಘುವಂಶಿ (30) ರನ್ ಗಳಿಸಿ ಕೆಕೆಆರ್ ಸವಾಲಿನ ಮೊತ್ತ ಪೇರಿಸಲು ಸಹಕಾರಿಯಾದರು. ಕೊನೆಗೆ ಆರ್‌ಸಿಬಿ ಬೌಲರ್‌ಗಳ ಪರಾಕ್ರಮ ಮುಂದುವರಿದು 174 ರನ್‌ಗಳಿಗೆ ಕೆಕೆಆರ್ ಅನ್ನು ಕಟ್ಟಿಹಾಕಿದರು.

ಆರ್‌ಸಿಬಿ ಪರ ಕೃಣಾಲ್ ಪಾಂಡ್ಯ ಉತ್ತಮ ಬೌಲಿಂಗ್ ಪ್ರದರ್ಶನ ತೋರಿ 3 ವಿಕೆಟ್ ಕಿತ್ತು. ಜೋಶ್ ಹ್ಯಾಜಲ್‌ವುಡ್ ಕೂಡ ಕಡಿಮೆ ರನ್ ಕೊಟ್ಟು 2 ವಿಕೆಟ್ ಕಬಳಿಸಿ ಗಮನ ಸೆಳೆದರು. ಇನ್ನು ಯಶ್ ದಯಾಳ್, ರಶಿಕ್ ಸಲಾಮ್, ಸುಯೇಶ್ ಶರ್ಮಾ ತಲಾ 1 ವಿಕೆಟ್ ಕಿತ್ತರು.

175 ರನ್ ಗುರಿ ಬೆನ್ನತ್ತಿದ ಆರ್‌ಸಿಬಿ ಆರಂಭದಲ್ಲೇ ಅಬ್ಬರಿಸಿತು. ಓಪನರ್‌ಗಳಾಗಿ ಕಣಕ್ಕಿಳಿದ ಫಿಲ್ ಸಾಲ್ಟ್ ಮತ್ತು ವಿರಾಟ್ ಕೊಹ್ಲಿ ಜೊತೆಯಾಟ ತಂಡದ ಭದ್ರಬುನಾದಿ ಹಾಕಿಕೊಟ್ಟಿತು. ಇಬ್ಬರು ಕೂಡ ಅರ್ಧಶತಕ ಸಿಡಿಸಿ ಮಿಂಚಿದರು. ಸಾಲ್ಟ್ 31 ಬಾಲ್‌ಗೆ 56 ರನ್ (9 ಫೋರ್, 2 ಸಿಕ್ಸರ್) ಹಾಗೂ ಕೊಹ್ಲಿ 36 ಬಾಲ್‌ಗೆ 56 ರನ್ (4 ಫೋರ್, 3 ಸಿಕ್ಸರ್) ಬಾರಿಸಿದರು.

ಹೊಸ ನಾಯಕನಾಗಿ ಬಂದ ರಜತ್ ಪಾಟೀದಾರ್ ಕೂಡ ಜವಾಬ್ದಾರಿಯುತ (34 ರನ್, 16 ಬಾಲ್, 5 ಫೋರ್, 1 ಸಿಕ್ಸರ್) ಆಟ ಆಡಿದರು. ದೇವದತ್ ಪಡಿಕಲ್ (10), ಲಿಯಾಮ್ ಲಿವಿಂಗ್ ಸ್ಟೋನ್ 15 ರನ್ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು.

# ಶಾರುಖ್ ಮಾತು, ಶ್ರೇಯಾ ಹಾಡು, ದಿಶಾ ಡ್ಯಾನ್ಸ್‌ಗೆ ಫ್ಯಾನ್ಸ್ ಫಿದಾ

ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ಐಪಿಎಲ್ 2025ಕ್ಕೆ ಗ್ರ್ಯಾಂಡ್ ವೆಲ್‌ಕಮ್ ಸಿಕ್ಕಿದೆ. ಬಾಲಿವುಡ್ ಸೂಪರ್‌ಸ್ಟಾರ್ ಶಾರುಖ್ ಖಾನ್ ಅದ್ಭುತ ಭಾಷಣದೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಗಾಯಕಿ ಶ್ರೇಯಾ ಘೋಷಾಲ್ ತಮ್ಮ ಸುಮಧುರ ಧ್ವನಿಯಿಂದ ಅಭಿಮಾನಿಗಳನ್ನು ಮೋಡಿ ಮಾಡಿದರು. ಬಾಲಿವುಡ್ ನಟಿ ದಿಶಾ ಪಟಾನಿ ತಮ್ಮ ಅದ್ಭುತ ನೃತ್ಯದಿಂದ ಅಭಿಮಾನಿಗಳ ಹೃದಯಕ್ಕೆ ಲಗ್ಗೆಯಿಟ್ಟರು. ಪಂಜಾಬಿ ಗಾಯಕ ಕರಣ್ ಔಜ್ಲಾ ಗಾಯನದ ಮೂಲಕ ಗಮನ ಸೆಳೆದರು.

ಬಾಲಿವುಡ್ ಸೂಪರ್‌ಸ್ಟಾರ್ ಶಾರುಖ್ ಖಾನ್ ಅದ್ಭುತ ಭಾಷಣದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ಸಿಕ್ಕಿತು. ಗಾಯಕಿ ಶ್ರೇಯಾ ಘೋಷಾಲ್ ತನ್ನ ಮಧುರ ಕಂಠದಿಂದ ಗಾಯನದ ಮೂಲಕ ಕಾರ್ಯಕ್ರಮಕ್ಕೆ ಮೆರುಗು ತಂದುಕೊಟ್ಟರು.



ಶ್ರೇಯಾ ಅವರ ಮೆಲೋಡಿ ಗಾಯನಕ್ಕೆ ಫ್ಯಾನ್ಸ್ ಫಿದಾ ಆದರು.

ಶ್ರೇಯಾ ಘೋಷಾಲ್ ಅವರ ಪ್ರದರ್ಶನದ ನಂತರ ಬಾಲಿವುಡ್ ನಟಿ ದಿಶಾ ಪಟಾನಿ ಮನಮೋಹಕ ನೃತ್ಯದ ಮೂಲಕ ಗಮನ ಸೆಳೆದರು. ಬೆಳ್ಳಿ ಉಡುಪಿನಲ್ಲಿ ಕಂಗೊಳಿಸಿದ ದಿಶಾ ತಮ್ಮ ಹಾಟ್ ನೃತ್ಯದ ಮೂಲಕ ವೇದಿಕೆಯನ್ನು ರಂಗೇರಿಸಿದರು.

ಶ್ರೇಯಾ ಘೋಷಾಲ್ ಅವರು 'ವಂದೇ ಮಾತರಂ', 'ಮೇರೆ ಢೋಲ್ನಾ', 'ಕರ್ ಹರ್ ಮೈದಾನ್ ಫತೇ', 'ಘೂಮರ್' ಹಾಡಿದಾಗ ಅಭಿಮಾನಿಗಳು ಸಹ ಜೊತೆಯಲ್ಲಿ ಹಾಡುತ್ತಾರೆ. ಪುಷ್ಪಾ 2 ಸಿನಿಮಾದ ಫೇಮಸ್ 'ಸಾಮಿ ಸಾಮಿ' ಹಾಡು ಕೇಳುತ್ತಿದ್ದಂತೆ ಫ್ಯಾನ್ಸ್ ರೋಮಾಂಚಿತರಾಗಿ ಕೂಗುತ್ತಾರೆ. ಈ ಹಾಡಿನ ಸಂದರ್ಭದಲ್ಲಿ ವಾದನಗಳ ಶಬ್ದಕ್ಕೆ ಶ್ರೇಯಾ ಮಧುರ ಧ್ವನಿ ಸರಿಯಾಗಿ ಕೇಳುವುದಿಲ್ಲ. ಇದು ಸೋಷಿಯಲ್ ಮೀಡಿಯಾದಲ್ಲಿ ಚರ್ಚೆಗೆ ಕಾರಣವಾಯಿತು.

**ಶಾರೂಖ್ ಜೊತೆ ಹೆಜ್ಜೆ ಹಾಕಿದ ವಿರಾಟ್:** ಶಾರುಖ್ ರಿಂಕು ಸಿಂಗ್ ಮತ್ತು ವಿರಾಟ್ ಕೊಹ್ಲಿಯನ್ನು ವೇದಿಕೆಯ ಮೇಲೆ ಕರೆದು ಇಬ್ಬರೊಂದಿಗೆ ಹಾಡುಗಳಿಗೆ ನೃತ್ಯ ಮಾಡಿದರು. ವಿರಾಟ್ ಮತ್ತು ಶಾರುಖ್ 'ಜೂಮ್ ಜೋ ಪಠಾಣ್' ಹಾಡಿಗೆ ಒಟ್ಟಿಗೆ ನೃತ್ಯ ಮಾಡಿದ್ದು, ವೇದಿಕೆಗೆ ಮತ್ತಷ್ಟು ರಂಗು ನೀಡಿತು.

## ಸರ್ಕಾರಿ ಶಾಲೆಯಲ್ಲಿ ಮಾತೃ ಪೂಜಾ ವಂದನ ಕಾರ್ಯಕ್ರಮ

# ಸರ್ಕಾರದ ಸವಲತ್ತು ಬಳಸಿ ಪ್ರಗತಿ ಸಾಧಿಸಿ

**ಮಾಲೂರು:** ತಾಲೂಕಿನ ನಂಬಿಗಾನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾತೃ ಪೂಜಾ ವಂದನ ಕಾರ್ಯಕ್ರಮ ಹಾಗೂ ಸರಸ್ವತಿ ಪೂಜೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು

ಈ ಸಂದರ್ಭದಲ್ಲಿ ತಾಲ್ಲೂಕು ಎಸ್.ಡಿ.ಎಂ.ಸಿ ಅಧ್ಯಕ್ಷ ಮೂರ್ತಿ ಎಂ.ಸಿ ಮಾತನಾಡಿ ಸರ್ಕಾರಿ ಶಾಲೆಗಳು ಉತ್ತಮವಾಗಿ ಅಭಿವೃದ್ಧಿಯಾಗ ಬೇಕಾದರೆ ಎಸ್.ಡಿ.ಎಂ.ಸಿ. ಮತ್ತು ಪೋಷಕ ಹಾಗೂ ಶಿಕ್ಷಕರ ಬಾಂಧವ್ಯ ಉತ್ತಮವಾಗಿದ್ದಲ್ಲಿ ಶಾಲೆ ಹಾಗೂ ಮಕ್ಕಳ ಶೈಕ್ಷಣಿಕ ಪ್ರಗತಿ ಉತ್ತಮವಾಗಿ ರುತ್ತದೆ. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಸಮಾಜದಲ್ಲಿ ವ್ಯಾಸಂಗದ ದಿನಗಳಲ್ಲಿ ಸರ್ಕಾರ ನೀಡುವ ಸವಲತ್ತುಗಳು ಹಾಗೂ ಸಂಘ ಸಂಸ್ಥೆಗಳು ನೀಡುವ ಸವಲತ್ತುಗಳನ್ನು ಬಳಸಿಕೊಂಡು ಅಂದಿನ ಪಾಠ ಅಂದೆ ಓದಿಕೊಳ್ಳುವ ಮೂಲಕ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡು ಪರೀಕ್ಷೆಗಳಲ್ಲಿ ಉತ್ತಮ ರೀತಿಯಲ್ಲಿ ಬರೆಯುವದರ ಮೂಲಕ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಿ ಮುಂದಿನ ತರಗತಿಗಳಿಗೆ ತೇರ್ಗಡೆಯಾಗುವಂತೆ ಹೇಳಿದರು

ಗ್ರಾಮದ ಮುಖಂಡ ರಾಧಾಕೃಷ್ಣಪ್ಪ ಮಾತನಾಡಿ ಶಾಲೆಯು ತಾಲೂಕು ಮಟ್ಟದಿಂದ ರಾಜ್ಯದ ಮಟ್ಟದವರೆಗೂ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿರುವುದು ನಮ್ಮ ಗ್ರಾಮಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಿದರು.



ಮುಖ್ಯ ಶಿಕ್ಷಕ ವೆಂಕಟರಮಣಪ್ಪ ಮಾತನಾಡಿ ಶಾಲೆಗೆ ತಾಯಂದಿರು ಬಂದು ಮಾತೃ ವಂದನ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಹೆಮ್ಮೆಯ ವಿಷಯವಾಗಿದೆ. ಮುಂದಿನ ದಿನಗಳಲ್ಲಿ ಈ ಶಾಲೆಯು ಶೈಕ್ಷಣಿಕ ಅಭಿವೃದ್ಧಿಯಲ್ಲಿ ಕೀರ್ತಿಪತಾಕೆಯನ್ನು ಹಾರಿಸಲಿ ಎಂದು ತಿಳಿಸಿದರು.

ಎಂ ಎಸ್ ಕವಿತಾ ರವರು ಸ್ವಾಗತಿಸಿದರು. ಗ್ರಾಮ ಪಂಚಾಯತಿ ಸದಸ್ಯರಾದ ಮಂಜುಳಾ ನಾರಾಯಣಸ್ವಾಮಿ ಮಾಜಿ ಗ್ರಾಮ ಪಂಚಾಯತಿ ಸದಸ್ಯರಾದ ಪ್ರೇಮ ರಮೇಶ್ ಮಾಜಿ ಎಸ್‌ಡಿಎಂಸಿ ಅಧ್ಯಕ್ಷ ಪುಂಡರೀಕ್ ಎಸ್ ಡಿ ಎಮ್ ಸಿ ಉಪಾಧ್ಯಕ್ಷೆ ಅರುಣ ಪುಷ್ಪ ತಾಲೂಕು ಉಪಾಧ್ಯಕ್ಷೆ ಎಸ್ ಡಿ ಎಂ ಸಿ ಅಂಗನವಾಡಿ ಕಾರ್ಯಕರ್ತೆ ಉಷಾ ಅಡಿಗೆ ಮಾತೆಯರು ಗ್ರಾಮದ ಮುಖಂಡರು ಪೋಷಕರು ಭಾಗವಹಿಸಿದ್ದರು. ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರು ಮತ್ತು ಸದಸ್ಯರು ಹಾಜರಿದ್ದರು

ಫೋಟೋ ಮಾಲೂರು ತಾಲೂಕಿನ ನಂಬಿಗನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾತೃ ಪೂಜಾ ವಂದನ ಕಾರ್ಯಕ್ರಮ ಹಾಗೂ ಸರಸ್ವತಿ ಪೂಜೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು

# ನಕಲಿ ಅಭ್ಯರ್ಥಿಗಳ ಪತ್ತೆಗೆ ಹೊಸ ಪ್ರಯತ್ನ, ಪ್ರಯೋಗಾರ್ಥ ಯಶಸ್ಸು: ಕೆಇಎ

**ಬೆಂಗಳೂರು:** ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಎಂಜಿನಿಯರಿಂಗ್ ತಂಡವು ಸ್ವತಃ ಸಿದ್ಧಪಡಿಸಿದ ಎಐ ತಾಂತ್ರಿಕತೆಯ ಮೊಬೈಲ್ ಆಧರಿತ ಅಭ್ಯರ್ಥಿ ದೃಢೀಕರಣ (ಮೊಬೈಲ್-ಬೇಸ್ಡ್ ಕ್ಯಾಂಡಿಡೇಟ್ ಅಥೆಂಟಿಕೇಷನ್) ವ್ಯವಸ್ಥೆಯನ್ನು ಶನಿವಾರ ನಡೆದ ನೇಮಕಾತಿ ಪರೀಕ್ಷೆಯಲ್ಲಿ ಮೊತ್ತಮೊದಲ ಬಾರಿಗೆ ಯಶಸ್ವಿಯಾಗಿ ಬಳಸಲಾಗಿದೆ. ಇದು, ನಕಲಿ ಅಭ್ಯರ್ಥಿಗಳು ಪರೀಕ್ಷೆ ಬರೆಯುವುದನ್ನು ಸಂಪೂರ್ಣವಾಗಿ ತೊಡೆದು ಹಾಕಲಿದೆ.

ವಿಧಾನ ಪರಿಷತ್‌ನಲ್ಲಿ ಖಾಲಿ ಇರುವ ಕಂಪ್ಯೂಟರ್ ಆಪರೇಟರ್ ಹಾಗೂ ಇನ್ನಿತರ ಹುದ್ದೆಗಳಿಗೆ ನಾಲ್ಕು ದಿನಗಳ ಪರೀಕ್ಷೆಯು ಶನಿವಾರ ಆರಂಭವಾಗಿದ್ದು, ಇದರಲ್ಲಿ ಕೆಇಎ ಎಂಜಿನಿಯರಿಂಗ್ ತಂಡದವರು ಅಭಿವೃದ್ಧಿಪಡಿಸಿರುವ ಈ ತಾಂತ್ರಿಕತೆಯನ್ನು ಪ್ರಯೋಗಾರ್ಥವಾಗಿ ಬಳಸಲಾಯಿತು. ಅಭ್ಯರ್ಥಿಗಳು ಪರೀಕ್ಷಾ ಕೊಠಡಿ ಪ್ರವೇಶಿಸುವಾಗ ಮೊಬೈಲ್ ಆಪ್ ಬಳಸಿ ಅವರ ಮುಖದ ಚಿತ್ರವನ್ನು ಸೆರೆ ಹಿಡಿಯಲಾಗುತ್ತದೆ. ಇದು, ತಕ್ಷಣವೇ ಕೆಇಎ ಸರ್ವರ್‌ಗೆ ಆನ್‌ಲೈನ್ ಮೂಲಕ ಸಂಪರ್ಕಗೊಂಡು ಅಭ್ಯರ್ಥಿಗಳು ಅರ್ಜಿ ಹಾಕುವ ಸಂದರ್ಭದಲ್ಲಿ ಹಾಕಿದ್ದ ಭಾವಚಿತ್ರದೊಂದಿಗೆ ತಾಳೆ ನೋಡಿ, ಅಭ್ಯರ್ಥಿಯ ನೈಜತೆಯನ್ನು ತತ್‌ಕ್ಷಣವೇ ದೃಢಪಡಿಸುತ್ತದೆ. ಇದರಿಂದ, ನಕಲಿ ಅಭ್ಯರ್ಥಿಗಳನ್ನು ಪರೀಕ್ಷಾ ಕೊಠಡಿ ಪ್ರವೇಶಿಸದಂತೆ ತಡೆಯಲು ಸಾಧ್ಯವಾಗುತ್ತದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಶನಿವಾರ ಬೆಳಿಗ್ಗೆ 74 ಅಭ್ಯರ್ಥಿಗಳು ಹಾಗೂ ಮಧ್ಯಾಹ್ನ 267 ಅಭ್ಯರ್ಥಿಗಳು ಪರೀಕ್ಷೆ ಬರೆದರು. ಈ ತಾಂತ್ರಿಕ ವ್ಯವಸ್ಥೆಯ ಮೊದಲ ದಿನದ ಪ್ರಯೋಗ ಯಶಸ್ವಿಯಾಗಿದ್ದು, ಇನ್ನು ಮುಂದೆ ಇತರ ಪರೀಕ್ಷೆಗಳಿಗೂ ಇದರ ಬಳಕೆಯನ್ನು ವಿಸ್ತರಿಸಲಾಗುವುದು ಎಂದು ಅವರು ಹೇಳಿದ್ದಾರೆ.

ವೆಬ್‌ಸೈಟ್‌ನಲ್ಲಿ ಓಎಂಆರ್ ಶೀಟ್

ಇಂದು ನಡೆದ ವಿಧಾನ ಪರಿಷತ್ತಿನ ನೇಮಕಾತಿ ಪರೀಕ್ಷೆ ಮುಗಿದ ತಕ್ಷಣವೇ ಅಭ್ಯರ್ಥಿಗಳ ಓಎಂಆರ್ ಶೀಟ್‌ಗಳನ್ನು ಕೆಇಎ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವ ಕೆಲಸವನ್ನೂ ಇದೇ ಮೊದಲು ಮಾಡಲಾಯಿತು. ಇದು ಪಾರದರ್ಶಕ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದ್ದು, ಯಾರು ಬೇಕಾದರೂ ಓಎಂಆರ್ ಶೀಟ್ ಗಳನ್ನು ನೋಡಬಹುದು. ಇದರಿಂದ ಅಕ್ರಮ/ಅನುಮಾನಗಳಿಗೆ ಅವಕಾಶವೇ ಇಲ್ಲದಂತಾಗಲಿದೆ ಎಂದು ಮಾಹಿತಿ ಹಂಚಿಕೊಂಡಿದ್ದಾರೆ.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com